ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಸೆಪ್ಟೆಂಬರ್ 26, 2012 ಪುಟ 20 ರೂ. 14/-

ಬೆಂಗಳೂರು ವಿವಿ ಅರಾಜಕತೆ ಅಧ್ವಾನಗಳ ತಾಣ



KSRTC ಮುಷ್ಕರ ಕಾರ್ಮಿಕ ದ್ರೋಹಿ




ಬಾಬಾ ಉಯಿಲು 1.50 ಲಕ್ಷ ಕೋಟಿ ಆಸ್ತಿ ಪತ್ತೆ



ಚಿನ್ನದ ಟಾಯ್ಲೆಟ್ ಇತ್ತು

...ಂಡೆ ಮಂಜನಿಗಾಗಿ ಬೇಟೆ ಶುರು!

ಕಂಟ್ರಿ ಕ್ಲಬ್ ಎಂಬ ಕಂತ್ರಿ ಕ್ಲಬ್



ಬೇಲೆಕೇರಿ ಕಳ್ಳರ ಕೊರಳಿಗೆ ಸಿಬಿಐ ಉರುಳು



ನಟಿ ನಯನಾಳ ಕಿಡ್ನ್ಯಾಪ್ ಕಥೆ



ಬಿಜೆಪಿ ರಿಯಲ್ ಎಸ್ಟೇಟ್ ಕಾಳಗ ಕೌನ್ಸಿಲರ್ ತೊಡೆ ತಟ್ಟಿದ ಶಾಸಕ ಕೊಲ್ತೀನಿ ಅಂದ



ಮೂಲತಃ ಕನ್ನಡಿಗರಾದ ಭಾಗೀರಥಿ ಹೆಗ್ಗೋಡಿನ ನೀನಾಸಂ ಸಂಸ್ಥೆಯಲ್ಲಿ ರಂಗಕಲೆ ಕಲಿತರಲ್ಲದೆ ಆನಂತರ ದೆಹಲಿಯಲ್ಲಿರುವ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಿಂದ ರಂಗಕಲೆಯಲ್ಲಿ ಪದವಿ ಪಡೆದರು. ಹಲವಾರು ಭಾಷೆಗಳಲ್ಲಿ ನಾಟಕ, ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ನಟಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಭಾಗೀರಥಿ ಅವರು ಕಳೆದ ಎರಡು ದಶಕಗಳಿಂದ ಅಸ್ಸಾಂನ ಗೌಹಾಟಿಯಲ್ಲಿ ತಮ್ಮ ಪತಿ ಬಾಹರೂಲ್ ಇಸ್ಲಮ್ ಮತ್ತು ಮಕ್ಕಳೊಂದಿಗೆ ವಾಸಿಸುತ್ತಿದ್ದಾರೆ. 'ಸೀಗಲ್' ಎಂಬ ರಂಗತಂಡವನ್ನು ಕಟ್ಟಿಕೊಂಡು ನಾಟಕಗಳಲ್ಲಿ ನಟಿಸಿದ್ದಾರಲ್ಲದೆ, ರಂಗಕಲೆಯಲ್ಲಿ ಹಲವಾರು ಜನರಿಗೆ ತರಬೇತಿಯನ್ನೂ ನೀಡುತ್ತಿದ್ದಾರೆ.
ಅಸ್ಸಾಂನ ಜಾತ್ಯತೀತ ಸಂಸ್ಕೃತಿ ಮತ್ತು ಪ್ರಸ್ತುತ ವಿದ್ಯಮಾನಗಳನ್ನು ಕುರಿತು ಭಾಗೀರಥಿ ಅವರು ಬರೆದಿರುವ ಮನಮುಟ್ಟುವ ಲೇಖನ ಇಲ್ಲಿದೆ.



ಭಾಗೀರಥಿ ಬಹರೂಲ್ ಇಸ್ಲಮ್ ಕುಟುಂಬ

ನಾ ಕಂಡ ಅಸ್ಸಾಂ

ಅಸ್ಸಾಂ ರಾಜ್ಯಕ್ಕೆ ನಾನು ಬಂದು ಇಪ್ಪತ್ತು ವರ್ಷ ಗಳಾದವು. ಅಸ್ಸಾಂ ರಾಜ್ಯವನ್ನು ನಾನು ಯಾವುದರ ಸಲುವಾಗಿ ಗೌರವಿಸುತ್ತಿದ್ದೆನೊ ಅದು ಇಂದು ಚೂರು ಚೂರು ಆಗುತ್ತಿದೆ ಎಂದೆನಿಸುತ್ತಿದೆ. ಭಾರೀ ಮಳೆಯಿಂದಾಗಿ ಪ್ರತಿ ವರ್ಷವೂ ಕಾಡುವ ಅತಿವೃಷ್ಟಿ, ಉಗ್ರ ಗುಂಪುಗಳು ಸಿಡಿಸುವ ಬಾಂಬ್‌ಗಳ ಭಯಂಕರ ಶಬ್ದ, ಅಲ್ಫಾ-ಉಲ್ಫಾ ಪಡೆಗಳ ನಡುವಿನ ಕಚ್ಚಾಟ, ಯಾವಾಗ ಬೇಕಾದರೂ ಕರೆಯಲ್ಪಡುವ ಅಸ್ಸಾಂ ಬಂದ್ - ಇವೆಲ್ಲವನ್ನು ಇಲ್ಲಿನ ಜನ ಅನುಭವಿಸುತ್ತಿದ್ದರೂ ಅವರಲ್ಲಿ ಆತ್ಮೀಯತೆಗೆ ಕೊರತೆ ಇರಲಿಲ್ಲ. ಹಾಗೆ ನೋಡಿದರೆ ಅಸ್ಸಾಂ ಯಾವ ಭೇದ-ಭಾವವೂ ಇಲ್ಲದ ಜಾತ್ಯತೀತ ರಾಜ್ಯವಾಗಿತ್ತು. ಅಂತರಧರ್ಮೀಯ ಮದುವೆ ಆಗಿರುವ ನನ್ನನ್ನು ಇಷ್ಟು ವರ್ಷಗಳಲ್ಲಿ ಎಂದೂ ಧಾರ್ಮಿಕ ಸಮಸ್ಯೆ ಕಾಡಿರಲಿಲ್ಲ. ಈ ಎಲ್ಲ ಕಾರಣಗಳಿಗಾಗಿ ಅಸ್ಸಾಂ ಎಂದರೆ ನನ್ನಲ್ಲಿ ಬಹಳ ಗೌರವ. ಇಂತಹ ರಾಜ್ಯವನ್ನು ಅದ್ಯಾವ ಗಳಿಗೆಯಲ್ಲಿ ಜಾತಿ-ಧರ್ಮ ಎಂಬ ವಿಷದ ಗಾಳಿ ತಟ್ಟಿತೊ...

ನನ್ನ ಗಂಡ ಇಸ್ಲಾಮಿಕ್ ಸಂಪ್ರದಾಯದಲ್ಲಿ ಬೆಳೆದವನು. ನಾನು ಹಿಂದೂ ಧರ್ಮಕ್ಕೆ ಸೇರಿದವಳು. ನಮ್ಮ ಗೌಹಾಟಿ ಮನೆಯಲ್ಲಿ ರಂಜಾನ್ ಹಬ್ಬವನ್ನು ಆಚರಿಸುತ್ತೇವೆ; ದೀಪಾವಳಿಯ ದೀಪವೂ ಬೆಳಗುತ್ತದೆ. ನಮ್ಮ ಮನೆಗೆ ಮಸೀದಿಯ ಮೌಲ್ವಿಗಳು ಬಂದು ಚಂದಾ ಪಡೆದು ಹೋಗುತ್ತಾರೆ. ದುರ್ಗಾ ಪೂಜೆಯ ಕಮಿಟಿಯವರೂ ಬಂದು ಚಂದಾ ಪಡೆದು ಪ್ರಸಾದ ಕೊಟ್ಟು ಹೋಗುತ್ತಾರೆ. ಮನೆಯುವರಾಗಲಿ, ಅಕ್ಕಪಕ್ಕದವರಾಗಲಿ, ಅಸ್ಸಾಂ ಸಮಾಜವಾಗಲಿ ಈ ಬಗ್ಗೆ ನಮ್ಮಿಬ್ಬರನ್ನು ಯಾವತ್ತೂ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ, ಎಲ್ಲರೂ ಎಲ್ಲರ ವ್ಯಕ್ತಿಗತ ಜೀವನವನ್ನು ಗೌರವಿಸುತ್ತಾರೆ. ಅಸ್ಸಾಂ ರಾಜ್ಯದಲ್ಲಿ ದೇವರನ್ನಾಗಲಿ, ಅಲ್ಲಾಹುನನ್ನಾಗಲಿ ಆರಾಧಿಸುವುದಕ್ಕೆ ಮೂರನೇ ವ್ಯಕ್ತಿಯ ಅನುಮತಿಯನ್ನು ನಾವು ಕೇಳುವ ಪ್ರಶ್ನೆಯೇ ಎದುರಾಗಿಲ್ಲ.

ಹೀಗೆ ಎಲ್ಲರೂ ಜೊತೆಜೊತೆಯಾಗಿ ಬಾಳುತ್ತಿದ್ದ ಅಸ್ಸಾಂನಲ್ಲಿ ಈಗ ಕೆಲವು ದಿನಗಳಿಂದ ಏಕೆ ಇಂತಹ ಪರಿಸ್ಥಿತಿ ಸೃಷ್ಟಿ ಆಗಿದೆ? ಬಹಳ ವರ್ಷಗಳಿಂದ ಕೊಕರಾಜರ, ದುಬುರಿ ಜಿಲ್ಲೆಗಳಲ್ಲಿ ಜೊತೆಜೊತೆಯಾಗಿ ವಾಸಿಸುತ್ತಿದ್ದ ಬೊಡೊ ಮತ್ತು ಮುಸ್ಲಿಮರ ನಡುವೆ ಈಗ ಯುದ್ಧ ನಡೆಯುತ್ತಿದೆ. ಯಾವ ಕಾರಣಕ್ಕೆ ಈ ಹಿಂಸಾತ್ಮಕ ಘಟನೆಗಳು ಆರಂಭವಾದವೋ ಗೊತ್ತಿಲ್ಲ. ಆದರೆ ಆ ಎರಡೂ ಸಮುದಾಯದವರು ಪರಸ್ಪರ ಹೊಡೆದಾಡುತ್ತಾ, ಮನೆ ಮನೆ ಸುಡುತ್ತಾ ಸಾವಿರಾರು ಜನ ನಿರಾಶ್ರಿತರಿಗಾಗಿ ತೆರೆದಿರುವ ಕ್ಯಾಂಪುಗಳಲ್ಲಿ ವಾಸ ಮಾಡುವಂತಾಗಿದೆ. ಅಷ್ಟೇ ಅಲ್ಲ, ಇವತ್ತು ಬೊಡೊ ಕ್ಯಾಂಪ್, ಮುಸಲ್ಮಾನರ ಕ್ಯಾಂಪ್ ಎಂದೂ ರಚನೆ ಆಗಿವೆ. ಆದರೆ ಈ ಎರಡೂ ಕ್ಯಾಂಪುಗಳಲ್ಲಿರುವ ಜನರ ಬವಣೆ ಮಾತ್ರ ಒಂದೇ ತೆರನಾದದ್ದು. ಈ ಕ್ಯಾಂಪುಗಳನ್ನು ತೆರೆದು ಹಲವಾರು ವಾರಗಳೇ ಆಗಿವೆ. ಮೈಮೇಲೆ ಬಟ್ಟೆ ಇಲ್ಲದೆ ಕೊಳಚೆಯಲ್ಲಿ ಆಟವಾಡುವ ಮಕ್ಕಳು, ಆಗತಾನೆ ಹುಟ್ಟಿರುವ ಕಂದಮ್ಮಗಳು, ಭಯ ತುಂಬಿರುವ ನಿರಾಶೆಯ ಕಣ್ಣುಗಳು....

ರಾಜಕೀಯ ಪಕ್ಷಗಳ ನಡುವಿನ ಮೇಲಾಟ, ಮಾಧ್ಯಮಗಳಲ್ಲಿ ಬುದ್ಧಿಜೀವಿಗಳ ಕಸರತ್ತು, ಕ್ಯಾಮರಾ ಎದುರಿಗೆ ಬಂದರೆ ಮತ್ತಷ್ಟು ಉಗ್ರ ರೂಪವನ್ನು ತೋರಿಸುವ ಚಟವಿರುವವರು... ಇವೆಲ್ಲ ಸೇರಿ ಭಯಂಕರ ಘಟನೆಗಳು ಮತ್ತೆ ಮತ್ತೆ ಮಾಧ್ಯಮಗಳಲ್ಲಿ ಪುನರಾವರ್ತನೆ ಆಗಿ ಜನರ ಉಸಿರುಗಟ್ಟಿಸುತ್ತಿವೆ. ಆದರೆ ನಿಜವಾಗಿ ಆಗಿದ್ದು ಏನು? ಇದರ ಹಿಂದೆ ಅಡಗಿರುವ ರಾಜಕೀಯವೇನು? ಎಂದು ಸಾಮಾನ್ಯ ಜನರಿಗೆ ಅರ್ಥವೇ ಆಗುತ್ತಿಲ್ಲ.

ಇಷ್ಟು ವರ್ಷಗಳ ಕಾಲ ನಾನು ಕಂಡಿದ್ದ ಅಸ್ಸಾಂ ಈಗ ಬಹಳ ಬದಲಾಗಿದೆ. ಇಪ್ಪತ್ತು ವರ್ಷಗಳ ಹಿಂದೆ ನಾನು ಇಲ್ಲಿಗೆ ಬಂದಾಗ ಯಾವ ದೊಡ್ಡ ಕಟ್ಟಡಗಳು ಇಲ್ಲಿರಲಿಲ್ಲ. ಸುತ್ತಲೂ ಹಸಿರಾದ ಗುಡ್ಡಗಳು ಆವರಿಸಿದ್ದ ಪ್ರದೇಶದಲ್ಲಿ ಪುಟ್ಟ-ಪುಟ್ಟ ಟಿನ್ನಿನ ಮನೆಗಳಿದ್ದವು. ಹಿಂದೂ ಮತ್ತು ಮುಸಲ್ಮಾನರ ಮನೆಗಳು ಅಕ್ಕಪಕ್ಕದಲ್ಲಿಯೇ ಇರುತ್ತಿದ್ದದ್ದನ್ನು ಕಂಡು ಆರಂಭದಲ್ಲಿ ನನಗೆ ಅಚ್ಚರಿ ಆಗಿತ್ತು.

ಬಿಹು ಹಬ್ಬ (ಕರ್ನಾಟಕದ ಸಂಕ್ರಾಂತಿ ಹಬ್ಬ ತರಹದ್ದು)ದದಿನ ನಮ್ಮ ಅಕ್ಕಪಕ್ಕದ ಮನೆಯವರೆಲ್ಲ ನಮ್ಮನ್ನು ಕರೆದು ಎಳ್ಳು-ಅಕ್ಕಿಯಿಂದ ಮಾಡಿದ ತಿಂಡಿ ಕೊಡುತ್ತಾರೆ. ಈದ್ ಬಂದರೆ ಎಲ್ಲರೂ ನಮ್ಮ ಮನೆಗೆ ಬಂದು ಮುಬಾರಕ್ ಹೇಳಿ ಚಿಕನ್ ಪಲಾವ್ ತಿಂದುಹೋಗುತ್ತಾರೆ.

ಎಲ್ಲರ ಮನೆಯ ಹೊರಾಂಗಣವೂ ಒಂದೇ ರೀತಿ. ಹೊರಗಿನಿಂದ ಆ ಮನೆಯಲ್ಲಿ ವಾಸಿಸುತ್ತಿರುವವರ ಜಾತಿ-ಧರ್ಮ ಯಾವುದು ಎಂದು ತಿಳಿಯುವುದಿಲ್ಲ. ಮಾತ್ರವಲ್ಲ ಯಾರು ಯಾವ ಧರ್ಮದವರು ಎಂಬುದನ್ನೂ ಅವರವರ ಹೆಸರಿನಿಂದಾಲಿ, ಸರ್‌ನೇಮ್‌ನಿಂದಾಗಲಿ ಎಂದು ಗುರುತಿಸುವುದೂ ಕಷ್ಟ. ಖ್ಯಾತ ಗಾಯಕರಾಗಿದ್ದ ಭೂಪೇನ್ ಹಜಾರಿಕ ದುಂ ಪಂಗಡಕ್ಕೆ ಸೇರಿದ್ದವರು. ಆದರೆ ಅನೂಪ್ ಹಜಾರಿಕ ಕ್ಷತ್ರಿಯ ಮತ್ತು ಅಸಾನ ಹಾಜರಿಕ ಮುಸ್ಲಿಮ್. ಹಾಗೆಯೇ ಬರುವ, ರಾಜಕುವ, ಸೈಕಿಯ, ಕೊಲಿತಾ... ಈ ಹೆಸರುಗಳು ಹಿಂದೂ, ಮುಸಲ್ಮಾನ್, ಸಿಖ್ ಯಾವ ಸಮುದಾಯದವರದ್ದಾದರೂ ಆಗಿರಬಹುದು. ಇಲ್ಲಿನ ಸರ್‌ನೇಮ್‌ಗಳು ಅವರ ಕಾರ್ಯವನ್ನು ಸೂಚಿಸುತ್ತಿವೆಯೇ ಹೊರತು ಅವರ ಜಾತಿಯನ್ನಲ್ಲ.

ಹಿಂದೆ ಅಸ್ಸಾಂ ರಾಜ್ಯದ ರಾಜನೊಬ್ಬ ಜನರ ಉದ್ಯಮವನ್ನಾಧರಿಸಿ ಇಂತಹ ವಿಭಾಗಗಳನ್ನು ಮಾಡಿದ್ದನಂತೆ. ಸಾವಿರ ಸೈನಿಕರ ನಾಯಕನಿಗೆ ಹಜಾರಿಕ ಎಂದೂ, ನೂರು ಸೈನಿಕರ ನಾಯಕನಿಗೆ ಸೈಕಿಯ ಎಂದೂ, ಅಡುಗೆಯ ಸಹಾಯಕನಿಗೆ ಬರುವ ಎಂತಲೂ ಹೆಸರಿಟ್ಟಿದ್ದನಂತೆ. ಅವುಗಳೆಲ್ಲ ಹಾಗೆ ಉಳಿದುಕೊಂಡು ಬಂದಿದ್ದವು. ಅಂದರೆ ಯಾರು ಯಾವ ಜಾತಿ ಅಥವಾ ಧರ್ಮಕ್ಕೆ ಸೇರಿದವರು ಎಂಬುದು ಮುಖ್ಯವಲ್ಲ. ಬದಲಾಗಿ ಅವರು ಮಾಡುವ ಕೆಲಸವನ್ನು ಅವರ ಹೆಸರು ಸೂಚಿಸುತ್ತಿತ್ತು, ಕರ್ನಾಟಕದಲ್ಲಿ ಗೌಡ, ಹೆಗಡೆ, ಪಟೇಲ, ಸಾಬ್ ಇಂತಹ ಹೆಸರುಗಳನ್ನು ಆಧರಿಸಿ ಸುಲಭವಾಗಿ ಅವರನ್ನು 'ಅರ್ಥ' ಮಾಡಿಕೊಳ್ಳುವ ಹಾಗೆ ಅಸ್ಸಾಂ ರಾಜ್ಯದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂದು ಗುರುತಿಸುವುದು ಅಸಾಧ್ಯ, ಒಬ್ಬರ ಹೆಸರನ್ನು ಆಧರಿಸಿ ಅವರ ಜಾತಿಯನ್ನಿರಲಿ ಆತ ಮುಸಲ್ಮಾನ ನೋ, ಹಿಂದೂವ್ವೋ ಅಥವಾ ಸಿಖ್ ಸಮುದಾಯದವನೋ ಎಂದೂ ತಿಳಿಯುವುದಿಲ್ಲ, ಮುಸಲ್ಮಾನರ ಮಕ್ಕಳನ್ನು ಅವರ ಮನೆಯಲ್ಲಿ ಕರೆಯುವ ಹೆಸರುಗಳು ಕೂಡ ಶಾಂತಿ, ಮೈನಾ, ಪಾಪು, ಅಪ್ಪು, ದೀಪ್... ಹೀಗೆ ಇರುತ್ತವೆ.

ಇಲ್ಲಿನ ಎಲ್ಲರ ಮನೆಯ ಊಟವೂ ಒಂದೇ ರೀತಿ. ದಿನನಿತ್ಯದ ಊಟವೇ ಆಗಿರಲಿ, ಮದುವೆ ತರಹದ ದೊಡ್ಡ ಸಮಾರಂಭವೇ ಆಗಿರಲಿ, ಬ್ರಾಹ್ಮಣರ ಮನೆಯೇ ಆಗಿರಲಿ, ಶೂದ್ರರ ಮನೆಯೇ ಆಗಿರಲಿ, ಮುಸಲ್ಮಾನರ ಮನೆಯೇ ಆಗಿರಲಿ, ಎಲ್ಲ ಕಡೆ ಅಸ್ಸಾಮಿನ ಊಟ ಬೇಳೆ, ಅನ್ನ, ಮಾಂಸ, ಮೀನು, ಆಲೂಗಡ್ಡೆ!

ನಾನು ಮೈಸೂರಿಗೆ ಹೋದಾಗಲೆಲ್ಲ ಮನೆಯಲ್ಲಿ ಚಿಕನ್ ಮಾಡಿದ ವಾಸನೆ ಬಂದರೆ ಪಕ್ಕದ ಮನೆಯವರು ಮೂಗು ಮುರಿಯುತ್ತಾ 'ಏನು ಇವತ್ತು ಸ್ಪೆಷಲ್ಲಾ...' ಎಂದು ರಾಗ ಎಳೆಯುತ್ತಾರೆ. ಅವರ ಮುಖದಲ್ಲಿ ನಗು ಕಂಡರೂ ಅವರ ಒಳಗೆಲ್ಲೊ ಅಣಕ ಧ್ವನಿಸುತ್ತದೆ. ಅದನ್ನು ನೋಡಿ ಉತ್ತರ ಕೊಡಲೂ ನನಗೆ ಒಂದು ರೀತಿಯ ಸಂಕೋಚ. ಆದರೆ ಅಸ್ಸಾಂನಲ್ಲಿ ನಮ್ಮ ಮನೆಯ ಅಡುಗೆ ಬಗ್ಗೆ ಸಂಕೋಚವಾಗಲಿ, ಕೀಳರಿಮೆಯಾಗಲಿ ಇಲ್ಲವೇ. ಏಕೆಂದರೆ ಮಕ್ಕಳ ಹುಟ್ಟಿದ ಹಬ್ಬವಾಗಲಿ, ಮಗಳು ಋತುಮತಿಯಾದ ಕಾರ್ಯವಾಗಲಿ ಎಲ್ಲದಕ್ಕೂ ಮೀನು, ಮಾಂಸ ಇದ್ದೇ ಇರುತ್ತದೆ.

ಒಮ್ಮೆ ಇಲ್ಲಿನ ಬ್ರಾಹ್ಮಣ ಗೆಳೆಯನ ಮದುವೆಗೆ ಹೋಗಿದ್ದಾಗ "ಹುಡುಗನ ಮನೆಯವರು ಹೆಣ್ಣಿನ ಮನೆಗೆ ಎಷ್ಟು ದೊಡ್ಡ ಮೀನು ತೆಗೆದುಕೊಂಡು ಹೋಗುತ್ತಿದ್ದಾರೆ?" ಎಂದು ಜನ ಕುತೂಹಲದಿಂದ ನೋಡುತ್ತಿದ್ದರು. ಕರ್ನಾಟಕದಲ್ಲಿ ಹುಡುಗಿ ಮನೆಯವರು ಎಷ್ಟು ತೊಲ ಚಿನ್ನ ಹಾಕಿದ್ದಾರೆ ಎಂದು ನೋಡುವ ರೀತಿಯಲ್ಲಿಯೇ ಎಷ್ಟು ದೊಡ್ಡ ಮೀನು ತಂದಿದ್ದಾರೆ ಎಂದು ಇಲ್ಲಿ ಕುತೂಹಲದಿಂದ ನೋಡುತ್ತಾರೆ. ಮುಸಲ್ಮಾನರ ಮದುವೆಯಲ್ಲೂ ಇಂತಹದ್ದೆ 'ಮೀನೆಷ್ಟು ದೊಡ್ಡದು' ಎಂದು ನೋಡುವ ಪದ್ಧತಿ ಇದೆ.

ಇಲ್ಲಿನ ಎಲ್ಲ ಜನರ ಆಹಾರ, ಸಂಸ್ಕೃತಿ, ಹೆಸರು ಎಲ್ಲವೂ ಒಂದೇ ರೀತಿ. ಇಂತಹ ಜನರ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಲು ಇಲ್ಲಿನ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ನಡೆಸುವ ಕುತಂತ್ರಕ್ಕೆ ಲೆಕ್ಕವಿಲ್ಲ. ಅವರ ಕೈಯಿಂದ ಯಾವ ಸಮಸ್ಯೆಯನ್ನು ಬಗೆಹರಿಸಲಾಗ ದಿದ್ದರೂ ಹೊಸ ಸಮಸ್ಯೆಯನ್ನು ಸೃಷ್ಟಿಸಿ ಹಳೆಯದನ್ನು ಮುಚ್ಚಿಹಾಕಿ ಬಿಡುತ್ತಾರೆ.

ಒಮ್ಮೆ ಹೀಗಾಯಿತು. ನೀರಿನ ಪ್ರವಾಹದಿಂದ ನೂರಾರು ಹಳ್ಳಿಗಳು ಕೊಚ್ಚಿ ಹೋದವು. ಸಾವಿರಾರು ಮನೆಗಳು ಮುಳುಗಿ ಜನ-ದನ ರೈಲು ಹಳಿಗಳ ಪಕ್ಕದಲ್ಲಿ ಡೇರೆ ಹಾಕಿಕೊಂಡು ರಾತ್ರಿ-ಹಗಲೆನ್ನದೆ ಕಣ್ಣು ಬಿಟ್ಟು ಕುಳಿತಿದ್ದರು. ಆಗ ಗೌಹಾಟಿಯ ಒಂದು ಕಾಲುವೆಯಲ್ಲಿ ಐನೂರು ರೂಪಾಯಿಗಳ ನೋಟು ತೇಲಿಹೋಯಿತು. ಮೀಡಿಯಾ ದವರು ಮತ್ತೆ ಮತ್ತೆ ತೋರಿಸಿದಂತೆ ಪಕ್ಕದಲ್ಲಿ ಕೂತಿದ್ದ ಎಲ್ಲ ಜನರ ಗಮನ ತೇಲಿಹೋಗುತ್ತಿದ್ದ ಆ ನೋಟಿನ ಮೇಲೆ ಇದ್ದವು.

ಅಂದು ಮನೆಗೆ ನುಗ್ಗಿದ ನೀರಿಗಿಂತ ತೇಲಿಹೋದ ನೋಟು ಮುಖ್ಯವಾದಂತೆ, ಇಂದು ಬೊಡೊ-ಮುಸಲ್ಮಾನರ ಮನೆಗಳು ಸುಡುತ್ತಿರುವಾಗ ನಕಲಿ ಎಸ್‌ಎಮ್‌ಎಸ್‌ಗಳಿಗೆ ಹೆದರಿ ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿನಿಂದ ಬರುವ ಜನರ ದೃಶ್ಯಗಳೇ ಮುಖ್ಯವಾಗಿವೆ. ಈಗ ಇಲ್ಲಿನ ಜನರ ನಡುವಿನ ಎಲ್ಲ ಹೊಡೆದಾಟಬಡಿದಾಟಗಳಿಗೆ ಕಾರಣ ಪಾಕಿಸ್ತಾನ ಎಂದು ಹೇಳಿ ಈ ಪ್ರಕರಣಗಳಿಗೆ ಫುಲ್‌ಸ್ಟಾಪ್ ಹಾಕುವ ಯತ್ನ ನಡೆಯುತ್ತಿದೆ. ಜೊತೆಗೆ ಪ್ರಸ್ತುತ ಎಲ್ಲಾ ಸಮಸ್ಯೆಗಳಿಗೆ ಎಷ್ಟೋ ವರ್ಷಗಳಿಂದ ಇಲ್ಲೇ ವಾಸಿಸುತ್ತಿರುವ ಮುಸಲ್ಮಾನರು ಮತ್ತು ಬಾಂಗ್ಲಾದೇಶಿಯರು ಎಂದು ಹೇಳಿ ಈಗಾಗಲೇ ಉರಿಯುತ್ತಿರುವ ಬೆಂಕಿಗೆ ಪೆಟ್ರೋಲ್ ಎರಚಲಾಗುತ್ತಿದೆ.

ಭಾರತ ವಿಭಜನೆ ಆಗುವ ಮೊದಲೂ ಇಲ್ಲಿ [illegible]ಲ್ಮಾನರು ಇದ್ದರು. ಈಗಲೂ ಇದ್ದಾರೆ. ಬಾಂಗ್ಲಾದ[illegible] ಗಡಿಯಿಂದ ದಿನನಿತ್ಯ ಹಲವಾರು ಜನ ದೋಣಿ[illegible] ಬಂದು ಸೈಕಲ್ ರಿಕ್ಷಾ ತುಳಿದೋ, ಮೀನು ಮಾ[illegible] ಮತ್ತೆ ಸಂಜೆ ಬಾಂಗ್ಲಾದೇಶದಲ್ಲಿರುವ ತಮ್ಮ [illegible] ಹೋಗುತ್ತಾರೆ. ಆದರೆ ಪರಿಸ್ಥಿತಿ ಈಗ ಹೇಗಾಗಿದೆ ಎ[illegible] 'ತಂದೆ-ತಾಯಿ ನಮ್ಮ ದೇಶದವರು ಆದೇ ಅವರ [illegible] ಬಾಂಗ್ಲಾದೇಶಿ' ಎಂದು ಅನುಮಾನದಿಂದ ನೋಡುವಂತ[illegible]

ಸರ್ಕಾರ ಈ ಎಲ್ಲ ಸಮಸ್ಯೆಗಳನ್ನು ಪರಿಹರಿ[illegible]ದಿಲ್ಲವೇಕೆ? ನಾವು ಹೊರ ರಾಷ್ಟ್ರಕ್ಕೆ ಹೋದರೆ [illegible] ಅಲ್ಲಿ ವರ್ಕ್ ಪರ್ಮಿಟ್ ಕೊಡುವಂತೆಯೇ ಇಲ್ಲಿನ [illegible] ಬಾಂಗ್ಲಾದೇಶದಿಂದ ಬರುವ ಕಾರ್ಮಿಕರಿಗೆ [illegible] ಪರ್ಮಿಟ್‌ಗಳನ್ನು ಏಕೆ ಕೊಡಬಾರದು?

ನಾವು ಸಾಮಾನ್ಯ ಜನರು. ನಮಗೆ ರಾಜಕಾರ[illegible] ಕುಟಿಲತೆ ಅರ್ಥವಾಗುವುದಿಲ್ಲ, ಆದರೆ ಜನರ ಕಷ್ಟ-ನ[illegible] ನಮಗೆ ತಟ್ಟುತ್ತವೆ. ನೇರವಾಗಿಯೋ, ಪರೋಕ್ಷವಾಗಿ[illegible] ನೋವನ್ನು ಅನುಭವಿಸುತ್ತಿರುವವರು ನಾವು [illegible] ನಮ್ಮಂತಹ ಸಾಮಾನ್ಯ ಜನ. ಯಾವ ಜಾತಿಯ[illegible] ಯಾವ ಧರ್ಮದವರು ದಾಳಿ ಮಾಡಿದರು ಎಂಬ[illegible] ಮುಖ್ಯವಲ್ಲ. ಬದಲಾಗಿ ಮನುಷ್ಯ-ಮನುಷ್ಯ[illegible] ಸುಡುತ್ತಿದ್ದಾನೆ ಎಂಬುದು ನಮಗೆ ಮುಖ್ಯವಾಗ[illegible] ಯಾಕೆಂದರೆ ಆ ಬೆಂಕಿಯ ಜ್ವಾಲೆ ನಮ್ಮೆಲ್ಲರನ್ನೂ ತಟ್ಟು[illegible]

ನಾವು ರಂಗಭೂಮಿಯವರು. ನಮ್ಮ ಸು[illegible] ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳಿಗೆ ಕಣ್ಣುಮ[illegible] ಕಿವಿಮುಚ್ಚಿ ಸುಮ್ಮನೆ ಕೂರುವುದಕ್ಕೆ ನಮ್ಮಿಂದ ಆಗುವು[illegible] ನಾಟಕದ ಮುಖಾಂತರ ಹಲವಾರು ವಿಷಯಗಳನ್ನು ಪ್ರ[illegible] ಮುಂದೆ ಮಂಡಿಸುತ್ತೇವೆ. ಪ್ರೇಕ್ಷಕರು ಸಹ "ತು[illegible] ಚೆನ್ನಾಗಿತ್ತು" ಎಂದು ಉದ್ಗರಿಸುತ್ತಾರೆ. ಆದರೆ ಆನಂ[illegible] ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದುಬಿಡುತ್ತದೆ.

ಯಾರ ಮನಸ್ಸು ಪರಿವರ್ತನೆ ಆಗಬೇಕೋ ಅ[illegible] ಯಾವತ್ತು ನಾಟಕಗಳನ್ನು ನೋಡಲು ಬರುವುದಿಲ್ಲ. ನಾ[illegible] ಟ್ರೈನಿಂಗ್ ಒಂದು ರೀತಿಯಲ್ಲಿ ಥೆರಪಿಯ ಕೆಲಸ ಮಾಡು[illegible] ಆದ್ದರಿಂದ ನಾವು ಇಲ್ಲಿನ ಯುವಕ-ಯುವತಿಯ[illegible] ಮಕ್ಕಳಿಗೆ, ಅಂಗವಿಕಲ ಮತ್ತು ಬುದ್ಧಿಮಾಂದ್ಯ ಮ[illegible] ನಾಟಕ ಕಲಿಸುತ್ತೇವೆ. ಇದರಿಂದಾಗಿ ಕೆಲವರಲ್ಲಿ [illegible] ಪರಿವರ್ತನೆಯೂ ಆಗಿದೆ. ಅಲ್ಫಾಗೆ ಹೋಗಬೇಕೆ[illegible] ಬಯಸಿದ್ದ ಯುವಕನೊಬ್ಬ ನಮ್ಮಲ್ಲಿ ರಂಗಶಿಕ್ಷಣ ಪ[illegible] ನಂತರ ರಂಗಭೂಮಿಯನ್ನೇ ತನ್ನದಾಗಿಸಿಕೊಂಡಿದ್ದಾ[illegible]

ಸ್ವತಃ ಡಾಕ್ಟರ್ ಆಗಿರುವ, ಆದರೆ ಹೃದಂ[illegible] ಸಮಸ್ಯೆಯಿಂದ ಬಳಲುತ್ತಿರುವ, ತನ್ನ ಅನಾರೋಗ್ಯ[illegible] ಹಲವಾರು ಕಡೆ ಪರೀಕ್ಷೆ ಮಾಡಿಸಿಕೊಂಡರೂ ಮಧ್ಯ-[illegible] ಉಸಿರು ಕಟ್ಟಿ ಬಿಡುವ ಯುವತಿಯೊಬ್ಬಳು ನಟನೆಯ[illegible] ಕಲಿಯುವ ಆಶೆ ಹೊತ್ತು ನಮ್ಮಲ್ಲಿಗೆ ಬಂದಿದ್ದಾಳೆ.


ಕೆಲ ವರ್ಷಗಳ ಹಿಂದೆ ಆಕೆ ವಾಸಿಸುತ್ತಿದ್ದ ಮನೆಯಿ[illegible] ಒಂದು ಕಿ.ಮೀ. ದೂರದಲ್ಲಿದ್ದ ಗಣೇಶನ ಗುಡಿ[illegible] ಸಿಡಿದ ಬಾಂಬಿನ ಶಬ್ದಕ್ಕೆ ನಡುಗಿದ ಅವಳ ಹೃ[illegible] ಈವರೆಗೂ ಸರಿಯಾಗಿಲ್ಲ, ಆ ಬಾಂಬ್ ಸ್ಫೋಟ[illegible] ಹತರಾದವರ ಸಂಬಂಧಿಗಳಿಗೆ ಸರ್ಕಾರ ಕೊಟ್ಟ ಮ[illegible] ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿ ಹೋ[illegible] ಬಹುದು. ಆದರೆ ಅಂದಿನ ಆ ಶಬ್ದಕ್ಕೆ ನಡುಗಿದ [illegible] ಯುವತಿಯ ಹೃದಯ ಮಾತ್ರ ಇನ್ನು ನಡುಗುತ್ತಲೇ [illegible]

ಹೃದಯವನ್ನು ನಡುಗಿಸುವವರಿಗೆ ಯಾವ ಜಾತಿ, ಯ[illegible] ಧರ್ಮವಿರಲು ಸಾಧ್ಯ? ಉಗ್ರಗಾಮಿಗಳು ಉಗ್ರಗಾಮಿ[illegible]

• ಭಾಗೀರ[illegible]








ಅಸೀಮ್ ತ್ರಿವೇದಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್



...ನು ಬರೆದ ಹಲವು ವ್ಯಂಗ್ಯಚಿತ್ರಗಳು ಕೆಲವರಲ್ಲಿ ...ಪಕ್ಕೆ ಕಾರಣವಾಗಿದೆ ಮತ್ತು ಅವು ಬಿಂಬಿಸಿದ ...ಗಳನ್ನು ಚರ್ಚೆಗೆ ತಂದಿವೆ. ಅದೇ ನನ್ನ ಉದ್ದೇಶವೂ.

...ಖ್ಯಾತ ವ್ಯಂಗ್ಯ ಚಿತ್ರಕಾರ ಜೊನಾಥನ್ ಶಪಿರೊ


...ಬಯಾವುದೋ ಒಂದು ಪತ್ರಿಕೆಯು ...ಕೀಯವಾಗಲಿ, ಅದರಲ್ಲಿ ಪ್ರಕಟವಾಗುವ ವ್ಯಂಗ್ಯ ...ಗಲಿ ನನಗೆ ಇಷ್ಟವಾಗಲಿಲ್ಲ ಎಂದಮಾತ್ರಕ್ಕೆ ಆ ...ಚಂದಾವನ್ನು ನಾನು ನಿಲ್ಲಿಸಿಲ್ಲ. ಹಾಗೆ ನಿಲ್ಲಿಸಿದ್ದರೆ ...ದಲು ಯಾವ ಪತ್ರಿಕೆಯೂ ಉಳಿದಿರುತ್ತಿರಲಿಲ್ಲ."

...ಅಮೆರಿಕದ ಮಾಜಿ ಅಧ್ಯಕ್ಷ ರಿಚರ್ಡ್ ನಿಕ್ಸನ್

...ನೂನಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದ್ದು ಅದನ್ನು ...ಯೋಗಪಡಿಸಿಕೊಳ್ಳದಿದ್ದರೆ ಅಂತಹ ಸ್ವಾತಂತ್ರ್ಯ ಇದ್ದೂ ...ಪ್ರಯೋಜನ?"

...ಖ್ಯಾತ ಲೇಖಕ ಸಲ್ಮಾನ್ ರಶ್ದಿ

...ತ್ತೀಚೆಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ...ತಾ ಬ್ಯಾನರ್ಜಿ ಅವರನ್ನು ವಿಡಂಬನೆ ಮಾಡಿದ ...ರ್ಟೂನ್‌ಅನ್ನು ತನ್ನ ಮಿತ್ರರಿಗೆ ಇ- ಮೇಲ್‌ನಲ್ಲಿ ...ಸಿದ ಕಾರಣಕ್ಕೆ ಅಂಬಿಕೇಶ್ ಮಹಾಪಾತ್ರ ಎಂಬ ...ಪ್ರೊಫೆಸರ್ ಅವರನ್ನು ಬಂಗಾಳದ ಪೊಲೀಸರು



...ಧಿಸಿದರು. ಅದು ಮಮತಾ 'ದೀದಿ' ಅವರ ...ರ್ವಾಧಿಕಾರ ಧೋರಣೆಯನ್ನು ಎಲ್ಲರೂ ಟೀಕಿಸುವಂತೆ ...ಡಿತಲ್ಲದೆ, ಆಕೆಯನ್ನು ಇನ್ನಷ್ಟು ಲೇವಡಿ ಮಾಡುವ ...ಗ್ಯಚಿತ್ರಗಳ ಸೃಷ್ಟಿಗೆ ಪುಷ್ಠಿ ನೀಡಿತ್ತು.


...ಆ ನೆನಪು ಮಾಸುವ ಮುನ್ನ ಮೊನ್ನೆ ಉತ್ತರಪ್ರದೇಶ ...ದ, ಇನ್ನೂ ಕೇವಲ 25 ವರ್ಷ ವಯಸ್ಸಿನ ಯುವ ...ರ್ಟೂನಿಸ್ಟ್ ಅಸೀಮ್ ತ್ರಿವೇದಿ ಎಂಬಾತನನ್ನು ...ರಾಷ್ಟ್ರದ ಕಾಂಗ್ರೆಸ್ ಸರ್ಕಾರ ಬಂಧಿಸಿತು. ನಮ್ಮ ...ತ್ತನ್ನು ಮತ್ತು ಹಲವು ರಾಷ್ಟ್ರೀಯ ಲಾಂಛನಗಳನ್ನು ...ವಡಿ ಮಾಡಿ ಆತ ಬಿಡಿಸಿದ್ದ ವ್ಯಂಗ್ಯಚಿತ್ರಕ್ಕೆ ಅಸೀಮ್ ...ವೇದಿ ವಿರುದ್ಧ ಮಹಾರಾಷ್ಟ್ರದ ಸರ್ಕಾರ ಜಡಿದ ಕೇಸು ...ಗೊತ್ತೆ? ದೇಶದ್ರೋಹ!

ಅಸೀಮ್ ಬರೆದಿರುವ ಹಲವು ಕಾರ್ಟೂನ್‌ಗಳನ್ನು ...ಪ್ರಕಟಿಸಲಾಗಿದೆ. ನನ್ನ ಪ್ರಕಾರ ಇವು ಉತ್ತಮ ...ರ್ಟೂನ್‌ಗಳೇನಲ್ಲ. ಅವುಗಳಲ್ಲಿ ಒಂದೆರಡು ...ರುಚಿಹೀನವಾಗಿವೆ. ಜೊತೆಗೆ ಅಭಿವ್ಯಕ್ತಿ ಸ್ವಾತಂತ್ರ ಎಂಬ ...ನ್ನು ಉಪಯೋಗಿಸುವ ನೆಪದಲ್ಲಿ ಅದು ವ್ಯವಸ್ಥೆಯನ್ನು ...ಸುವ, ಲೇವಡಿ ಮಾಡುವ ಅಥವಾ ವಿಡಂಬನೆ ...ಸುವ ಗೋಜಿಗೆ ಹೋಗದೆ ಅವಹೇಳನ ಮಾಡುವಂತಿವೆ. ...ಪ್ರಕಾರ ಇಂತಹ ವ್ಯಂಗ್ಯಚಿತ್ರಗಳಿಂದ ಯಾರಿಗೂ ...ಷ ಪ್ರಯೋಜನವೂ ಇಲ್ಲ.

...ಈ ಕಾರ್ಟೂನ್‌ಗಳ ಇನ್ನೊಂದು ಮುಖ್ಯ ಅಂಶ ...ವೆಂದರೆ ಇವೆಲ್ಲವೂ ಅಣ್ಣಾ ಹಜಾರೆಯ ತಂಡದವರು ...ವಿರೋಧಿಗಳ ವಿರುದ್ಧ ಉಪಯೋಗಿಸುವ ಬಾಲಿಶ ...ವನ್ನೇ ಕಾರ್ಟೂನ್ ರೂಪದಲ್ಲಿ ವ್ಯಕ್ತಪಡಿಸಿರುವಂತಿವೆ. ...ದರೆ, ಯಾವುದನ್ನು ಅರವಿಂದ್ ಕೇಜ್ರಿವಾಲಾ ಎಂಬ ...ಡ್ಡಿ ಮೈಕಾಸುರ ತನ್ನ ಭಾಷಣಗಳಲ್ಲಿ ಹೇಳುತ್ತಿದ್ದನೋ ...ನ್ನೇ ಈ ಅಸೀಮ್ ತ್ರಿವೇದಿ ಎಂಬ ಬಾಲ ...ರ್ಟೂನಿಸ್ಟ್ ತನ್ನ ವ್ಯಂಗ್ಯಚಿತ್ರಗಳಲ್ಲಿ ಬಿಡಿಸಿದಂತಿದೆ.

ಆದರೂ ಕೇಜ್ರಿವಾಲನ ವಿರುದ್ಧ ತೋರದ ಕೋಪವನ್ನು ಕಾಂಗ್ರೆಸ್ ಸರ್ಕಾರ ಅಸೀಮ್ ತ್ರಿವೇದಿಯ ಮೇಲೆ ತೋರಿಸಿದೆ. ಅದಕ್ಕೆ ಪ್ರಾಯಶಃ ಅದು ಭಾಷಣವಲ್ಲದೆ ಕಾರ್ಟೂನ್ ಆಗಿದ್ದೇ ಕಾರಣವಾಗಿರಬಹುದು. ಸಾಮಾನ್ಯವಾಗಿ ಒಬ್ಬ ಅಪ್ರತಿಮ ಭಾಷಣಕಾರ ತನ್ನ ಮಾತುಗಳಲ್ಲಿ ವ್ಯಕ್ತಪಡಿಸುವುದಕ್ಕಿಂತ ಪರಿಣಾಮಕಾರಿಯಾಗಿ ಒಬ್ಬ ವ್ಯಂಗ್ಯ ಚಿತ್ರಗಾರ ತನ್ನ ಕಾರ್ಟೂನ್ ಮೂಲಕ ಸೃಷ್ಟಿಸಬಹುದು.

ಅಂದಹಾಗೆ, ಈ ಅಸೀಮ್ ತ್ರಿವೇದಿ ಸಹ ಯೂತ್ ಅಗೇನ್ಸ್ಟ್ ಕರಪ್ಷನ್ (ವೈಎಸಿ) ಎಂಬ ಆರೆಸ್ಸೆಸ್ ಬೆಂಬಲಿತ ಕೇಜ್ರಿವಾಲಾನ ನಾಯಕತ್ವದ ಸಂಸ್ಥೆಯ ಸದಸ್ಯ. ಮೊನ್ನೆ ಸೆಪ್ಟೆಂಬರ್ 4 ರಂದು ಕೋಮುವಾದಿ ಸಂಘಪರಿವಾರದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಎಂಬ ಚೆಡ್ಡಿ ಗುಂಪಿನೊಂದಿಗೆ ಈ ವೈಎಸಿ ಸಂಸ್ಥೆಯೂ ಸೇರಿ ದೇಶದಾದ್ಯಂತ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಕಾಲೇಜ್ ಬಂದ್ ಕಾರ್ಯಕ್ರಮವನ್ನು ನಡೆಸಿತು. ಇತ್ತ ಎಬಿವಿಪಿ ಆರೆಸ್ಸೆಸ್‌ನ ಶಿಶುವಾದರೆ ಅತ್ತ ವೈಎಸಿ ಅದೇ ಸಂಘಪರಿವಾರದ ಅನಧಿಕೃತ ಕೂಸು. ಹೀಗಾಗಿ ಈ ಎರಡೂ ಸಂಘಟನೆಗಳು ಭ್ರಷ್ಟಾಚಾರ ವಿರುದ್ಧದ ತಮ್ಮ 'ಆಂದೋಲನ'ದಲ್ಲಿ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಎಸಗಿರುವ ಭ್ರಷ್ಟಾಚಾರದ ಬಗ್ಗೆ ತುಟಿಪಿಟಿಕ್ ಎನ್ನಲಿಲ್ಲ! ಹೊರಗೆ ಅಣ್ಣಾ ಹಜಾರೆಯ ಟೋಪಿ ತೊಟ್ಟಿರುವವರಂತೆ ಪೋಸು ಕೊಡುವ ಆದರೆ ಒಳಗೆ ಸಂಘಪರಿವಾರದ ಕೋಮುವಾದಿ ಸಿದ್ಧಾಂತವನ್ನು ಹೊಂದಿರುವ ಈ ಅಸೀಮ್ ತ್ರಿವೇದಿ ತರಹದ ಕಲಾವಿದ ಇಂತಹ ವ್ಯಂಗ್ಯ ಚಿತ್ರಗಳನ್ನು ಬಿಡಿಸಿರುವುದರಲ್ಲಿ ಅಚ್ಚರಿ ಏನಿಲ್ಲ.



ಅಸೀಮ್ ತ್ರಿವೇದಿ ಬರೆದಿರುವ ಕಾರ್ಟೂನ್‌ಗಳಲ್ಲಿ ವಿವಾದಕ್ಕೆ ಗುರಿಯಾಗಿರುವುದು ನೇಣು ಶಿಕ್ಷೆಗೆ ಗುರಿಯಾಗಿರುವ ಉಗ್ರ ಕಸಬ್ ಮುಸಿಮುಸಿ ನಗುತ್ತಾ ಭಾರತದ ಸಂವಿಧಾನದ ಮೇಲೆ ಮೂತ್ರ ಹೊಯ್ಯುತ್ತಿರುವುದು. ಇದರ ಹಿಂದಿನ ಭಾವ 'ಎಂದೋ ಗಲ್ಲಿಗೇರಬೇಕಿದ್ದ ಕಸಬ್‌ನಂತಹ ಉಗ್ರ ನಮ್ಮ ಸಂವಿಧಾನದಲ್ಲಿ ಇರುವ ಅವಕಾಶಗಳನ್ನು ಬಳಸಿಕೊಂಡು ಇನ್ನೂ ಬದುಕುಳಿದಿದ್ದಾನೆ' ಎಂಬ ಆರೆಸ್ಸೆಸ್ ಪ್ರಣೀತವಾದ. ಆದ್ದರಿಂದಲೇ ಆತನ ಮೇಲೆ ಕೇಸು ವಾಪಸ್ ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಿರುವವರಲ್ಲಿ ಬಿಜೆಪಿಯ ಎಲ್.ಕೆ. ಅಡ್ವಾಣಿ ಮತ್ತು ಹಿಂದೂ ದುರಭಿಮಾನಿ ಬಾಲ ಠಾಕ್ರೆ ಮುಂಚೂಣಿಯಲ್ಲಿದ್ದಾರೆ!

ಆದರೆ ಅಡ್ವಾಣಿ ಮತ್ತು ಠಾಕ್ರೆ ಅಸೀಮನ ಬೆನ್ನಿಗೆ ನಿಂತಿದ್ದಾರೆ ಎಂಬ ಕಾರಣಕ್ಕೆ ಎಡಪಂಥೀಯರು ಮತ್ತು ಪ್ರಗತಿಪರರು ಸರ್ಕಾರದ ಕ್ರಮವನ್ನು ಬೆಂಬಲಿಸಬೇಕಿಲ್ಲ. ಇಲ್ಲಿ ಸರ್ಕಾರ ದಮನಿಸುತ್ತಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು. ಹೀಗಾಗಿ ಅದನ್ನು ಯಾರೇ ಆದರೂ ಖಂಡತುಂಡವಾಗಿ ಖಂಡಿಸಿ ಅಸೀಮನ ಮೇಲಿನ ಎಲ್ಲಾ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಲು ಒತ್ತಾಯಿಸಲೇಬೇಕು.

ಆದರೆ ವಾಸ್ತವವೆಂದರೆ ಅಸೀಮನನ್ನು ಬಿಡುಗಡೆ ಮಾಡಬೇಕು ಎಂಬ ವಿರೋಧ ಗಟ್ಟಿಕೊಳ್ಳುವ ಮುಂಚೆಯೇ ಕೇವಲ 24 ಗಂಟೆಯೊಳಗೆ ಕೋರ್ಟ್ ಆತನಿಗೆ ಬೇಲ್ ಕೊಟ್ಟಿದೆ. ಕಾಂಗ್ರೆಸ್ ಸರ್ಕಾರವೇ ಆತನ ಮೇಲೆ ಹಾಕಿರುವ ದೇಶದ್ರೋಹದ ಕೇಸನ್ನು ವಾಪಸ್ ತೆಗೆದುಕೊಳ್ಳುವ ಭರವಸೆ ನೀಡಿದೆ. ಇದು ಈ ಪ್ರಕರಣದ ಮತ್ತೊಂದು ಮುಖ ಕೂಡಾ.

ಸರ್ಕಾರ ಮೇಲುನೋಟಕ್ಕೆ ಕಾನೂನು ಎಲ್ಲರಿಗೂ ಒಂದೇ ಎಂಬಂತೆ ವರ್ತಿಸಿದರೂ ಅದು ಎಡಪಂಥೀಯರಿಗೆ ಒಂದು ಕಾನೂನು, ಬಲಪಂಥೀಯರಿಗೆ ಇನ್ನೊಂದು ಕಾನೂನು ಎಂಬಂತೆ ನಡೆದುಕೊಳ್ಳುತ್ತದೆ. ಉದಾಹರಣೆಗೆ ಈಗ ಇದೇ ಅಸೀಮ್ ವಿರುದ್ಧ ಹಾಕಿದ್ದ ಕೇಸನ್ನು ಹಿಂದೆ ಪಡೆದಿರುವ ಸರ್ಕಾರ ಈ ಹಿಂದೆ ಇಂತಹದ್ದೇ ಆರೋಪಕ್ಕೆ ಗುರಿಯಾಗಿದ್ದ ಮಾನವಹಕ್ಕುಗಳ ಹೋರಾಟಗಾರ ಮತ್ತು ಎಡಪಂಥೀಯ ಚಿಂತಕ ವೈದ್ಯ ಬಿನಾಯಕ್ ಸೇನ್ ಬಗ್ಗೆ ಕಿಂಚಿತ್ತೂ ವಿನಾಯಿತಿ ತೋರಿರಲಿಲ್ಲ. ಸೇನ್ ಅವರು ಸುಮಾರು ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದು ಕೊನೆಗೂ ಸುಪ್ರೀಂಕೋರ್ಟ್ ವಿಚಾರಣೆ ನಡೆಸಿದ ನಂತರವೇ ಬಿಡುಗಡೆ ಹೊಂದಬೇಕಾಯಿತು.

ಬಲಪಂಥೀಯರ ಪರವಾಗಿಯೂ, ಎಡಪಂಥೀಯರ ವಿರುದ್ಧವಾಗಿಯೂ ಭಾರತದ ಸರ್ಕಾರ ಹೀಗೆ ನಡೆದುಕೊಂಡಿದ್ದು ಇದೇ ಮೊದಲ ಬಾರಿ ಅಲ್ಲ. ಉದಾಹರಣೆಗೆ ಆರೆಸ್ಸೆಸ್ ಸಿದ್ಧಾಂತದಿಂದ ಪ್ರಚೋದನೆ ಪಡೆದು ನಾಥೂರಾಮ್ ಗೋಡ್ಸೆ ಎಂಬಾತ ಮಹಾತ್ಮ ಗಾಂಧಿ ಅವರನ್ನೇ ಕೊಲೆ ಮಾಡಿದ ನಂತರ ಆರೆಸ್ಸೆಸ್ ಮೇಲೆ ನಿಷೇಧ ಹೇರಲಾಗಿತ್ತು. ಹಾಗೆಯೇ ಬಾಬ್ರಿ ಮಸೀದಿಯನ್ನು ಉರುಳಿಸಿದ ನಂತರವೂ ಅದರ ಕೆಲವು ಅಂಗ ಸಂಘಟನೆಯ ಮೇಲೆ ಸರ್ಕಾರ ನಿಷೇಧ ಹಾಕಿತ್ತು. ಆದರೆ ಇಂತಹ ನಿಷೇಧಗಳಿಂದಾಗಿ ಆರೆಸ್ಸೆಸ್‌ನ ಒಂದು ಕೂದಲೂ ಕೊಂಕಲಿಲ್ಲ. ರಾತ್ರೋರಾತ್ರಿ ಅವು ಬೇರೆ ಹೆಸರಲ್ಲಿ ಮತ್ತೆ ತಮ್ಮ ಚಟುವಟಿಕೆಗಳನ್ನು ಮುಂದುವರೆಸಿದ್ದವು.

ಅಂದರೆ, ಬಲಪಂಥೀಯ ಸಂಘಟನೆಗಳನ್ನು ಭಾರತದ ಸರ್ಕಾರ ಯಾವತ್ತೂ ದಮನ ಮಾಡಿದ ಉದಾಹರಣೆ ಇಲ್ಲ. ಹೆಚ್ಚೆಂದರೆ ಅವುಗಳ ನಾಯಕರನ್ನು ಬಂಧಿಸಿ ಕೆಲದಿನಗಳಲ್ಲಿ ಅವರೆಲ್ಲ ಹೊಸರೂಪದಲ್ಲಿ ಮತ್ತೆ ಚಾಲ್ತಿಗೆ ಬರುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಆದರೆ ಎಡಪಂಥೀಯ ಪಕ್ಷಗಳನ್ನು ಮತ್ತು ನಂತರದಲ್ಲಿ ನಕ್ಸಲೈಟ್ ಪಕ್ಷಗಳನ್ನು ಅವರ ಪರವಾಗಿದ್ದ ಸಾಹಿತ್ಯದ ಮೇಲೆ ನಿಷೇಧ ಹೇರಲಾಗಿತ್ತು, ಮಾತ್ರವಲ್ಲ ಎಡಪಂಥೀಯ ನಕ್ಸಲೈಟರನ್ನು ಬೀದಿಬೀದಿಯಲ್ಲಿ ಗುಂಡಿಟ್ಟು ಕೊಲ್ಲಲಾಗಿತ್ತು.

ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಎಡಪಂಥೀಯರು ಮತ್ತು ಬಲಪಂಥೀಯರು ಇಬ್ಬರೂ ಬಂಧನಕ್ಕೊಳಗಾದರೂ ಅಡ್ವಾಣಿ ಮತ್ತು ಇತರರು ಸ್ಟೇಟ್‌ಗೆಸ್ಟ್‌ಗಳಂತಿದ್ದರೆ ಎಡಪಂಥೀಯರಲ್ಲಿ ಸಾವಿರಾರು ಜನ ಪೊಳ್ಳು ಎನ್‌ಕೌಂಟರ್‌ಗಳಲ್ಲಿ ಬಲಿಯಾದರು. ಅಸೀಮ್ ವಿರುದ್ಧದ ದೇಶದ್ರೋಹದ ಕೇಸನ್ನು ಬೆಳಗಾಗುವ ಮುನ್ನ ಹಿಂದೆ ತೆಗೆದುಕೊಂಡಿದ್ದರೆ, ಇವತ್ತಿಗೂ ಆಂಧ್ರ, ಬಿಹಾರ ಇನ್ನಿತರ ಕಡೆಗಳಲ್ಲಿ ಹಲವಾರು ಅಮಾಯಕರು ದೇಶದ್ರೋಹದ ಕೇಸುಗಳನ್ನು ಎದುರಿಸುತ್ತ ಜೈಲಿನಲ್ಲಿರುವ ವಾಸ್ತವ. ಅಷ್ಟೇ ಯಾಕೆ, ಬಿನಾಯಕ್ ಸೇನ್ ಮತ್ತು ಖ್ಯಾತ ಲೇಖಕಿ ಅರುಂಧತಿ ರಾಯ್ ವಿರುದ್ಧ ಹೂಡಲಾಗಿರುವ ಖೊಟ್ಟಿ ಕೇಸುಗಳನ್ನು ಜಪ್ಪಯ್ಯ ಅಂದರೂ ಸರ್ಕಾರ ಹಿಂದೆ ತೆಗೆದುಕೊಂಡಿಲ್ಲ. ಇದೇ ಸಂದರ್ಭದಲ್ಲಿ ಕೋಮುಗಲಭೆಗೆ ಪ್ರಚೋದನೆ ನೀಡುವ ಭಾಷಣಗಳನ್ನು ಮಾಡಿರುವ ಬಾಳ್‌ಠಾಕ್ರೆ, ಕಲ್ಲಡ್ಕ ಪ್ರಭಾಕರ ಭಟ್ಟನಂತಹವರ ಮೇಲೆ ಕೇಸು ಬೀಳುವುದೇ ಇಲ್ಲ. ಬಿದ್ದರೂ ಅವರ ವಿರುದ್ಧ ಯಾವ ಕ್ರಮವನ್ನೂ ಪೊಲೀಸರಾಗಲಿ, ಸರ್ಕಾರಗಳಾಗಲಿ ತೆಗೆದುಕೊಳ್ಳುವುದಿಲ್ಲ.




ಇಷ್ಟೆಲ್ಲ ಹೇಳಿದ ಮೇಲೆ ಒಂದು ಮಾತನ್ನು ಸ್ಪಷ್ಟಪಡಿಸಬೇಕಿದೆ. ನಾನು ಯಾವುದೇ ರೀತಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವನ್ನು ವಿರೋಧಿಸುತ್ತೇನೆ. ಆದ್ದರಿಂದ ಈ ಅಸೀಮ್ ತ್ರಿವೇದಿಯ ರಾಜಕೀಯ ದೃಷ್ಟಿ ಮತ್ತು ಆತನ ಬಾಲಿಶತನ ಎಂತಹದ್ದೇ ಆಗಿದ್ದರೂ ಆತನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸು ವುದು ಸರಿ ಅಲ್ಲ ಎಂಬುದು ನನ್ನ ನಿಲುವು. ಅಸೀಮ್ ಕೇಂದ್ರ ಸರ್ಕಾರಕ್ಕೆ ಮುಜುಗರ ಉಂಟುಮಾಡುವ, ಅದನ್ನು ತೀವ್ರವಾಗಿ ಟೀಕಿಸುವ, ಅದರ ಹಗರಣಗಳನ್ನು ಬಯಲುಮಾಡುವ ಕಾರ್ಟೂನ್ ಬರೆದ ಏಕೈಕ ಕಾರಣಕ್ಕೆ ಆತನನ್ನು ಬಂಧಿಸುವುದು, ಅದಕ್ಕಿಂತ ಹೆಚ್ಚಾಗಿ ಆತನ ಮೇಲೆ ದೇಶದ್ರೋಹದ ಕೇಸು ಹಾಕುವುದು ಪ್ರಜಾತಂತ್ರ ವಿರೋಧಿ ಕ್ರಮವಾಗುತ್ತದೆ. ಭಾರತದಂತಹ ಪ್ರಜಾತಂತ್ರ ದೇಶದಲ್ಲಿ ಇದು ಅಕ್ಷಮ್ಯ ಅಪರಾಧವೇ ಸರಿ. ಈ ಹಿನ್ನೆಲೆಯಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳಲ್ಲಿ ವಿಶ್ವಾಸ ಇಟ್ಟಿರುವ ಯಾರೇ ಆದರೂ ಅಸೀಮ್ ವಿರುದ್ಧದ ಸರ್ಕಾರದ ಕ್ರಮವನ್ನು ವಿರೋಧಿಸಲೇಬೇಕು.

ಒಂದು ಸರ್ಕಾರ ಅಥವಾ ಸಮಾಜ ಎಷ್ಟು ಪ್ರಜಾತಾಂತ್ರಿಕವಾಗಿದೆ ಎಂಬುದಕ್ಕೆ ಲಿಟ್ಮಸ್ ಟೆಸ್ಟ್ ಏನೆಂದರೆ ಅದು ಭಿನ್ನಮತ, ಟೀಕೆ, ವಿಮರ್ಶೆಗಳಿಗೆ ಎಷ್ಟು ಅವಕಾಶ ಕೊಡುತ್ತದೆ ಮತ್ತು ಅವುಗಳನ್ನು ಎಷ್ಟರಮಟ್ಟಿಗೆ ಸಹಿಸುತ್ತದೆ ಎಂಬುದೇ ಆಗಿದೆ. ಅಧಿಕಾರದಲ್ಲಿ ಎಡಪಂಥೀಯ ಅಥವಾ ಬಲಪಂಥೀಯ ಅಥವಾ ಮಧ್ಯಪಂಥೀಯ ಪಕ್ಷವೇ ಇರಲಿ ಅದು ತನ್ನ ಟೀಕಾಕಾರರ ಅಭಿಪ್ರಾಯಗಳನ್ನು ಮಟ್ಟಾ ಹಾಕದಂತೆ ನೋಡಿಕೊಳ್ಳುವುದೇ ನಿಜವಾದ ಪ್ರಜಾತಂತ್ರವಾದಿಗಳ ಕರ್ತವ್ಯವಾಗಿರುತ್ತದೆ.

ಒಂದು ವೇಳೆ ಇವತ್ತು ಅಸೀಮ್ ತ್ರಿವೇದಿ ಎದುರಿಸುತ್ತಿರುವ ಆರೋಪಗಳನ್ನು ಆತನ ಬದಲಾಗಿ ಓರ್ವ ಬಲಪಂಥೀಯ ವ್ಯಕ್ತಿ ಎದುರಿಸುತ್ತಿದ್ದರೆ ಆತನ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಎಲ್ಲರೂ ನಿಲ್ಲುವುದು ಅವಶ್ಯವಾಗುತ್ತದೆ. ಯಾಕೆಂದರೆ ಇವತ್ತು ಅಸೀಮ್ ತರಹದ ಬಲಪಂಥೀಯ ವ್ಯಕ್ತಿಯ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ನಿಲುವನ್ನು ಸ್ವಲ್ಪಮಟ್ಟಿಗೆ ಸಹಿಸಿದರೆ ನಾಳೆ ಇದೇ ಸರ್ಕಾರ ಇದೇರೀತಿ ಪ್ರಜಾತಂತ್ರವಾದಿಗಳನ್ನು, ಸಮಾಜವಾದಿಗಳನ್ನು, ಎಡಪಂಥೀಯರನ್ನೂ ಸದೆಬಡಿಯುತ್ತದೆ ಎಂಬ ಅಂಶವನ್ನು ಯಾರೂ ಕಡೆಗಣಿಸಕೂಡದು. ●

ಬೇಲೇಕೇರಿ ಬಂದರು ಭಾನ್ಗಡಿ
ಪ್ರತಿಷ್ಠಿತ ಅದಿರು ಕಳ್ಳರ ಕೊರಳಿಗೆ ಸಿಬಿಐ ಉರುಳು!




ಬೇಲೇಕೇರಿ ಬಂದರು!!


ರಾಜ್ಯದ ಅಮೂಲ್ಯ ಅದಿರು ಲೂಟಿಯ ಚರಿತ್ರೆಯಲ್ಲಿ ಈ ವಾಣಿಜ್ಯ ಬಂದರು ಭಾನ್ಗಡಿಗಳ ಅಡ್ಡೆ ಎಂದೇ ಗುರುತಿಸಲ್ಪಟ್ಟಿದೆ. ಗಣಿ ಕರ್ಮಕಾಂಡ ಮೊಟ್ಟಮೊದಲು ಸಾಕ್ಷ್ಯಾಧಾರ ಸಮೇತ ಸ್ಫೋಟಿಸಿದ್ದೇ ಈ ಬಂದರಿನ ಧಕ್ಕೆಯಲ್ಲಿ! ಲೋಕಾಯುಕ್ತ ನ್ಯಾಯಮೂರ್ತಿಗಳಾಗಿದ್ದ ಸಂತೋಷ್ ಹೆಗ್ಡೆ ನಿರ್ದೇಶನದ ತನಿಖಾ ತಂಡ ಬಂದರಿನ ಆವಾರದಲ್ಲಿದ್ದ ಅಕ್ರಮ ಅದಿರು ಜಪ್ತು ಮಾಡಿದಾಗ ಭುಗಿಲೆದ್ದಿದ್ದ ಬೇಲೇಕೇರಿ ಬಂದರಿನ ಅನಾಹುತಕಾರಿ ಮಹಿಮೆ ಇವತ್ತಿಗೂ ತರಹೇವಾರಿ ತಿರುವು ಪಡೆದುಕೊಳ್ಳುತ್ತಲೇ ಇದೆ. ಈಗ ಸುಪ್ರೀಂ ಕೋರ್ಟ್‌ನ ಹಸಿರು ಪೀಠ ಸದ್ರಿ ಬಂದರಿನಲ್ಲಾದ ಅದಿರು ಕಳ್ಳತನದ ಕೇಸ್ ಸಿಬಿಐ ಕೈಗೆ ಕೊಟ್ಟಿದೆ; ಅಷ್ಟೇ ಅಲ್ಲ ಬಳ್ಳಾರಿಯಿಂದ ಬೇಲೇಕೇರಿವರೆಗಿನ ಅದಿರು ಸಾಗಾಣಿಕೆ ದಾರಿಗುಂಟ ನಡೆದಿರುವ ಹಗರಣದ ಸಮಗ್ರ ತನಿಖೆಗೆ ಆದೇಶಿಸಿದೆ. ಅಲ್ಲಿಗೆ ಬೇಲೇಕೇರಿ ಬಂದರಿನ ಕಳ್ಳ ಖದರಿಗೆ ಹೊಸದೊಂದು ಕುತೂಹಲಕಾರಿ ಆಯಾಮ ಬಂದುಬಿಟ್ಟಿದೆ!

ಬೇಲೇಕೇರಿ ಬಂದರಿಗೆ ಬಳ್ಳಾರಿ ಕಡೆಯಿಂದ ಪ್ರತಿದಿನ ಓವರ್‌ಲೋಡ್ ಆದ ಐದು ಸಾವಿರ ಅದಿರು ಲಾರಿಗಳು ಬರುತ್ತಿದ್ದವು. ಬೇಲೇಕೇರಿಯ ಸಿಂಗಲ್ ರೋಡ್‌ನಲ್ಲಿ ಪೈಪೋಟಿಯಲ್ಲಿ ನುಗ್ಗುತ್ತಿದ್ದ ಆ ಲಾರಿಗಳ ಹಾವಳಿ ಮತ್ತು ಅದಿರು ಮಾಲಿನ್ಯದಿಂದ ಇಡೀ ಊರೇ ನರಕದಂತಾಗಿ ಹೋಗಿತ್ತು. ಅದಿರು ಸೀಜನ್‌ನಲ್ಲಿ ಊರಿಗೆ ಊರೇ ಕೆಂಪು-ಕೆಂಪಾಗಿ ಬಿಡುತ್ತಿತ್ತು. ಎಲ್ಲಿ ನೋಡಿದರಲ್ಲಿ ಅದಿರು ಡಂಪಿಂಗ್; ಮನೆ-ಬಾವಿ-ಗಾಳಿಯೆಲ್ಲ ಧೂಳೋ ಧೂಳು. ಮೀನುಗಾರರ ದೋಣಿಗೆ ಬಲೆ ಇಡುವ ಜೆಟ್ಟಿ, ಮೀನುಗಾರಿಕಾ ಬಂದರು ನುಂಗಿ, ಸಮುದ್ರವನ್ನೇ ಕಬಳಿಸಿ ದೈತ್ಯ ಧಕ್ಕೆ ಕಟ್ಟಿಕೊಂಡಿದ್ದರು. ಅದಿರು ಲಾರಿಗಳು ಕೊಂದ ಜೀವಗಳಿಗಂತೂ ಲೆಕ್ಕವೇ ಇಲ್ಲ. ದಿನವೂ ಅಂಕೋಲೆಯಲ್ಲಿ ಟ್ರಾಫಿಕ್ ಜಾಮ್!

ಇಷ್ಟಾದರೂ ಅಧಿಕಾರಿಗಳು-ಜನಪ್ರತಿನಿಧಿಗಳು ತಲೆ ಕೆಡಿಸಿಕೊಂಡಿರಲಿಲ್ಲ, ಕಾರಣ ಇವರಿಗೆಲ್ಲ ಅದಿರು ಮಾಫಿಯಾದಿಂದ ಯೋಜನಾಬದ್ಧವಾಗಿ ಹಫ್ತಾ ಮಾಮೂಲಿ ಹೋಗುತ್ತಿತ್ತು. ಹೀಗಿರುವಾಗ ಬಡಪಾಯಿ ಬೇಲೇಕೇರಿ




ಜನಾರ್ದನ ರೆಡ್ಡಿ



ಯಡಿಯೂರಪ್ಪ



ಸತೀಶ್ ಸೈಲ್




ಶ್ರೀರಾಮುಲು

(ಮೀನುಗಾರಿಕಾ ಬಂದರು)ಗಳನ್ನು ಅದಿರು ದೊರೆಗಳು ದಾದಾಗಿರಿಯಿಂದ ಕಬ್ಜಾ ಮಾಡಿಕೊಂಡು ಬಿಟ್ಟಿದ್ದರು. ಸ್ಮಶಾನವೂ ಅದಿರಿನಿಂದ ತುಂಬಿಹೋಗಿತ್ತು, ಬೆಸ್ತರು ಜೀವನಾಧಾರ ಕಸುಬು ಕಳಕೊಂಡು ಬೀದಿ ಪಾಲಾಗಿದ್ದರು. ಅಸ್ತಮಾ, ಕ್ಷಯ, ಹೃದಯಬೇನೆಗೆ ಜನರು ಹಾಸಿಗೆ ಹಿಡಿದಿದ್ದರು. ಅದಿರು ಕಳ್ಳಸಾಗಾಣಿಕೆದಾರರು ಬಡ ಬೆಸ್ತರ ಗ್ರಾಮಸ್ಥರ ಅಳಲು ಯಾರಿಗೆ ಕೇಳಿಸುತ್ತದೆ?! ಲೋಕಾಯುಕ್ತದ ಅಧಿಕಾರಿಯಾಗಿದ್ದ ದಕ್ಷ-ನಿಷ್ಠುರ ಯು.ವಿ. ಸಿಂಗ್ ಬೇಲೇಕೇರಿಯ ಅದಿರು ರಫ್ತುದಾರ ಕುಳಗಳ ಅಡ್ಡೆ ಮೇಲೆ ಮುಗಿಬಿದ್ದಾಗಲೂ ಸಾರ್ವಜನಿಕರಿಗೆ ಅದರ ಸದ್ದು ಕೇಳಿಸಿರಲಿಲ್ಲ. ಆದರೆ ಬೇಲೇಕೇರಿ ಬಂದರು ಮತ್ತು ಆ ಪುಟ್ಟ ಗ್ರಾಮ ದೊಡ್ಡ ಸುದ್ದಿಯಾಗಿದ್ದು ಮಾತ್ರ 2009 ರ ಜೂನ್ ತಿಂಗಳಲ್ಲಿ, ಕಾರವಾರದ ಡಿಸಿಎಫ್ ಗೋಕುಲ್ 2009 ಮಾರ್ಚ್ 20 ರಂದು ಸೀಜ್ ಮಾಡಿಟ್ಟಿದ್ದ 350 ಕೋಟಿ ರೂ.ಗಳ 8.5 ಲಕ್ಷ ಮೆಟ್ರಿಕ್ ಟನ್ ಅದಿರಲ್ಲಿ 6 ಲಕ್ಷ ಮೆಟ್ರಿಕ್ ಟನ್ ಅದಿರನ್ನು ರಫ್ತುದಾರರು ಕದ್ದು ವಿದೇಶಕ್ಕೆ ರವಾನಿಸಿದ್ದು ಅಂದು ಬಹಿರಂಗವಾಗಿತ್ತು!

ಇದು ಸಹಜವಾಗೇ ಲೋಕಾಯುಕ್ತರನ್ನು ಕೆರಳಿಸಿತು; ಅದಿರು ಮಾಫಿಯಾದಲ್ಲಿ ಕಂಪನಗಳನ್ನು ಎಬ್ಬಿಸಿತು. ಬಂದರು ಮಂತ್ರಿಯಾಗಿದ್ದ ಕೃಷ್ಣ ಪಾಲೇಮಾರ್‌ನನ್ನು ಬುಕ್ ಮಾಡಿಕೊಂಡ ಅದಿರು ಕಳ್ಳ ಸಾಗಾಣಿಕೆದಾರರು ದಕ್ಷ ಅರಣ್ಯಾಧಿಕಾರಿ ಗೋಕುಲ್‌ರನ್ನು ಬಲಿ ಹಾಕಲು ಸ್ಕೆಚ್ ಹಾಕಿದರು. ಬಂದರು ಬಳಕೆದಾರರ ಸಭೆ ಕರೆದ ಪಾಲೇಮಾರ್ ಸೀದಾ ಬೇಲೇಕೇರಿಗೆ ಬಂದಿಳಿದುಬಿಟ್ಟಿದ್ದ. ಆ ಸಭೆಗೆ ಅನವಶ್ಯಕವಾಗಿ ಗೋಕುಲ್‌ರನ್ನು ಕರೆದಿದ್ದ. ಆದರೆ ಗೋಕುಲ್ ಬರಲಿಲ್ಲ, ಇದನ್ನೇ ನೆಪವಾಗಿಟ್ಟುಕೊಂಡು ಗೋಕುಲ್ ವರ್ಗಾವಣೆಗೆ ಸರ್ಕಾರದ ಮಟ್ಟದಲ್ಲಿ ಕಿತಾಪತಿ ನಡೆಸಿದ ಪಾಲೇಮಾರ್. ಆಗ ಗೋಕುಲ್ ರಕ್ಷಣೆಗೆ ಖುದ್ದು ನ್ಯಾ. ಸಂತೋಷ್ ಹೆಗ್ಡೆಯೇ ನಿಲ್ಲಬೇಕಾಗಿ ಬಂತು. ಹೆಗ್ಡೆ ಲೋಕಾಯುಕ್ತಗಿರಿಗೇ ರಾಜೀನಾಮೆ ಬಿಸಾಕಿಬಿಟ್ಟರು. ಆಗ ಯಡ್ಡಿ ಸರ್ಕಾರ ಅಲ್ಲೋಲಕಲ್ಲೋಲವಾಯ್ತು. ನಾಡಿನ ಜನ ಹೆಗ್ಡೆ ಪರ ನಿಂತು ರಾಜೀನಾಮೆ ವಾಪಸ್ ಪಡೆಯುವಂತೆ ಮಾಡಿದರು. ಇದೆಲ್ಲ ಈಗ ಇತಿಹಾಸ. ಆಗ ಬೇಲೇಕೇರಿ ಬಂದರು "ಆವಾಜ್" ರಾಜ್ಯಕ್ಕಷ್ಟೇ ಅಲ್ಲ ಇಡೀ ದೇಶಕ್ಕೇ ಕೇಳಿಸಿತ್ತು!!

ಸಿಐಡಿ ನಾಟಕ


ಯಾವಾಗ ಬೇಲೇಕೇರಿ ಬಂದರು ಭಾನ್ಗಡಿ ಜಗಜ್ಜಾಹೀರಾಯ್ತೋ, ಆಗ ಸಿಎಂ ಯಡ್ಡಿಯೂ ಅದಿರು ಮಾಫಿಯಾದ ಪಾಲುದಾರನೆಂಬ ಗುಮಾನಿ ಬಲವಾಯ್ತು. ಇಕ್ಕಟ್ಟಿಗೆ ಸಿಲುಕಿದ ಯಡ್ಡಿ ಲೋಕಾಯುಕ್ತ ನ್ಯಾ. ಹೆಗ್ಡೆ




ಸುರೇಶ್ ಬಾಬು



ಸ್ವಸ್ತಿಕ್ ನಾಗರಾಜ್



ಖಾರಪುಡಿ ಮಹೇಶ್



ನಾಗೇಂದ್ರ

ರಾಜೀನಾಮೆ, ಅದಿರು ಕಳ್ಳತನದ ಪ್ರಕರಣದಿಂದಾದ ಡ್ಯಾಮೇಜ್ ಕಂಟ್ರೋಲ್‌ಗೆ ಸಿಐಡಿ ತನಿಖೆ ಅನಿವಾರ್ಯವಾಗಿ ಘೋಷಿಸಿದರು. ಆದರೆ ಈ ಯಡ್ಡಿ ದಿಗ್ದರ್ಶನದ ಸಿಐಡಿ ತಂಡದಿಂದ ಸತ್ಯ ಹೊರಬರುತ್ತದೆ, ಅಪರಾಧಿಗಳಿಗೆ ಕೋಳ ಬೀಳುತ್ತದೆಂಬ ನಂಬಿಕೆ ಯಾರಿಗೂ ಇರಲಿಲ್ಲ. ಆಗ 'ಪತ್ರಿಕೆ'ಯೂ "ಬೇಲೇ ಕೇರಿ ಕೇಸ್ ಹಳ್ಳ ಹಿಡಿಸಲು ಸಿಐಡಿ ಛೂಬಿಟ್ಟ ಯಡ್ಡಿ" ಎಂಬ ವರದಿ ಪ್ರಕಟಿಸಿತ್ತು. ಅದೀಗ ನಿಜ ವಾಗಿದೆ. ಮೊನ್ನೆ ಸುಪ್ರೀಂ ಕೋರ್ಟ್‌ನ ಹಸಿರು ಪೀಠ ಸಿಬಿಐಗೆ ಬೇಲೇಕೇರಿ ಅದಿರು ನಾಪತ್ತೆ ಪ್ರಕರಣ ಮತ್ತು ಬೇಲೇಕೇರಿ ಬಂದರಿಂದಾದ ಅಕ್ರಮ ಅದಿರು ರಫ್ತುಗಾರಿಕೆ ಹಗರಣ ವಹಿಸುವಾಗ ಸಿಐಡಿ ತಪರಾಕಿಗೆ ಬಾರಿಸಿದೆ!!

ಕಳ್ಳರು! ಕಳ್ಳರು!!

ಬೇಲೇಕೇರಿ ಬಂದರಿಂದ 2006 ರಿಂದ 2... ಅವಧಿಯಲ್ಲಿ 2,03,68,977 ಮೆಟ್ರಿಕ್ ಟನ್ ಅ... ರಫ್ತಾಗಿದೆ. ಇದರಲ್ಲಿ ಪರವಾನಗಿ 1.26 ಲಕ್ಷ ಮೆ... ಟನ್‌ಗೆ ಮಾತ್ರ ಇತ್ತು. 2009-10 ರಲ್ಲಿ 36-50... ಮೆಟ್ರಿಕ್ ಟನ್ ಅದಿರು ಅಕ್ರಮವಾಗಿ ಈ ಬಂದ... ಹೊರದೇಶಕ್ಕೆ ಹೋಗಿದೆ. 2010-11 ರ ಏಪ್ರಿಲ್-ಮೆ... 11.59 ಲಕ್ಷ ಮೆಟ್ರಿಕ್ ಟನ್ ಅದಿರು ರಫ್ತಾಗಿದೆ.

ಸಿಇಸಿ ಸುಪ್ರೀಂಕೋರ್ಟಿಗೆ ಸಲ್ಲಿಸಿದ ವರದಿಯಲ್ಲಿ ... ಇಲಾಖೆ ಸೀಜ್ ಮಾಡಿದ್ದ 8.05 ಲಕ್ಷ ಮೆಟ್ರಿಕ್ ... ಅದಿರಲ್ಲಿ 7.57 ಲಕ್ಷ ಮೆಟ್ರಿಕ್ ಟನ್ ಅದಿರು ಕಳ್ಳತನವ... ಎಂದು ಹೇಳಿದೆ. ಇದರಲ್ಲಿ ಸೈಲ್‌ನ ಮಲ್ಲಿಕಾರ್ಜುನಾ ಶಿ... 3.21 ಲಕ್ಷ ಮೆಟ್ರಿಕ್ ಟನ್, ಅದಾನಿ ಕಂಪನಿ 3.25 ... ಮೆಟ್ರಿಕ್ ಟನ್, ಸಾಲ್ಗಾಂವ್ಕರ್ ಕಂಪನಿ 91.27 ... ರಾಜಮಹಲ್ ಸಿಲ್ಕ್ ಕಂಪನಿ 17.39 ಸಾವಿರ ಟನ್ ... ನಿರ್ಯಾತ ಮಾಡಿದೆ ಎಂದು ಸಿಇಸಿ ಸ್ಪಷ್ಟವಾಗಿ ಕಳ್ಳ... ಗುರುತಿಸಿದೆ. ಸಿಬಿಐ ಇವರ ಬಿಟ್ಟೀತಾ?

ಸುಪ್ರೀಂನ ಹಸಿರು ಪೀಠ ಕರ್ನಾಟಕ ಸರ್ಕಾರದ ಸಿ... ತನಿಖೆ ವಿಶ್ವಾಸಾರ್ಹವಲ್ಲ ಎಂದು ನೇರಾನೇರವಾಗಿ ಹೇ... ಸಿಐಡಿ ತನಿಖೆ ಬದಿಗೊತ್ತುವಂತೆ ಹೇಳಿದೆ. ... ಪ್ರಕರಣದಲ್ಲಿ ಚೆಡ್ಡಿ ಸರ್ಕಾರ ನಡೆದುಕೊಂಡ ರೀತಿಯ... ಅನುಮಾನಿಸಿದೆ. ಸಿಐಡಿ ತನಿಖೆ ಬಗ್ಗೆ ಅತೃಪ್ತಿ ವ್ಯಕ್ತಪಡಿ... ಸಿಐಡಿಯ ಆರೋಪ ಪಟ್ಟಿ, ಮತ್ತಿತರ ವರದಿಗಳನ್ನು ಸು... ಸಾರಾಸಗಟಾಗಿ ತಿರಸ್ಕರಿಸಿದೆ! ಹೊಸದಾಗಿ ತನಿಖೆ ನಡೆಸು... ಸಿಬಿಐಗೆ ಆದೇಶಿಸಿದೆ. ಸಿಐಡಿ ಅಂಕೋಲಾ ನ್ಯಾಯಾಲ... ದಲ್ಲಿ ಬರೋಬ್ಬರಿ 1.5 ಲಕ್ಷ ಪುಟಗಳ ಚಾರ್ಜ್ ಶೀ... ಸಲ್ಲಿಸಿತ್ತು! ಈ ಆರೋಪ ಪಟ್ಟಿಯಲ್ಲಿ ಹಡಗುಗಟ್ಟಲೆ-ಲ... ಲೋಡ್‌ಗಟ್ಟಲೆ ಅದಿರು ನುಂಗಿದ ತಿಮಿಂಗಿಲ-ಹೆಗ್ಗಣಗ... ಕಾನೂನಿನ ಬೋನಿಗೆ ಕೆಡುವುವ ಯಾವ ಪ್ರಾಮಾ... ಉದ್ದೇಶ, ಕರ್ತವ್ಯ ನಿಷ್ಠೆ ಇರಲೇ ಇಲ್ಲ.

ಸಿಐಡಿ ಎಂಬ ಯಡ್ಡಿ-ರೆಡ್ಡಿ-ಚೆಡ್ಡಿ ಗ್ಯಾಂ... ಹಿತಕಾಯುವ ಖಾಕಿ ಪಡೆಯ ಡಿವೈಎಸ್‌ಪಿ ಮು... ಮಹದೇವ ಮತ್ತು ಎಸ್‌ಪಿ ಭೀಮಯ್ಯರಿಗೆ ಬೇಲೇಕೇ... ಅದಿರು ನಾಪತ್ತೆ ಪ್ರಕರಣ ಆರಂಭದಿಂದಲೂ ಗಂಭೀರವ... ಕಾಣಿಸಿರಲೇ ಇಲ್ಲ. ಅದಿರು ಕಳ್ಳ ಸಾಗಾಣಿಕೆ ಮಾ... "ಗಣ್ಯ"ರನ್ನು ಈ ಖಾಕಿ ಸಾಹೇಬರು ಮುಟ್ಟಲೇ ಇ... ಬಡಪಾಯಿ ಬಂದರು ಸಂರಕ್ಷಣಾಧಿಕಾರಿ ಮಹೇಶ್ ಬಿಲಿ... ಎಂಬಾತನ ಮೇಲೆ ಮಾತ್ರ ಬರೋಬ್ಬರಿ 25 ಕೇಸ್ ... ಸಿಐಡಿ ಶೂರರು ಜಡಿದಿದ್ದರು! ಸಿಐಡಿ ತನಿಖೆಯಲ್ಲಿ ಅದಿ... ಕಳ್ಳತನದ ಸೂತ್ರಧಾರ ಜಿ. ಜನಾರ್ದನ ರೆಡ್ಡಿಯ ಹೆ... ಬದಲಾಗಿ ಹೋಗಿತ್ತು. ಸಿಐಡಿ ಪ್ರಕಾರ ಹಗರಣದಲ್ಲಿದ್ದ... ಕೆ. ಜನಾರ್ದನ್!! ಹೇಗಿದೆ ಸಿಐಡಿಯ ಕರ್ತವ್ಯನಿಷ್ಠೆ?

ತೋರಿಕೆಗಷ್ಟೇ ಅದಿರು ಮೌಲ್ಯಮಾಪನ ಮಾ... ಸಿಐಡಿಗಳು 80 ಅದಿರು ಕಂಪನಿ ಮತ್ತು 36 ...


ಗಣಿ ಸಗಣಿ ಯಾರ್‍ಯಾರಿಗೆ ಎಷ್ಟೆಷ್ಟು?

ಲೋಕಾಯುಕ್ತರಿಗೆ ದಕ್ಷ ಅರಣ್ಯ ಅಧಿಕಾರಿ ಯು.ವಿ. ಸಿಂಗ್ ಕೊಟ್ಟಿದ್ದ ವರದಿಯಲ್ಲಿ ಯಾರ್‍ಯಾರಿಗೆ ಯಾವ್ಯಾವ ಅವಧಿ-ಮಾಪನದಲ್ಲಿ ಗಣಿ ಮಾಫಿಯಾ ಲಂಚ-ಹಫ್ತಾ-ಮಾಮೂಲಿ-ಮಂತ್ಲಿ ಕೊಡುತ್ತಿತ್ತೆಂಬುದನ್ನು ವಿವರಿಸಿದ್ದಾರೆ. ಮಲ್ಲಿಕಾರ್ಜುನಾ ಶಿಪ್ಪಿಂಗ್ (ಸೈಲ್) ಮತ್ತು ಅದಾನಿ ಕಂಪನಿಗಳು ತಮ್ಮ ಅಡ್ಡಕಸುಬನ್ನು ಅನುಕೂಲ ಮಾಡಿಕೊಳ್ಳಲು ಅಧಿಕಾರಿಗಳಿಗೆ, ಶಾಸಕ, ಸಂಸದರಿಗೆ ನಿಯಮಿತವಾಗಿ ಮಾಮೂಲಿ ಅರ್ಪಿಸುತ್ತಿತ್ತು. ಹಾಗೆಯೇ ಜನಾರ್ದನ ರೆಡ್ಡಿಯ ದೋಖಾ ದೋಸ್ತ್‌ಗಳಾದ ಖಾರಪುಡಿ ಮಹೇಶ್ ಮತ್ತು ಸ್ವಸ್ತಿಕ್ ನಾಗರಾಜ್ ಬಳ್ಳಾರಿಯಿಂದ ಬೇಲೇಕೇರಿ-ಬೈತಕೋಲ್ (ಕಾರವಾರ) ಬಂದರಿನವರೆಗಿನ ವಿವಿಧ ಅಧಿಕಾರಿಗಳನ್ನು ಲಂಚದ ಗಂಟಿನಿಂದಲೇ ಪಳಗಿಸುತ್ತಿದ್ದರು. ಇದಕ್ಕವರು "ರಿಸ್ಕ್ ಮನಿ" ಎಂದೇ ಅಡ್ಡನಾಮಕರಣವೂ ಮಾಡಿದ್ದರು.

ಎಲ್ಲ ರಫ್ತುದಾರ ಕಂಪನಿಗಳು-ಸಾಗಾಣಿಕೆದಾರರು ಲಂಚದ ಹಣ ಒಟ್ಟುಗೂಡಿಸಿ ಅಧಿಕಾರಿ-ಮಂತ್ರಿ-ಶಾಸಕ-ಸಂಸದರಿಗೆ ಹಂಚುತ್ತಿದ್ದರು. ಈ ಟರ್ನ್ ಓವರ್ ಅದಿರು ಸೀಜನ್‌ನಲ್ಲಿ ಹಲವು ಕೋಟಿ ಮೀರುತ್ತಿತ್ತು. ಶಾಸಕ-ಸಂಸದರಿಗೆ ಏಕಗಂಟಿನಲ್ಲಿ ಬಂಡಾವರ್ತಿ ಕಾಣಿಕೆ ಕೊಡಲಾಗುತ್ತಿತ್ತು. ಇದು ಅದಿರು ಸಾಗಾಟದ ಏರಿಯಾದವರಿಗೆ ಮಾತ್ರ ಸಿಗುತ್ತಿತ್ತು. ಕರಾವಳಿ ನಿಯಂತ್ರಣ ವಲಯ, ತೂಕ-ಅಳತೆ ಇಲಾಖೆ, ತಹಶೀಲ್ದಾರ್, ಎಸಿ, ಮಾಲಿನ್ಯ ನಿಯಂತ್ರಣ ಮಂಡಳಿ, ಭೂ ವಿಜ್ಞಾನ ಇಲಾಖೆ, ಲೋಕೋಪಯೋಗಿ ಇಲಾಖೆಯ ಲಂಚಬಡಕ-ಕರ್ತವ್ಯ ಭ್ರಷ್ಟರಿಗೆ ನಿಯಮಿತವಾಗಿ ಗಣಿ ಅಮೇಧ್ಯ ಹಂಚಲಾಗುತ್ತಿತ್ತು.

ಒಂದು ತನಿಖೆ ಪ್ರಕಾರ ಲಂಚ ಹಂಚುವಿಕೆ ಚಾರ್ಟ್ ಹೀಗಿದೆ.


ಎಸ್‌ಪಿ	1,00,000 (ಎರಡು ತಿಂಗಳಿಗೊಮ್ಮೆ)
ಎಎಸ್‌ಪಿ	25,000 (ಪ್ರತಿ ತಿಂಗಳಿಗೆ)
ಡಿಎಸ್‌ಪಿ	10,000 (ಪ್ರತಿ ತಿಂಗಳಿಗೆ)
ಸಿಪಿಐ	14,000 (ಪ್ರತಿ ತಿಂಗಳಿಗೆ)
ಚೆಕ್‌ಪೋಸ್ಟ್‌ಗಳಿಗೆ	ತಲಾ 2,000
ಬಂದರು ನಿರ್ದೇಶಕ	50,000 (ಪ್ರತಿ ಹಡಗಿಗೆ)
ಬಂದರು ಸಂರಕ್ಷಣಾಧಿಕಾರಿ	25,000 (ಪ್ರತಿ ಹಡಗಿಗೆ)
ಬಂದರು ಉಪಸಂರಕ್ಷಣಾಧಿಕಾರಿ	5,000 (ಪ್ರತಿ ಹಡಗಿಗೆ)
ಆಫೀಸ್ ಸಿಬ್ಬಂದಿಗೆ	5,500 (ಪ್ರತಿ ಹಡಗಿಗೆ)
ಕಸ್ಟಮ್ಸ್‌ನವರಿಗೆ (2006 ರ ತನಕ)	12,000 (ಪ್ರತಿ ಹಡಗಿಗೆ)
2006 ರಿಂದ 2008 ರ ತನಕ	6,000 (ಪ್ರತಿ ಹಡಗಿಗೆ)



2008 ರ ನಂತರ 0.50 ಪೈಸೆ ಪ್ರತಿ ಮೆಟ್ರಿಕ್ ಟನ್‌ಗೆ ಮತ್ತು ಮೂರು ತಿಂಗಳಿಗೊಮ್ಮೆ 1 ಲಕ್ಷ ರೂಪಾಯಿ

ಈ ಲಂಚ ಅಕ್ರಮ ಅದಿರು ಕಂಪನಿ ಕಳ್ಳರು, ರಫ್ತುದಾರರು, ಲಾರಿ ಒಡೆಯರು ಕೂಡಿಸಿ ಒಂದೇ ಮೊತ್ತದಲ್ಲಿ ಕೊಡುವುದು ವಾಡಿಕೆಯಾಗಿತ್ತು, ಕೆಲವೊಮ್ಮೆ ಒಂದೊಂದು ಕಂಪನಿ ಪ್ರತ್ಯೇಕವಾಗಿ ಮಾಮೂಲಿ ಕೊಡುತ್ತಿತ್ತು, ಅಂದರೆ ಅಧಿಕಾರಿಗಳಿಗೆ ಇದಕ್ಕಿಂತ ಐದಾರು ಪಟ್ಟು ಹೆಚ್ಚು ಲಂಚವೂ ಸಿಗುತ್ತಿತ್ತಂತೆ.

...ಾಗೇರಿ ಪಾಲೆಷ್ಟು?


ಕಾಗೇರಿ

...ಪ್ಪಾ ಚೆಡ್ಡಿ-ಸ್ವಯಂಘೋಷಿತ ಪರಮ ಪವಿತ್ರ ಹಿಂದೂವಾದಿ-ಉತ್ತರ ಕನ್ನಡ ...ವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಮೂಣಿಗೆ ಅದಿರು ಮಾಫಿಯಾದ ...ಧ್ಯ ಸಿಗುತ್ತಿತ್ತಾ? ಸಂಶಯವೇ ಇಲ್ಲ, ಮಂತ್ರಿ ಕಾಗೇರಿ ಮತ್ತು ಅನಾಹುತಕಾರಿ ...ೂ ಸಂಸದ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿಗೆ ಗಣಿ ಸಗಣಿ ...ಜಾನಾಗಿ ದಕ್ಕುತ್ತಿತ್ತು!!


...ತ್‌ಕುಮಾರ್ ಹೆಗ್ಡೆ

ಉತ್ತರ ಕನ್ನಡ ಉಸ್ತುವಾರಿ ಮಂತ್ರಿಗಳಿಗೆ ಕಪ್ಪ ಕೊಡುವ ಪದ್ಧತಿ ಶುರುವಾಗಿದ್ದು ಕೋಜಾ ಸರ್ಕಾರದಲ್ಲಿ ಮಂತ್ರಿಯಾಗಿದ್ದ-ಈಗ ಕೆಎಸ್‌ಡಿಎಲ್‌ನ ಅಧ್ಯಕ್ಷನಾಗಿರುವ- ಶಿವಾನಂದ ನಾಯ್ಕರ ಕಾಲ ಕೀರ್ದಿಯಲ್ಲಿ. ಆಗ ಸೀಜನ್‌ಗೆ ಐದಾರು ಲಕ್ಷವಷ್ಟೇ' ಸಿಗುತ್ತಿತ್ತಂತೆ. ಯಡ್ಡಿಯ ಪೂರ್ಣ ಪ್ರಮಾಣದ ಲೂಟಿ ಸರ್ಕಾರ ಬಂದಮೇಲೆ ಕಾಗೇರಿ "ಕಿಮ್ಮತ್ತು" ಏರಿತ್ತು. ಒಂದು ತರ್ಕದ ಪ್ರಕಾರ ಕಾಗೇರಿಗೆ ಬೇರೆಬೇರೆ ಅದಿರು ಕಂಪನಿಗಳವರು-ರಫ್ತುದಾರರು ಬೇರೆ-ಬೇರೆ ರೇಟ್ ಫಿಕ್ಸ್ ಮಾಡಿದ್ದರಂತೆ. ಇದು ಸೀಜನ್‌ಗೆ ಬರೋಬ್ಬರಿ 25 ಲಕ್ಷ ಎಂದು ಅದಿರು ಅವ್ಯವಹಾರದ ಅಂತರಂಗ ಬಲ್ಲವರ ವಿಶ್ಲೇಷಣೆ.

ಸಂಸದ ಅನಂತ್ಮಾಣಿಗೆ ಆತನ ಚೇಲ-ಯುವ ಬಿಜೆಪಿಯ ಮಾಜಿ ಜಿಲ್ಲಾಧ್ಯಕ್ಷ ಅರುಣ ನಾಯ್ಕ ಗಣಿ ದಂಧೆಕೋರರಿಂದ ಒಟ್ಟುಗೂಡಿಸಿದ ಹಣ ಒಯ್ದು ಕೊಡುತ್ತಿದ್ದರೆ, ...ೇವೆ ಕಾಗೇರಿಗೆ ಅಂಕೋಲಾ ಮುನ್ಸಿಪಾಲ್ಟಿ ಅಧ್ಯಕ್ಷನೂ-ಅನಾದಿ ಕಾಲದ ಆತ್ಮೀಯ ಚೇಲನೂ ಆದ ಭಾಸ್ಕರ್ ...ಕರ್ ಮಾಡುತ್ತಿದ್ದ! ಎಸಿ, ಡಿಸಿಗೆ ಡ್ರೀಮ್ ಲಾಜಸ್ಟಿಕ್‌ನ ಮಾಣಿ ವಿವೇಕ್ ಹೆಬ್ಬಾರ್ ವಂತಿಗೆ ಒಪ್ಪಿಸುತ್ತಿದ್ದ.

...ರ್ಕಾರಿ ಅಧಿಕಾರಿಗಳು ಅದಿರು ನಾಪತ್ತೆ ಪ್ರಕರಣದಲ್ಲಿ ...ಯಾಗಿದ್ದಾರೆಂದು ಜಾಳು-ಜಾಳು ವರದಿಯೊಂದನ್ನು ...ಮಾಡಿತ್ತು. ಸುಮಾರು 1,500 ಕೋಟಿ ರೂ.ಗಳ ...ು ಅದಿರು ಬೇಲೇಕೇರಿ ಬಂದರಿಂದ ಕಳ್ಳ ...ಟಿಕೆಯಾಗಿದ್ದರೂ ಸಿಐಡಿ ಪೊಲೀಸರು ಕಟ್ಟುನಿಟ್ಟಿನ ...-ವಿಚಾರಣೆ ಏನೂ ನಡೆಸಿರಲಿಲ್ಲ. ಖಡಕ್ ಸೆಕ್ಷನ್ ...ದೂ ಕಳ್ಳರ ಮೇಲೆ ಹಾಕಿರಲಿಲ್ಲ. ಹಾಕಿದ್ದೆಲ್ಲ ...ಐಪಿಸಿ ಸೆಕ್ಷನ್‌ಗಳಾದ 120(ಬಿ), 379, 411 ಮತ್ತು ... ಗಂಭೀರ ಅಪರಾಧವಾದ ಸರ್ಕಾರಿ ಸ್ವತ್ತನ್ನು ...ಗಿರಿಯಿಂದ ಕದ್ದಿದ್ದು, ಹೊರದೇಶಕ್ಕೆ ರಫ್ತು ಮಾಡಿದ್ದು ...ಮಾರಿ ಅಕ್ರಮ ಹಣ ಸಂಪಾದಿಸಿದ್ದು ಸಿಐಡಿ ...ರ ನದರಿಗೇ ಬರಲಿಲ್ಲ. ಅರ್ಥಾತ್ ಅದಿರು ಕದ್ದ ...ವರು ಮತ್ತು ಅಧಿಕಾರಿಗಳು ಸಲೀಸಾಗಿ ...ಾಗುವಂತೆ ಚಾರ್ಜ್ ಶೀಟ್ ಸಿಐಡಿ ರೆಡಿ ಮಾಡಿತ್ತು. ...ಸರ್ಕಾರದ ಸಿಐಡಿ ಪೊಲೀಸರ ಲೋಪ-ದೋಷ ...ಂ ಕೋರ್ಟ್‌ಗೆ ಕರಾರುವಾಕ್ಕಾಗೇ ಕಾಣಿಸಿದೆ!

...ನವರು ಸಿಐಡಿ ಅಧಿಕಾರಿಗಳನ್ನು ...ಗೊಳಪಡಿಸಿದರೆ ಬಿಜೆಪಿ ಸರ್ಕಾರ ...ರ್ಗದರ್ಶನ"ದ ಅಸಲಿಯತ್ತು ...ಬಂದೇ ಬರುತ್ತದೆ! ಯಡ್ಡಿ-ರೆಡ್ಡಿ ...ವಾಡ ಹರಿಯುತ್ತದೆ!


ಡಿಐಜಿ ಗುರುಪ್ರಸಾದ್

...ಬೇಲೇಕೇರಿ ಅದಿರು ನಾಪತ್ತೆ ...ಣವನ್ನು ಸಮಾಧಿ ಮಾಡಲೆಂದೇ ...ಪಿ ಸರ್ಕಾರ ಸಿಐಡಿ ತನಿಖೆಯ ...ಕ ಆದಿತ್ತಲ್ಲವಾ? ಹೀಗಿರುವಾಗ ...ಯ ತನಿಖಾಧಿಕಾರಿಗಳಾದ ಮುದ್ದು ...ದೇವ ಮತ್ತು ಭೀಮಯ್ಯ ಅಥವಾ ...ರ ಅಧೀನಾಧಿಕಾರಿಗಳಿಗೆ ಚೋರರು-...ನಕ್ಕೆ ಸಹಕರಿಸಿದ ಅಧಿಕಾರಿಗಳು ...ಸುವುದಾದರೂ ಹೇಗೆ? ಆದರೆ ಸುಪ್ರೀಂಕೋರ್ಟ್ ...ಸಿ (ಉನ್ನತಾಧಿಕಾರ ಸಮಿತಿ)ಗೆ ಅದಿರು ಕಳ್ಳತನ, ...ನೂನುಬಾಹಿರ ರಫ್ತುಗಾರಿಕೆಯ ನಿಖರ ಜಾಡು ಕಂಡಿದೆ! ...ವರಿ 1, 2009 ರಿಂದ ಮೇ 31, 2010 ರ ...ದ 17 ತಿಂಗಳಲ್ಲಿ ಅಕ್ರಮ ಗಣಿಗಾರಿಕೆಯಿಂದ ತೆಗೆದ ...79 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಬೇಲೇಕೇರಿ ...ದರಿನಿಂದ ಕಾನೂನುಬಾಹಿರವಾಗಿ ರಫ್ತು ಮಾಡಲಾಗಿದೆ. ...ರ ಅರಿವಿಲ್ಲವೆಂದು ಹೇಳುವ ಕರ್ನಾಟಕ ಸರ್ಕಾರದ ...ತನ್ನು ನಂಬಲಾಗದು ಎಂದು ಸುಪ್ರೀಂ ಛಡಿ ಏಟು ...ಟ್ಟಿದೆ. ಅಷ್ಟೇ ಅಲ್ಲ, ಬೇಲೇಕೇರಿ ಬಂದರಿಗೆ ಬಳ್ಳಾರಿ ...ಯಿಂದ 17 ತಿಂಗಳಲ್ಲಿ 5 ಲಕ್ಷ ಟ್ರಕ್- ಲೋಡ್ ...ರು ಬಂದಿದೆ. ಇದೆಲ್ಲ ಕರ್ನಾಟಕ ಸರ್ಕಾರದ ಸಿಬಿಐ ...ತ್ತು ಸಿಐಡಿಯಂಥ ಗುಪ್ತಚರ ದಳಕ್ಕೆ ಗೊತ್ತಿಲ್ಲವೆಂದರೆ ...ರ್ಥ? ಎಂದು ಬಿಜೆಪಿ ಸರ್ಕಾರದ ಮಾನ ಹರಾಜು ...ದೆ!!

ಕಳ್ಳರ ದಂಡು!

...ಸಿಬಿಐ ತನಿಖೆಗೆ 40 ಹೆಚ್ಚು ಅಕ್ರಮ ಅದಿರು ...ಗಾಟದಾರರು ಮತ್ತು 51 ಗೋಲ್‌ಮಾಲ್ ಅದಿರು ...ಫ್ತುದಾರರು ಒಳಪಡುವ ಸೂಚನೆಗಳು ಗೋಚರಿಸುತ್ತಿವೆ. ...ಲೇಕೇರಿ ಬಂದರಿಂದ 17 ತಿಂಗಳ ಅವಧಿಯಲ್ಲಿ ಅದಿರು ...ಗೆ ಪರವಾನಗಿ ಇದ್ದಿದ್ದು 30 ಲಕ್ಷ ಮೆಟ್ರಿಕ್ ಟನ್‌ಗೆ ...ತ್ತು. ಆದರೆ 50.79 ಲಕ್ಷ ಮೆಟ್ರಿಕ್ ಅದಿರು ...ಕ್ರಮವಾಗಿ ನಿರ್ಯಾತವಾಗಿದೆ. ಈ ಅಕ್ರಮ ಆಟ ...ಂತರ-ನಿರಾತಂಕವಾಗಿ ನಡೆದಿದೆ. ಇದಕ್ಕೆ ಬಂದರು, ...ಸ್ಟಮ್ಸ್, ವಾಣಿಜ್ಯ ತೆರಿಗೆ, ಅರಣ್ಯ, ಸಾರಿಗೆ, ಕಸ್ಟಮ್ಸ್.... ...ಂತಾದ ಇಲಾಖೆಯ ಅಧಿಕಾರಿಗಳು ಕಣ್ಣುಮುಚ್ಚಿ ನೆರವಾಗಿದ್ದಾರೆ. ತಮ್ಮ ಪಾಲಿಗೆ ಬಂದ ಪ್ರಸಾದ-ತೀರ್ಥ ಶ್ರದ್ಧೆಯಿಂದ ಪಡೆದು ಪಾವನರಾಗಿದ್ದಾರೆ.

ಈ ಪ್ರಕರಣದಲ್ಲಿ ಮಾಜಿ ಸಿಎಂ ಯಡ್ಡಿ, ಆತನ ಮಗ ಮಹಾಶಯ-ಸಂಸದ ರಾಘವೇಂದ್ರ, ಜನಾರ್ದನ ರೆಡ್ಡಿ, ಶ್ರೀರಾಮುಲು, ಆತನ ಪತ್ನಿ ಭಾಗ್ಯಲಕ್ಷ್ಮೀ, ಶಾಸಕ ಸುರೇಶ್ ಬಾಬು, ಮತ್ತೊಬ್ಬ ಎಮ್ಮೆಲ್ಲೆ ಜಿ. ನಾಗೇಂದ್ರ, ಜ. ರೆಡ್ಡಿ ಆಪ್ತಮಿತ್ರ ಮೆಹೂಜ್ ಅಲಿಖಾನ್, ರೆಡ್ಡಿಯ ಗಣಿ ಲೂಟಿ ದಂಧೆಯ ಸೇನಾಧಿಪತಿಗಳಾದ ಸ್ವಸ್ತಿಕ್ ನಾಗರಾಜ್ ಮತ್ತು ಖಾರಾಪುಡಿ ಮಹೇಶ್, ಜನಾರ್ದನ ರೆಡ್ಡಿಯ ದೋಸ್ತ್ ಕೋಪ್ಪೂರ್ ಸೋಮಶೇಖರ್, ಕಾರವಾರ ಕಾಂಗ್ರೆಸ್ ಲೀಡರ್ ಸತೀಶ್ ಸೈಲ್, ಈ ಅವ್ಯವಹಾರಿ ದರೋಡೆಕೋರರ ಜೊತೆಗೆ ಅಂದು ಬಳ್ಳಾರಿಯಲ್ಲಿದ್ದ ಅರಣ್ಯ, ಭೂವಿಜ್ಞಾನ, ಸಾರಿಗೆ, ಗೃಹ ಇಲಾಖೆಯ ದೊಡ್ಡ ಅಧಿಕಾರಿಗಳ ಗಣ ಹಾಗು ಬಳ್ಳಾರಿಯಿಂದ ಕಾರವಾರ-ಬೇಲೇಕೇರಿ ತನಕದ ಚೆಕ್‌ಪೋಸ್ಟ್‌ಗಳಲ್ಲಿ "ಸೇವೆ" ಮಾಡುತ್ತಿದ್ದ ಸರ್ಕಾರಿ ಅಧಿಕಾರಿಗಳು ಶಾಮೀಲಾಗಿರುವುದು ಬಹಿರಂಗ ರಹಸ್ಯ. ಕಾರವಾರ-ಬೇಲೇಕೇರಿ ಎರಡೂ ಕಡೆಯ ಬಂದರು ಅಧಿಕಾರಿಗಳಿಗೂ ಅಕ್ರಮ ಅದಿರು ಮಾಫಿಯಾದ ಸದಸ್ಯರು ಇವರಿಗೆಲ್ಲ ಸಿಬಿಐ ಬೆನ್ನಟ್ಟಲಿರುವುದಂತೂ ಖಾತ್ರಿ!!

ಸಿಇಸಿ ವರದಿ ತುಂಬ ಸ್ಪಷ್ಟವಾಗಿದೆ. ಇದರಲ್ಲಿ ಯಾರ್ಯಾರು ಎಷ್ಟೆಷ್ಟು ಅಕ್ರಮ ಅದಿರು ಸಾಗಾಣಿಕೆ-ರಫ್ತು ಮಾಡಿ ದ್ದಾರೆಂಬ ನಿಖರ ಉಲ್ಲೇಖಗಳಿವೆ! ಜನಾರ್ದನ ರೆಡ್ಡಿಯ ಖಾಸಾ ಆದ್ಮಿಗಳಾದ ಸೋಮಶೇಖರ ಕೋಪ್ಪೂರ್, ಶೇಖರ ಕೋಪ್ಪೂರ್ ಮತ್ತು ವರಪ್ರಸಾದ್ ರೆಡ್ಡಿಗೆ ಸೇರಿದ ಐಎಲ್‌ಸಿ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿ 9.86 ಲಕ್ಷ ಮೆಟ್ರಿಕ್ ಟನ್ ಅದಿರು ಹಡಗೇರಿಸಿ ವಿದೇಶಕ್ಕೆ ಕಳಿಸಿದೆ! ಯಲ್ಲಾಪುರ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಶಿವರಾಮ ಹೆಬ್ಬಾರ್ ಎಂಬ ಚೋರ ವಿಪ್ರೋತ್ತಮನ ಸುಪುತ್ರ ವಿವೇಕ್ ಹೆಬ್ಬಾರ್‌ನ ಡ್ರೀಮ್ ಲಾಜಿಸ್ಟಿಕ್ ಕಂಪನಿ 9.16 ಲಕ್ಷ ಮೆಟ್ರಿಕ್ ಟನ್ ಅದಿರು ರಫ್ತು ಮಾಡಿದೆ. ಸತೀಶ್ ಸೈಲ್‌ನ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯೂ ಅದಿರು ಕಳ್ಳ ಸಾಗಾಣಿಕೆ ಮಾಡಿದೆ. ಸಾಕ್ಷಾತ್ ಖದೀಮ ಜನಾರ್ದನ ರೆಡ್ಡಿ ಮತ್ತು ಡಿ. ಭೀಮರಾಜ್‌ಗೆ ಸೇರಿದ ಎಸ್.ಬಿ. ಲಾಜಿಸ್ಟಿಕ್ ಕಂಪನಿ 7.74 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಕದ್ದು ವಿದೇಶಕ್ಕೆ ಕಳಿಸಿದೆ. ಹಾಗೆಯೇ ಕೂಡ್ಲಗಿ ಶಾಸಕ ಜಿ. ನಾಗೇಂದ್ರನ ಎಂ.ಎಸ್. ಈಗಲ್ ಟ್ರೇಡರ್ಸ್ ಕಂಪನಿ, ಜನಾರ್ದನ ರೆಡ್ಡಿಯ ಮತ್ತೊಬ್ಬ ದೋಖಾ ದಂಧೆ ದೋಸ್ತ್ ಅಲಿಖಾನ್‌ನ ಸಫಿಯಾ ಮಿನರಲ್ಸ್, ಗೂಂಡಾ ಸ್ವಸ್ತಿಕ್ ನಾಗರಾಜ್‌ನ ಸ್ವಸ್ತಿಕ್ ಸ್ಟೀಲ್ ಕಂಪನಿ, ಸಂಸದ ಅನಿಲ್ ಲಾಡ್‌ನ ವಿ.ಎಸ್. ಲಾಡ್ ಕಂಪನಿ, ಪದ್ಮನಿ ಗೋವಿಂದರಾಜ್‌ನ ಎಸ್.ವಿ.ಕೆ. ಮಿನರಲ್ಸ್ ಕಂಪನಿಗಳೂ ಲಕ್ಷಾಂತರ ಮೆಟ್ರಿಕ್ ಟನ್ ಅದಿರು ಅಕ್ರಮವಾಗಿ ವಿದೇಶಕ್ಕೆ ರವಾನಿಸಿ ಕಳ್ಳ ಕುಬೇರರಾಗಿದ್ದಾರೆ. ಇವರಿಗೆಲ್ಲ ಸಿಬಿಐ ಸಂಕಟ ಮೂಡಿಸಲಿದೆ.

ನಾಡಿನ ಪ್ರಾಕೃತಿಕ ಸಂಪತ್ತನ್ನು ರಾಜಾರೋಷವಾಗೇ ಕದ್ದು "ದೊಡ್ಡ ಜನ" ಆಗಿದ್ದವರ ಬಂಡವಾಳ ಬಯಲಾಗುವ ದಿನವಂತೂ ಬಂದಿದೆ. ಸುಪ್ರೀಂ ಸಿಬಿಐ ಆರು ವಾರದಲ್ಲಿ ತನಿಖೆ ಕೈಗೊಂಡು ವರದಿ ಕೊಡಲು ಹೇಳಿದೆ. ಒಂದಂತೂ ಖರೆ. ಬೇಲೇಕೇರಿ ಬಂದರಿನಲ್ಲಿ ಸೀಜ್ ಮಾಡಿಟ್ಟ ಅದಿರು ಕಳ್ಳತನದ ಕೇಸ್ ಮತ್ತು ಅಕ್ರಮ ಗಣಿಗಾರಿಕೆ-ರಫ್ತುಗಾರಿಕೆ ಪ್ರಕರಣಗಳು ತಾರ್ಕಿಕ ಅಂತ್ಯ ತಲುಪುತ್ತಿದೆ!

"ಉಪ್ಪು" ತಿಂದೋರು "ನೀರು" ಹುಡುಕುತ್ತಿದ್ದಾರೆ!!

• ನರುಪ

ಪ್ರೊಟೋಕಾಲ್ ಪ್ರಾಬ್ಲಂ

ಅದೊಂದು ಇಲಾಖೆಯ ಕಟ್ಟಡ. ಅದು ಬೇಕೇ ಬೇಕೆಂದು ಯಾರೂ ಒತ್ತಾಯ ಮಾಡಿರಲಿಲ್ಲ. ಆದರೆ ಮಂತ್ರಿಯ ಆಪ್ತಬಂಧುವಿಗೆ ಸಹಾಯ ಮಾಡಲೆಂದು ನಿರ್ಮಾಣಗೊಂಡ ಕಟ್ಟಡ. ಆದ್ದರಿಂದ ಕಳಪೆ ಕಾಮಗಾರಿಯಲ್ಲಿ ಕಟ್ಟಿಸಿಕೊಂಡು ಉದ್ಘಾಟನೆಗಾಗಿ ಕಾಯುತ್ತಿತ್ತು. ಅದರ ಉದ್ಘಾಟನೆಯ ರಗಳೆಯೂ ಯಾರಿಗೂ ಬೇಕಿರಲಿಲ್ಲವಾದ್ದರಿಂದ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಸುಮ್ಮನಿದ್ದರು. ಆದರೆ ಮುನಿಸಿಪಲ್ ಅಧ್ಯಕ್ಷ ಮತ್ತು ಕೌನ್ಸಿಲರುಗಳು ಏನಾದರೂ ಮಾಡಿ ಅದರ ಉದ್ಘಾಟನೆ ನೆರವೇರಿಸಬೇಕೆಂದು ಇಲಾಖೆಯ ಅಧಿಕಾರಿಗಳ ಮೇಲೆ ಒತ್ತಡ ತಂದರು.

ಅದೇ ಸಮಯಕ್ಕೆ ಸರಿಯಾಗಿ ಸರಕಾರ ಮೂರನೇ ಬಾರಿಗೆ ಬದಲುಗೊಂಡು ಇಬ್ಬರು ಉಪಮುಖ್ಯಮಂತ್ರಿಗಳು ಮತ್ತು ಜೈಲಿಗೆ ಹೋರಟವರೆಲ್ಲ ಮಂತ್ರಿಗಳಾದ್ದರಿಂದ ಕರೆದ ಕೂಡಲೇ ಯಾವನಾದರೂ ಬಂದು ಉದ್ಘಾಟಿಸುತ್ತಾನೆಂದು ಹಗುರವಾಗಿ ಚಿಂತಿಸಿದ ತಳವಾರ ಸಾಹೇಬರು ತಮ್ಮ ಸಹೋದ್ಯೋಗಿ ಮತ್ತು ಸಹಾಯಕ ಅಧಿಕಾರಿಗಳಾದ ಪಡೆಶೂರ, ಬೆಂತೂರ, ಕೂರ್ಸಿ, ಕಲಾಲಬಂಡಿ ಇತ್ಯಾದಿ ಮಂದಿಯ ಸಭೆ ಕರೆದರು. ಈ ಸಭಾ ಸದಸ್ಯರೆಲ್ಲರೂ ಎಲೆಯಡಿಕೆ, ಪಾನ್‌ಪರಾಗ್, ಗುಟ್ಕಾ ಮೆಲ್ಲುತ್ತ ತಮ್ಮ ಶ್ರೇಣೀಕೃತ ಹುದ್ದೆಯನ್ನು ಬದಿಗಿಟ್ಟು ಏಕವಚನದಲ್ಲೇ ಅದೂ ಸಂಸ್ಕೃತ ಬಳಸಿ ಮಾತನಾಡುವವರಾಗಿದ್ದರು.

ಧಾತ್ತೇರಿ

▸ ಯಾಹೂ

ಇವರೆಲ್ಲರ ಮೇಲಿನ ಅಧಿಕಾರಿಗಳಾದ ತಳವಾರ ಸಾಹೇಬರು ದಕ್ಷರು ಮತ್ತು ಪ್ರಾಮಾಣಿಕರಾಗಿದ್ದರಿಂದ ಸದರಿ ಸರಕಾರದ ಮಂತ್ರಿ-ಶಾಸಕರನ್ನು ಬಹಳ ಹಗುರವಾಗಿ ಕಾಣುತ್ತಿದ್ದರು. ತಮ್ಮ ಎದುರು ಕುಳಿತ ಸಿಬ್ಬಂದಿ ಕಡೆಗೊಮ್ಮೆ ಮಹಿಷಾವಲೋಕನ ಮಾಡಿದ ತಳವಾರ ಸಾಹೇಬರು "ನೋಡ್ರಪ್ಪ, ಇವನವ್ವನ ಈ ಕಟ್ಟಡ ನಮಗ ಬ್ಯಾಡಿದ್ರು, ಆ ಹಲಕಟ್ ಸೂಳಿಮಗ ಮಂತ್ರಿ ತನ್ನ ಸಂಬಂಧಿಗೆ ಸಹಾಯ ಮಾಡೊ ಸಲುವಾಗಿ ಕಂಟ್ರಾಕ್ಟ್ ಕೊಟ್ಟು ಇಂತ ಕಬರಗೇಡಿ ಕೆಲಸ ಮಾಡಿಸ್ಯಾನ. ಅದು ಬೀಳೂ ಮುನ್ನ ನಾವಾ ಉದ್ಘಾಟಿಸಿ ಮಾಡಬೇಕಾಗೇತಿ. ಯಾರ ಕಡಿಂದ ಮಾಡಸೂನಪ್ಪ" ಎಂದು ಕೇಳಿದರು.

"ಶಿಕ್ಷಣ ಸಚಿವರ ಕಡಿಂದ ಮಾಡುಸೂನ್ರಿ ಸರ್" ಎಂದ ಕಲಾಲಬಂಡಿ.

"ಅವ ಬ್ಯಾಡಲೇ. ಬಂದವ ಮಗ ಐಬ್ಯಾಗುಳಕಂಡು ಬಾಂಗಡೆ ಮೀನು, ಸೀಗಡಿ ಪೆಪ್ಪರ್ ಡ್ರೈ ಬೇಕಂತಾನ. ಎಲ್ಲಿಂದ ತಂದು ಕೊಡೊನು?"

"ಡಿ.ಸಿ.ಎಂ. ಕಡಿಂದ ಮಾಡುಸೂನ್ರಿ ಸರ" ಎಂದ ಪಡೆಶೂರ.

"ಯಾವ ಡಿ.ಸಿ. ಎಮ್ಮೆಲೆ? ಇಬ್ಬರದಾರು. ಅವರ ಚೀಫ್ ಮಿನಿಸ್ಟರ ಬಾಜೂಕ ನಿಲ್ಸಿ ನೋಡಿದ್ರ ಗಂಡಬೇರುಂಡನಗತಿ ಕಾಣ್ತಾರ. ಮಕ್ಕಳು. ಯಾರನ್ನ ಕರೀಬೇಕಲೆ?"

"ಕರದ ಕೂಡ್ಲೆ ಬರದವನ್ನ ಕರದರಾತ್ರಿ ಸರ" ಎಂದ ಕೂರ್ಸಿ.

"ಕರದ ಕೂಡ್ಲೆ ಬರವ ಒಬ್ಬದಾನ. ಅವ ಮಲಯಾಳಿ ಮಾಂತ್ರಿಕನ ಮಗಿದ್ದಗತಿ ಅದಾನು. ಆವನ್ನ ಕರದ್ರ ನಮಗ ಕಿಮ್ಮತ್ತಿರತದೇನು?"

"ಇನ್ನೊಬ್ಬನ ಹೇಂಡ್ತಿ ಕೂಡ ಡಿಂಗ್‌ಡಾಂಗ್ ಮಾಡಕೋಗಿ ಸಿಕ್ಕಿ ಬಿದ್ನಲ್ರಿ, ಸರ, ಆ ಮಂತ್ರಿ ಕರದ್ರ...?" ಎಂದ ಕೂರ್ಸಿ.

"ಅವ ಈಗ ಮಂತ್ರಿ ಅಲ್ಲಲೇ. ಕರದ ಕೂಡ್ಲೆ ಬರತಾನ. ಆದ್ರ ಮನಗಳ ನಿನ್ನ ಮನಿಗ ಬರತಾನು ಕರಿಲೇನ?"

"ಬ್ಯಾಡ್ರಿ ಸರ. ಆ ಹಡಬಿಟ್ಟಿ ಸೂಳಿ ಮಕ್ಕಳ ಸನೇಕಾಯುದಾ ಬ್ಯಾಡ್ರಿ."

"ಇನ್ನೊಬ್ಬದಾನ, ಯಾರಪ್ಪ ಅಂದ್ರ ನರ್ಸ್ ಕೂಡ ಬ್ರೇಕ್ ಡ್ಯಾನ್ಸ್ ಮಾಡ್ತನಲ್ರಿ, ಆವ ಕರದ ಕೂಡ್ಲೆ ಬರತಾನು. ಕರಿಯೂನೇನ?" ಎಂದ ಬೆಂತೂರ.

"ಕರಿಬವುದು. ಅದಕೂ ಮೊದ್ಲು ಅವ ಬಂದ ಕೂಡ್ಲೆ ಲಿಕ್ಕರ್ ಶಾಪಿನ್ ಕಲೆಕ್ಷನ್ ಮಾಡ್ತನಂತ. ಸಣ್ಣ ಹುಡುಗ್ರು ಕೂಡಿ ಡ್ರಿಂಕ್ಸ್ ಮಾಡ್ತನಂತ. ಆ ನಂತರ ಯಾರಾದ್ರು ನರ್ಸ್ ಕರೆದು ಅವುಳ ಕೂಡ ಡ್ಯಾನ್ಸ್ ಮಾಡ್ತನಂತ. ಕಿಸ್ ಕೊಡ್ತನಂತ. ಬಕ್ಕ ಬರಿಲೆ ಬಿದ್ದವ ಮತ್ತ ಏಳೂದಿಲ್ಲಂತ. ಬಾಳ ಹಲಕಟ್ಟದಾನವ. ಕರಸೂನೇನ?"

"ಬ್ಯಾಡ್ರಿ ಸರ. ಅವ್ವನವ್ವನ ಈ ಸರಕಾರದಾಗ ದರವ್ರೊಬ್ಬರೂ ಕೆಟ್ಟ ಕೆರಾ ಹಿಡದಾರಲ್ಲಾ, ಮಂದಿ ಕತಿಯೇನು ಅಂತ ಯೋಚನಿ ಮಾಡಕತ್ತಿನಿ" ಎಂದ ಬೆಂತೂರ.

"ಯೋಚನಿ ಯದಕ್ಕ ಮಾಡ್ತಿಯಲೇ? ಒಬ್ಬ ಮಾಜಿ ಸಿಎಮ್ಮದಾನ. ಅವ ಆಡ್ಡಿಯಿಲ್ಲ, ಅವನ್ನ ಕರದ್ರ?"

"ಅವನ್ನ ಕರದ್ರ ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಕಡಿಯುವರು ಗದ್ಲ ಎಬ್ಬಿಸತಾರ. ಒಟ್ಟ ನಮ್ಮ ಕಾರ್ಯಕ್ರಮಾನ ಕುಲಗೆಟ್ಟು ಹೋಕ್ಕತಿ" ಎಂದ ಕೂರ್ಸಿ.

"ನಮ್ಮ ಕಡಿಯವ ಒಬ್ಬದಾನ. ಅವನ್ನ ಕರಸೂನೇನು?" ಎಂದ ಬೆಂತೂರ.

"ಯಾರಲೆ ಅವ?" ಎಂದರು ತಳವಾರ್.

"ಅದಾರಿ ಮೊಬೈಲದಾಗ ಬ್ಲೂಫಿಲಂ ನೋಡ್ತನಲ್ರಿ. ಅವ."

"ಗೊತ್ತಲೆ. ಅವ ಕಂಬಾರನ ಸಂಗ್ಯಾಬಾಳ್ಯ ನಾಟಕದಾಗ ಸಂಗ್ಯಾ ಅಂತ ಅದಾನನೋಡು ಅಂಗಾದಾನ ಮಗ. ಅವ ಬ್ಲೂಫಿಲಂ ನೋಡುದಾದ್ರ ಹುಬಳ್ಳಿಯಿಂದ ಸಿ.ಡಿ. ತರಿಸಿ ಕೊಡೊನು. ಅವನ ಕೂಡ ನಾವು ನೋಡೊನು. ಅಲ್ಲಲೆ, ಆವನ್ನ ಕರದ್ರ ಮಂದಿ ಏನು ತಿಳಕೋತಾರಲೆ? ಯಾರನೂ ಕರಿಯೂದ ಬ್ಯಾಡ್ರಿ. ಇದರಾಗ ಪ್ರೊಟೋಕಾಲ್ ಪ್ರಾಬ್ಲಂ ರಗಡ್ಯಾಗೇತಿ. ಮಂತ್ರಿ ಕರದ್ರ, ಮುನಿಸಿಪಲ್ ಅಧ್ಯಕ್ಷ, ಆನಂತರ ಸದಸ್ಯರು, ಕೌನ್ಸಿಲರ್ಸ್, ಜಿಲ್ಲಾ ಪಂಚಾಯ್ತಿ ಅಧ್ಯಕ್ಷ, ಆನಂತರ ವಿಧಾನ ಪರಿಷತ್ ಸದಸ್ಯರು, ಹಿಂಗ ಒಂದು ಊರಿನ ಓಟರ್ ಲಿಸ್ಟ್ ತಯಾರು ಮಾಡಿ ಕಲ್ಲಾಗ ಹಾಕ್ಸಕ ಬರುದಿಲ್ಲ. ಅದಕ ನನಗ ಒಂದು ಪ್ಲಾನ್ ಹೊಳಿಯಾಕತ್ತೈತಿ."

"ಏನು ಪ್ಲಾನು ಲಗೂನ ಹೇಳ್ರಲ್ಲ."

"ಈ ಸರಕಾರದಾಗಿರೊ ದರವ್ರೊಬ್ಬರೂ ವಾಸ್ತು, ಭೂತ, ಪ್ರೇತ, ಯಜ್ಞ, ಯಾಗ ಅನಕೋತ ಹುಟ್ಟು ಕಬರಗೇಡಿ ಮಕ್ಕಳಾಗ್ಯಾರೆ. ಅದಕ ನಾಯೇನ ಮಾಡ್ತಿನಪ್ಪ ಅಂದ್ರಾ, ಶರ್ಮ ಅಂತ ಒಬ್ಬ ಜ್ಯೋತಿಷಿ ಅದಾನ, ಕಾಸು ಕೊಟ್ರ ನಮಗ ಬೇಕಾದ ಜೋತಿಷ್ಯ ಬರ ಕೊಡ್ತಾನ. ಅದ ತಗೊಂಡು ನಾವು ಉದ್ಘಾಟನಿ ಮಾಡಕ ಹೊಂಟಿರೊ ಕಟ್ಟಡದ ವಾಸ್ತು ಸರಿ ಇಲ್ಲ, ಉದ್ಘಾಟನಿ ಮಾಡಿದವ್ರುರಿಗೆ ಕೇಡಾಕ್ಕತಿ, ಅಂದ್ರ ಮಶಣಕ್ಕೆ ಹೋಗ್ತಾರು, ಅದರಾಗ ಭಾಗವಹಿಸಿದ ಮಂದಿಗೂ ಒಳ್ಳೆದಾಗುದಿಲ್ಲ ಅಂತೇಳಿ ನಗರಸಭಾ ಅಧ್ಯಕ್ಷನಿಗೇಳ್ತಿನಿ. ಅವ ಜಿಲ್ಲಾ ಮಂತ್ರಿಗೆ ಹೇಳ್ತಾನೆ. ಆ ನಂತರ ಏನಾಕ್ಕತಪ್ಪಾ ಅಂದ್ರ ಕಟ್ಟಡದ ಉದ್ಘಾಟನಿ ಕತಿನ ಮುಗದೋಕ್ಕತಿ. ಖರೆ ಹೌದಿಲ್ಲೊ?"

"ಏನ ತಲಿ ಸಾರ್ ನಿಮದು!"


"ನಾವು ಬ್ಯೂರಾಕ್ರಟ್ಸ್ ಏನದೀವಿ, ಸರಕಾರ ಹಂಗಿರತೈತಿ ನಾವೂ ಹಂಗಾ ತಲಿ ಕರ್ಚು ಮಾಡಬೇಕಲೆ. ಇಲ್ಲಿ ಕೃಷ್ಣಂದ್ರ ತಲಿ ಕೆಟ್ಟ ಮಸರ ಗಡಿಗ್ಯಾಕ್ಕತಿ. ಗೊತ್ತೇನ?"

"ಬೇಶಾತು ಬಿಡ್ರಿ ಸರ್."

"ಲೇ ಬೆಂತೂರ, ಹಾಂಗ ಮೂರ್ರ್ಯಾಗೈದು ಚಾ ತರೇಳಲೆ."

"ಆತ್ರಿ ಸರ!!" •

ಕಂಟ್ರಿ ಕ್ಲಬ್ ಎಂಬ ಕಂತ್ರಿ ಕ್ಲಬ್




ವೈ. ರಾಜೀವ್ ರೆಡ್ಡಿ


ಮಹಾನಗರಗಳ ಶಾಪಿಂಗ್ ಮಾಲ್‌ಗಳಲ್ಲಿ ಶ್ರೀಮಂತ ಅಥವಾ ಮೇಲ್‌ಮಧ್ಯಮ ವರ್ಗದ ಗಿರಾಕಿಗಳು ಹೇಗೂ ದಂಡಿಯಾಗಿ ಸಿಗುತ್ತಾರೆ ನೋಡಿ. ಅವರೇ ಕಂಟ್ರಿ ಕ್ಲಬ್‌ನ ಟಾರ್ಗೆಟ್. ಆದ್ದರಿಂದ ಇಂಥಾ ಶಾಪಿಂಗ್‌ಮಾಲ್‌ಗಳಲ್ಲಿ ಒಂದು ಕೌಂಟರ್ ಓಪನ್ ಮಾಡುತ್ತಾರೆ. ಟಿಪ್‌ಟಾಪಾಗಿ ಡ್ರೆಸ್ ಮಾಡಿಕೊಂಡು, ಟಸ್‌ಪುಸ್ ಇಂಗ್ಲಿಷ್ ಮಾತಾಡುವ ಯುವಕಯುವತಿಯರು ನಿಮ್ಮನ್ನು ಸ್ವಾಗತಿಸುತ್ತಾರೆ. ಕಂಟ್ರಿ ಕ್ಲಬ್‌ನಿಂದ ಫ್ರೀ ಗಿಫ್ಟ್ ಕೂಪನ್ ಇದೆ, ನಿಮ್ಮ ಫೋನ್ ನಂಬರ್ ಮತ್ತು ಅಡ್ರೆಸ್ ಬರೆಯಿರಿ ಅಂತಾ ಒಂದು ಕಾರ್ಡ್ ಕೊಡುತ್ತಾರೆ. ಪುಕ್ಕಟೆಯಾಗಿ ಗಿಫ್ಟ್ ಸಿಗೋವಾಗ ಬಿಟ್ಟೋರುಂಟಾ ಹೇಳಿ. ನಮ್ಮ ಜನ ಸಂಭ್ರಮದಿಂದಲೇ ಫಾರಂ ಫಿಲ್‌ಅಪ್ ಮಾಡಿಕೊಡುತ್ತಾರೆ. ಅಲ್ಲಿಗೆ ಮಿಕಗಳು ಕಂಟ್ರಿ ಕ್ಲಬ್‌ನ ಬಲೆಗೆ ಬೀಳುವ ಕಡೆ ಮೊದಲ ಹೆಜ್ಜೆ ಇಟ್ಟಂತಾಯ್ತು.

ಕೆಂಡೋರ ಹಣ ದೋಚಿ ದಿಢೀರ್ ಶ್ರೀಮಂತರಾಗಬೇಕೆಂದು ರಾತ್ರಿ ವೇಳೆ ದರೋಡೆಗೆ ಇಳಿಯಲು ಹವಣಿಸುವ ಪಾತಕಿಗಳು ಈಗ ಅಷ್ಟೆಲ್ಲ ರಿಸ್ಕ್ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ, ಇನ್ನು ಮುಂದೆ ಅವರು ಮಾಡಬೇಕಾದದ್ದು ಇಷ್ಟೆ. ರಾಜೀವ್ ರೆಡ್ಡಿಯೆಂಬ ಇಂಟರ್‌ನ್ಯಾಷನಲ್ ಖ್ಯಾತಿಯ ಬ್ಯುಸಿನೆಸ್‌ಮ್ಯಾನ್ ಒಬ್ಬನಿದ್ದಾನೆ. ಆತನಿಂದ ಕೆಲವು ಐಡಿಯಾ ತೆಗೆದುಕೊಂಡರೆ ಸಾಕು. ಜನ ತಾವಾಗಿಯೇ ಕಳ್ಳರ ಬಳಿಗೆ ಬಂದು, ಲಕ್ಷ ಲಕ್ಷ ಹಣ ತಂದು ಸುರಿಯುವಂಥ ಕಮಾಲ್ ಕಲಿತುಬಿಡಬಹುದು.

ನಂಬಿದ್ರೆ ನಂಬಿ, ಬಿಟ್ರೆ ಬಿಡಿ. ಇದು ಸಂಪೂರ್ಣ ಸತ್ಯ! ಕಂಟ್ರಿ ಕ್ಲಬ್ ಇಂಡಿಯಾ ಲಿಮಿಟೆಡ್ ಎಂಬ ಗೋಲ್ ಮಾಲ್ ಕಂಪನಿಯ ಮಾಲಿಕ ವೈ. ರಾಜೀವ್ ರೆಡ್ಡಿ ಎಂಬ ಖತರ್‌ನಾಕ್ ಆಸಾಮಿ ಮಾಡುತ್ತಿರುವುದು ಇಂಥಾ ಕಾಯಕವನ್ನೇ. ದುರದೃಷ್ಟವೇನೆಂದರೆ ಇಂಥಾ ಖದೀಮರನ್ನು ಜೈಲಿಗೆ ಹಾಕುವಂಥಾ ಜೈಲುಗಳನ್ನು ಇನ್ನೂ ಕಟ್ಟಿಯೇ ಇಲ್ಲ! ಇಂಥವರನ್ನು ಮಟ್ಟ ಹಾಕುವಂಥಾ ಪೊಲೀಸ್ ಅಧಿಕಾರಿಗಳೂ ಈ ದೇಶದಲ್ಲಿ ಹುಟ್ಟಿಲ್ಲ! ಅದೇ ನಮ್ಮ ದುರದೃಷ್ಟ.



ರಾಜೀವ ರೆಡ್ಡಿ, ಮಹಿಮಾ ಚೌಧುರಿ ಜತೆ ...



ರಾಜೀವ್ ರೆಡ್ಡಿ, ರಿಯಾ ಸೇನ್ ಜತೆ ...



ರಾಜೀವ ರೆಡ್ಡಿ-ಆರತಿ ಛಬ್ರಿಯಾ-

ಈತನನ್ನು ಮಾಮೂಲಿ ಆಸಾಮಿ ಎಂದುಕೊಳ್ಳಬೇಡಿ. ಕಂಟ್ರಿ ಕ್ಲಬ್ ಇಂಡಿಯಾ ಲಿಮಿಟೆಡ್ (ಸಿಸಿಐಎಲ್) ಎಂಬ ಕಂಪನಿಯೊಂದನ್ನು ಸ್ಥಾಪಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತುವಳಿಗೆ ನಿಂತುಬಿಟ್ಟಿದ್ದಾನೆ. ಅಂದಹಾಗೆ ಶೇರು ಮಾರುಕಟ್ಟೆಯಲ್ಲಿ ನೋಂದಣಿಯಾಗಿರುವ ಈ ಕಂಪನಿಯಲ್ಲಿ ಸಾರ್ವಜನಿಕರು ನೂರಾರು ಕೋಟಿಗಳನ್ನು ಹೂಡುತ್ತಿರುವುದು ಮತ್ತೊಂದು ದೊಡ್ಡ ದುರಂತ. ದೇಶದ ಸುಮಾರು 50ಕ್ಕೂ ಹೆಚ್ಚು ಮಹಾನಗರಗಳು ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಈತನ ದಂಧೆ ನಡೆಯುತ್ತಿದೆ. ಹತ್ತಾರು ವಿದೇಶಗಳಿಗೂ ತನ್ನ ಬ್ಯುಸಿನೆಸ್ ವಿಸ್ತರಿಸಿದ್ದಾನೆ. ಈತನ ಸಿಸಿಐಎಲ್ ಕಂಪನಿಯ ಬ್ಯುಸಿನೆಸ್ ವಿಸ್ತಾರಗೊಂಡ ಕಡೆಯಲ್ಲೆಲ್ಲಾ ಸಾವಿರಾರು ಅಮಾಯಕರ ತಲೆ ಬೋಳಿಸಿ ತಿರುಪತಿ ನಾಮ ತಿಕ್ಕುತ್ತಿದ್ದಾನೆ. ಇವರ ಗೋಲ್‌ಮಾಲ್ ವಿಧಾನವೂ ಕಾರ್ಪೊರೇಟ್ ಶೈಲಿಯಲ್ಲೇ ನಡೆಯುತ್ತಿದೆ. ಕೆಲವು ಸ್ಯಾಂಪಲ್‌ಗಳನ್ನು ನೋಡಿ.

ಮಹಾನಗರಗಳ ಶಾಪಿಂಗ್ ಮಾಲ್‌ಗಳಲ್ಲಿ ಶ್ರೀಮಂತ ಅಥವಾ ಮೇಲ್‌ಮಧ್ಯಮ ವರ್ಗದ ಗಿರಾಕಿಗಳು ಹೇಗೂ ದಂಡಿಯಾಗಿ ಸಿಗುತ್ತಾರೆ ನೋಡಿ. ಅವರೇ ಕಂಟ್ರಿ ಕ್ಲಬ್‌ನ ಟಾರ್ಗೆಟ್. ಆದ್ದರಿಂದ ಇಂಥಾ ಶಾಪಿಂಗ್‌ಮಾಲ್‌ಗಳಲ್ಲಿ ಒಂದು ಕೌಂಟರ್ ಓಪನ್ ಮಾಡುತ್ತಾರೆ. ಟಿಪ್‌ಟಾಪಾಗಿ ಡ್ರೆಸ್ ಮಾಡಿಕೊಂಡು, ಟಸ್‌ಪುಸ್ ಇಂಗ್ಲಿಷ್ ಮಾತಾಡುವ ಯುವಕಯುವತಿಯರು ನಿಮ್ಮನ್ನು ಸ್ವಾಗತಿಸುತ್ತಾರೆ. ಕಂಟ್ರಿ ಕ್ಲಬ್‌ನಿಂದ ಫ್ರೀ ಗಿಫ್ಟ್ ಕೂಪನ್ ಇದೆ, ನಿಮ್ಮ ಫೋನ್ ನಂಬರ್ ಮತ್ತು ಅಡ್ರೆಸ್ ಬರೆಯಿರಿ ಅಂತಾ ಒಂದು ಕಾರ್ಡ್ ಕೊಡುತ್ತಾರೆ. ಪುಕ್ಕಟೆಯಾಗಿ ಗಿಫ್ಟ್ ಸಿಗೋವಾಗ ಬಿಟ್ಟೋರುಂಟಾ ಹೇಳಿ. ನಮ್ಮ ಜನ ಸಂಭ್ರಮದಿಂದಲೇ ಫಾರಂ ಫಿಲ್‌ಅಪ್ ಮಾಡಿಕೊಡುತ್ತಾರೆ. ಅಲ್ಲಿಗೆ ಮಿಕಗಳು ಕಂಟ್ರಿ ಕ್ಲಬ್‌ನ ಬಲೆಗೆ ಬೀಳುವ ಕಡೆ ಮೊದಲ ಹೆಜ್ಜೆ ಇಟ್ಟಂತಾಯ್ತು.





ರಾಜೀವ್ ರೆಡ್ಡಿ ಮಕ್ಕಳು ವರುಣ್ ರೆಡ್ಡಿ ಮತ್ತು ಸಿದ್ಧಾರ್ಥ್ ರೆಡ್ಡಿ

ಶಾಪಿಂಗ್ ಮಾಲ್ ವಿಧಾನವೊಂದೇ ಅಲ್ಲ, ಮುಖ್ಯವಾಗಿ ಮೊಬೈಲ್ ಕಂಪನಿಗಳಿಂದ ಪೋಸ್ಟ್‌ಪೇಯ್ಡ್ ಗ್ರಾಹಕರ ಪಟ್ಟಿಯನ್ನು ಪಡೆದುಕೊಂಡು ಫೋನ್ ಮೂಲಕವೂ ಗ್ರಾಹಕರನ್ನು ಬಲೆಗೆ ಕೆಡವುತ್ತಾರೆ. ಆಕರ್ಷಕವಾಗಿ ಮಾತಾಡುವ ಹುಡುಗಿಯರನ್ನೇ ಇಂಥಾ ಕೆಲಸಕ್ಕೆ ನೇಮಿಸಿಕೊಂಡಿರುತ್ತಾರೆ. ಫ್ರೀ ಲಕ್ಕಿ ಡ್ರಾದಲ್ಲಿ ನಿಮ್ಮ ನಂಬರ್ ಆಯ್ಕೆಯಾಗಿದೆ, ದಯವಿಟ್ಟು ನಮ್ಮ ಕ್ಲಬ್‌ಗೆ ಬಂದು ನಿಮ್ಮ ಉಡುಗೊರೆಯನ್ನು ಪಡೆದುಕೊಂಡು ಹೋಗಿ ಎಂದು ರಿಕ್ವೆಸ್ಟ್ ಮಾಡುತ್ತಾರೆ. ಆದರೆ ಗಿಫ್ಟ್ ಪಡೆದುಕೊಳ್ಳಲು ಅವರು ಹಾಕುವ ಕಂಡೀಶನ್ ಒಂ... ಅಲ್ಲಿಗೆ ಒಬ್ಬರೇ ಹೋಗುವಂತಿಲ್ಲ, ದಂಪತಿಗ... ಜೋಡಿಯಾಗೇ ಹೋಗಬೇಕು.

ಹೀಗೆ ಕ್ಲಬ್‌ಗೆ ಹೋಗುವ ಜೋಡಿಗಳಿಗೆ ಒಂ... ಕಾಫಿನೋ ಜ್ಯೂಸೋ ಕೊಟ್ಟು, ಕಂಪನಿಯ ಆಫರ್... ಬಗ್ಗೆ ಒಂದು ಪ್ರೆಸೆಂಟೇಷನ್ ಇದೆ, ಅದನ್ನು ಅಟೆಂ... ಮಾಡಿ ಬನ್ನಿ, ಅಷ್ಟರಲ್ಲಿ ನಿಮ್ಮ ಗಿಫ್ಟ್ ಸೆ... ರೆಡಿಯಾಗಿರುತ್ತದೆ, ಡಿನ್ನರ್ ಮುಗಿಸಿ ಗಿಫ್ಟ್ ತೆಗೆದುಕೊಂ... ಹೋಗಬಹುದು ಎಂದು ರಿಸೆಪ್ಷನ್‌ನಲ್ಲಿ ಕುಳಿತಿರು... ಗೊಂಬೆಗಳು ಉಲಿಯುತ್ತವೆ. ಬೆಳಗ್ಗೆ ಎದ್ದು ನರಿ ಮು... ನೋಡಿದ್ದೇವೆ ಎಂದೇ ಭಾವಿಸುವ ಜೋಡಿಗ... ಉತ್ಸಾಹದಿಂದಲೇ ಅತ್ತ ಹೆಜ್ಜೆ ಹಾಕುತ್ತಾರೆ.

ಪ್ರೆಸೆಂಟೇಷನ್‌ಗಾಗಿ ಚೆನ್ನಾಗಿ ತರಬೇತಾದ ಚತ... ಮಾತುಗಾರರನ್ನು ನೇಮಿಸಲಾಗಿರುತ್ತದೆ. ಅವ... ನಾನಾರೀತಿಯ ಸ್ಕೀಮುಗಳ ಬಗ್ಗೆ ವಿವರಿಸಿ ಅಂಗೈಯ... ಆಕಾಶ ತೋರಿಸುತ್ತಾರೆ. ಕ್ಲಬ್‌ನ ಮೆಂಬರ್‌ಶಿ... ಪಡೆದುಕೊಂಡರೆ ನಾನಾ ಸವಲತ್ತುಗಳು ಉಚಿತ. ಮೆಂಬ... ಆದನಂತರ ನೀವು ನಮ್ಮ ಕುಟುಂಬದ ಸದಸ್ಯರಿದ್ದ...

ಕಂತ್ರಿ ರೆಡ್ಡಿಯ ಹೆಜ್ಜೆ ಗುರುತು

ಕಂಟ್ರಿ ಕ್ಲಬ್‌ನ ಚೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ವೈ.ರಾಜೀವ್ ರೆಡ್ಡಿ ಆಗರ್ಭ ಶ್ರೀಮಂತನೇನಲ್ಲ. ಹೈದರಾಬಾದ್‌ನಲ್ಲಿ ಈತ ಮೊದಲು ಬ್ಯುಸಿನೆಸ್ ಪ್ರಾರಂಭಿಸಿದ್ದು 20 ಫ್ಲಾಟ್‌ಗಳ ಒಂದು ಅಪಾರ್ಟ್‌ಮೆಂಟ್ ನಿರ್ಮಾಣದಿಂದ. ಬಹಳ ಹಿಂದೆಯೇ ಅಮೃತ್ ಕ್ಯಾಸ್ಟಲ್ಸ್ ಎಂಬ ರಿಯಲ್ ಎಸ್ಟೇಟ್ ಕಂಪನಿಗೆ ಹೈದರಾಬಾದ್‌ನ ಬ್ಯಾಂಕೊಂದರಿಂದ ಸಾಲ ಪಡೆದು 38 ಕೋಟಿಗಳ ಪಂಗನಾಮ ಹಾಕಿದ್ದ. ಹೀಗೆ ರಿಯಲ್ ಎಸ್ಟೇಟ್‌ನಿಂದ ಆರಂಭಿಸಿ ನಾನಾ ಅವತಾರಗಳನ್ನೆತ್ತಿ ಕಂಟ್ರಿ ಕ್ಲಬ್ ಎಂಬ ರೆಸಾರ್ಟ್‌ಗಳ ಸರಮಾಲೆಯನ್ನೇ ನಿರ್ಮಿಸಿ ಈಗ ಸಾವಿರಾರು ಕೋಟಿಗಳನ್ನು ಬಾಚಿದ್ದಾನೆ. ಈಗ ಆತನ ವಯಸ್ಸು ಇನ್ನೂ 55 ವರ್ಷ ಮಾತ್ರ. ಆದ್ದರಿಂದ ಇನ್ನೂ ಲಕ್ಷಾಂತರ ಮಂದಿಗೆ ಯಾಮಾರಿಸುವ ತಾಕತ್ತು ಆತನಿಗಿದೆ.

ಅಷ್ಟು ಸಾಲದೆಂಬಂತೆ ಈಗ ಆತನ ಇಡೀ ಕುಟುಂಬವನ್ನೇ ಈ ದಂಧೆಯಲ್ಲಿ ತೊಡಗಿಸಿಬಿಟ್ಟಿದ್ದಾನೆ. ಆತನ ಹಿರಿಯ ಮಗ 27 ವರ್ಷದ ಸಿದ್ಧಾರ್ಥ್ ರೆಡ್ಡಿ ಅಪ್ಪನನ್ನು ಮೀರಿಸುವಂಥಾ ಚತುರ. ಆತ ಹಾಲಿ ಕಂಪನಿಯ ಸಿಇಒ ಹಾಗೂ ಹಣಕಾಸು ವ್ಯವಹಾರಗಳನ್ನು ನಿರ್ವಹಿಸುತ್ತಿದ್ದಾನೆ. ಮತ್ತೊಬ್ಬ ಮಗ ವರುಣ್ ರೆಡ್ಡಿಗೆ ಈಗ 25 ವರ್ಷ. ಆತ ಅಮೆರಿಕದಲ್ಲಿ ಬ್ಯುಸಿನೆಸ್ ತಂತ್ರಗಳನ್ನು ಅಭ್ಯಾಸ ಮಾಡಿಬಂದಿರುವುದರಿಂದ ಆನ್‌ಲೈನ್ ಮಾರ್ಕೆಟಿಂಗ್ ವ್ಯವಹಾರಗಳನ್ನು ಹಾಗೂ ತಮ್ಮ ಜಾಲವನ್ನು ಬೇರೆಬೇರೆ ದೇಶಗಳಿಗೆ ವಿಸ್ತರಿಸುವ ಯೋಜನೆಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಇನ್ನು ಆತನ ಧರ್ಮಪತ್ನಿ ಕೂಡ ಕಂಪನಿಯ ಡೈರೆಕ್ಟರ್‌ಗಳಲ್ಲಿ ಒಬ್ಬಳು.

ತೆಲುಗು ಮತ್ತು ತಮಿಳು ಎರಡೂ ಭಾಷೆಗಳಲ್ಲಿ ಬಿಡುಗಡೆಗೆ ಸಿದ್ಧವಾಗಿರುವ ಕೃಷ್ಣಂ ವಂದೇ ಜಗದ್ಗುರುಂ ಎಂಬ ಸಿನಿಮಾದ ಮೇಲೂ ಈತ ಬಂಡವಾಳ ಹೂಡಿದ್ದಾನೆ.

ಮುಂಬೈ, ಪೂನಾ, ಹೈದರಾಬಾದ್ ಬೆಂಗಳೂರು ಮುಂತಾದ ಮಹಾನಗರಗಳಲ್ಲಿ ಸೈಟು ಕೊಡುವುದಾಗಿ ನಂಬಿಸಿ ಅದೆಷ್ಟು ಸಾವಿರ ಮಂದಿಗೆ ಪಂಗನಾಮ ಹಾಕಿದ್ದಾರೆ ಎಂಬುದನ್ನು ಲೆಕ್ಕ ಇಟ್ಟವರು ಯಾರೂ ಇಲ್ಲ, ಸ್ವತಃ ಈ ಪಾತಕಿಗಳಿಗೇ ಗೊತ್ತಿಲ್ಲವೇನೋ? ಅಬ್ಬರದ ಪ್ರಚಾರ ಮಾಡಿ, ಇಲ್ಲಸಲ್ಲದ ಆಮಿಷ ಒಡ್ಡಿ ಜನರಿಂದ ಹಣ ಲಪಟಾಯಿಸುವ ಈ ಖದೀಮ ಕೂಟ, ಕೊನೆಯಲ್ಲಿ ನಗರದಿಂದ ನೂರಾರು ಕಿ.ಮೀ. ದೂರದಲ್ಲಿ ಯಾವುದೋ ಗೊಂಡಾರಣ್ಯದಲ್ಲಿ ಒಂದು ಜಾಗವನ್ನು ತೋರಿಸುತ್ತಾರೆ. ಹೀಗೆ ಈ ಕಂತ್ರಿ ಕ್ಲಬ್‌ನಿಂದ ಮೋಸ ಹೋದ ಮಂದಿ ಬೆಂಗಳೂರಿನಲ್ಲೂ ಯಥೇಚ್ಛವಾಗಿದ್ದಾರೆ.

ಇನ್ನು ಈ ಸದಸ್ಯತ್ವದ ಬಾಬತ್ತಿನಲ್ಲಿ ಈತ ಲಪಟಾಯಿಸಿದ ಮೊತ್ತ ಎಷ್ಟಿರಬಹುದು ಎಂಬುದನ್ನು ಲೆಕ್ಕಹಾಕಿದರೆ ಏನಿಲ್ಲವೆಂದರೂ ಒಂದು ಸಾವಿರ ಕೋಟಿ ಇರಬಹುದು. ಕಂಪನಿಯ ಅಧಿಕೃತ ಘೋಷಣೆಯ ಪ್ರಕಾರ ಈಗ ಕ್ಲಬ್‌ನಲ್ಲಿ 2,50,000 ಸದಸ್ಯರಾಗಿದ್ದಾರೆ. ಒಬ್ಬ ಸದಸ್ಯನಿಂದ ಕೇವಲ ಹತ್ತು ಸಾವಿರ ವಸೂಲಿ ಮಾಡಿದರೂ ಒಟ್ಟು ಮೊತ್ತ 25... ಕೋಟಿಗಳನ್ನು ದಾಟುತ್ತದೆ. ಪ್ರತಿ ಸದಸ್ಯರಿಂದ 50 ಸಾವಿರದಿಂದ ಹಿಡಿದು ಲಕ್ಷಗಟ್ಟಲೆ ವಸೂಲಿ ಮಾಡಿ ಅವರಿಗೆ ಮಕ್ಮಲ್ ಟೋಪಿ ಹಾಕಿಬಿಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಈ ಸದಸ್ಯತ್ವವನ್ನು ಒಂದು ಮಿಲಿಯನ್‌ಗೆ (ಹತ್ತು ಲಕ್ಷ) ಏರಿಸುವ ಗುರಿ ಹಾಕಿಕೊಂಡಿರುವುದಾಗಿ ಈ ಕಂಪನಿ ಘೋಷಿಸಿದೆ. ಹಾಗಾದರೆ ಇವರ ಕಣ್ಣಿಗೆ ಬಿದ್ದ ಜನರನ್ನು ದೇವರೇ ಕಾಪಾಡಬೇಕು.

...ಸೆಲ್ ಮಾಲ್ ದಂಧೆಗೆ ಬಾಲಿವುಡ್ ಬೆಂಬಲ

...ಕ್ಕೆ ತಕ್ಕಂತೆ ಕೋಲಾಟ ಅಂತಾ ನಮ್ಮಲ್ಲಿ ಒಂದು ಗಾದೆ ಮಾತಿದೆ. ಅದನ್ನು ಈ ಖದೀಮ ರೆಡ್ಡಿ ಚೆನ್ನಾಗಿ ...ದಿಕೊಂಡಿದ್ದಾನೆ. ಈಗಿನ ಕಾಲದ ಜನ ಬಾಲಿವುಡ್ ತಾರೆಯರಿಗೆ ಮರುಳಾಗುವುದು ಬಹಳ ಸುಲಭ ...ಾಗೆಯೇ ತನ್ನ ಮಿಕಗಳನ್ನು ಖೆಡ್ಡಾಗೆ ಕೆಡವಲು ಇಡೀ ಬಾಲಿವುಡ್ ಲೋಕವನ್ನೇ ಈ ರೆಡ್ಡಿ ಯಥೇಚ್ಛವಾಗಿ ...ೆ. ಶಾರೂಖ್ ಖಾನ್, ಸಲ್ಮಾನ್ ಖಾನ್, ಹೃತಿಕ್ ರೋಶನ್‌ನಂತಹ ಹೀರೋಗಳು, ಮಹಿಮಾ ಚೌಧರಿ, ...ರೂಪಿಯಾ, ಅಮೃತಾ ಅರೋರಾ, ರಿಯಾ ಸೇನ್ ಮೊದಲಾದ ಹತ್ತಾರು ಗ್ಲಾಮರಸ್ ತಾರೆಯರನ್ನು ... ಯಥೇಚ್ಛವಾಗಿ ಕುಣಿಸುತ್ತಾನೆ. ಅದರಲ್ಲೂ 2008ರ ಹೊಸ ವರ್ಷ ಆಚರಣೆಯಲ್ಲಿ ಸುಮಾರು 20 ...ಹೀರೋಯಿನ್‌ಗಳನ್ನು ಒಟ್ಟಿಗೆ ಮುಂಬೈನ ಕ್ಲಬ್ ಆವರಣದಲ್ಲಿ ಕಲೆ ಹಾಕಿ ಅದ್ದೂರಿ ಪ್ರಚಾರ ಗಿಟ್ಟಿಸಿದ್ದ. ... ಬಾಲಿವುಡ್ ತಾರೆಯರ ಅರೆಬೆತ್ತಲೆ ನೃತ್ಯದ ಸುದ್ದಿ ಕೇಳಿ ಸಾವಿರಾರು ಮಂದಿ ಹೊಸಹೊಸ ಬಕ್ರಾಗಳು ...ದಿಟ್ಟಿರುವ ಖೆಡ್ಡಾದ ಕಡೆ ಹೊರಡುತ್ತಾರೆ. ಅಂದಹಾಗೆ ಇಂಥಾ ಅಡ್ವರ್ಟೈಸ್‌ಮೆಂಟ್ ಮತ್ತು ಮಾರ್ಕೆಟಿಂಗ್‌ಗಾಗಿ ...ಷ್ಟು ವೆಚ್ಚ ಮಾಡುತ್ತಿರಬಹುದು ಎಂದು ನಾವು ಊಹಿಸಲೂ ಸಾಧ್ಯವಿಲ್ಲ. ಅಧಿಕೃತವಾಗಿ ಕೊಟ್ಟಿರುವ ... ಪ್ರಕಾರವೇ 2011 ರಲ್ಲಿ 28 ಕೋಟಿ 9 ಲಕ್ಷ ರೂಪಾಯಿಗಳಾದರೆ, 2010 ರಲ್ಲಿ 33 ಕೋಟಿ 68 ...

... ಯಾವುದೇ ನಗರಕ್ಕೆ ಹೋದರೂ ಲಕ್ಷುರಿ ...ಮಡೇಶನ್ ಮತ್ತಿತರ ಲಕ್ಷುರಿ ಸವಲತ್ತುಗಳೆಲ್ಲಾ ...ವಾಗಿ ಬಳಸಿಕೊಳ್ಳಬಹುದು. ಅಷ್ಟೇ ಏಕೆ, ಕ್ಲಬ್ ...ಗೆ ಹಲವಾರು ದೇಶಗಳಲ್ಲಿ ತನ್ನ ಶಾಖೆಗಳನ್ನು ...ುವುದರಿಂದ ಎಲ್ಲಾ ಕಡೆ ಸದಸ್ಯರಿಗೆ ಉಚಿತ ಸೇವೆ ...ದೆ ಎಂದು ನಂಬಿಸುತ್ತಾರೆ. ಅದರ ಜೊತೆಗೆ ಕಡಿಮೆ ...ಲ್ಲಿ ಟೂರ್ ವ್ಯವಸ್ಥೆ ಮಾಡಿಕೊಡುತ್ತೇವೆ ಎಂದು ...ುತ್ತಾರೆ. ಇಷ್ಟೆಲ್ಲಾ ಆದ ಮೇಲೆ ನಿಮಗೆ ಮೆಂಬರ್‌ಶಿಪ್ ...ಬೇಕೆಂದಾಗ ಅದನ್ನು ಬೇರೆಯವರಿಗೆ ವರ್ಗಾಯಿಸಿ ...ಹಣ ವಾಪಸ್ ಮಾಡಿಕೊಡುತ್ತೇವೆ ಎಂಬ ಭರವಸೆ ...ವ ಮೇಲೆ ಬಲೆಗೆ ಬಿದ್ದ ಮಿಕಗಳಿಗೆ ಸ್ವರ್ಗ ಮೂರೇ ...

...ದ್ದರಿಂದ ಇನ್ನು ತಡಮಾಡಲು ಈ ಮಿಕಗಳಿಗೆ ...ವುದೇ ಕಾರಣಗಳಿರುವುದಿಲ್ಲ. ಇಂಥವರ ಬಲೆಗೆ ...ವವರು ಬಹಳಷ್ಟು ಮಂದಿ ಸಾಫ್ಟ್‌ವೇರ್ ಟೆಕ್ಕಿಗಳು ...ಾ ಅಂಥದೇ ಸಾಫ್ಟ್ ಜಾಬ್ ಮಂದಿಗಳೇ ಹೆಚ್ಚು. ... ಮಾತಾಡಲು ಇಂಗ್ಲಿಷ್ ಬರುತ್ತದೆ ಹಾಗೂ ಐದಾರು ...ಗಳ ಸಂಬಳ ಬರುವುದರಿಂದ ತಾವು ಹೆಚ್ಚು ...ವಂತರೆಂಬುದು ಈ ವರ್ಗದ ಭಾವನೆ. ಆದರೆ ವಾಸ್ತವ ...ವಾಗಿದೆ, ಆ ಮಾತು ಬೇರೆ.

...ಮೆಂಬರ್‌ಶಿಪ್ ತೆಗೆದುಕೊಂಡು ಪುಕ್ಕಟೆ ಮಜಾ ...ಯಿಸಿ, ಕಾರ್ಡ್ ಬೇಡವೆಂದರೆ ಮಾರಿಕೊಂಡರಾಯಿತು ...ು ಒಂದುಕ್ಷಣ ಸಾಫ್ಟಾಗಿ ಆಲೋಚಿಸಿ ಕೂಡಲೇ ...ಬರ್‌ಶಿಪ್ ಕಾರ್ಡ್ ಪಡೆಯಲು ಸಮ್ಮತಿಸುತ್ತಾರೆ. ... ಗೋಣು ಆಡಿಸಿದ್ದೇ ತಡ ಆಗಲೇ ಮುದ್ರಣಗೊಂಡು ...ವಾಗಿರುವ ಅಗ್ರಿಮೆಂಟ್ ಪತ್ರಕ್ಕೆ ಆ ಜೋಡಿಗಳಿಂದ ... ಹಾಕಿಸಿಕೊಳ್ಳುತ್ತಾರೆ. ಈ ಸದಸ್ಯತ್ವದಲ್ಲೂ ನಾನಾ ...ಗಳಿದ್ದು ತಮಗೆ ಸರಿಹೊಂದುವಂಥ ಮೆಂಬರ್‌ಶಿಪ್ ...ರ್ಡ್ ಪಡೆದುಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ಸಾಮಾನ್ಯವಾಗಿ ...ಸ್ಯತ್ವ ಶುಲ್ಕ 50 ಸಾವಿರದಿಂದ ಹಿಡಿದು ಕೆಲವು ...ಗಳವರೆಗೂ ಇರುತ್ತದೆ. ಸ್ಥಳದಲ್ಲೇ ಹಣ ಕಟ್ಟಲಾಗದಿದ್ದರೆ ...ರ್ಡ್ ಉಜ್ಜಬಹುದು; ಕಾರ್ಡ್ ತಂದಿಲ್ಲವೆಂದರೆ ಕ್ಲಬ್‌ನ ...ಂದಿ ನಿಮ್ಮ ಮನೆ ಬಾಗಿಲಿಗೆ ಸ್ವೈಪಿಂಗ್ ಮೆಷಿನ್ ...ು ಕಾರ್ಡ್ ಉಜ್ಜಿಕೊಂಡು ಹೋಗುತ್ತಾರೆ. ಅಲ್ಲಿಯವರೆಗೆ ...ಗೆ ಯಾವುದೇ ಕಿರಿಕಿರಿಯಾಗದಂತೆ ನೋಡಿಕೊಳ್ಳುವ ...ಬ್ದಾರಿ ಅವರದು.

... ಗಿಫ್ಟ್ ತೆಗೆದುಕೊಂಡು ಹೋಗಲು ದಂಪತಿ ಸಮೇತ ...ಬೇಕೆಂಬ ಕಂಡೀಶನ್ ಹಾಕುತ್ತೀರಲ್ಲಾ, ಯಾಕೆ ಎಂದು ...ಗಲಾದರೂ ಅರ್ಥವಾಯಿತೆ? ಪುರುಷರಾದರೆ ಕೆಲಸದ ...ಡದ ನಡುವೆ ಗಿಫ್ಟ್ ತೆಗೆದುಕೊಳ್ಳಲು ಐದು ನಿಮಿಷವೂ ...ುವುದಿಲ್ಲ. ಹೀಗಾದರೆ ಇವರ 420 ಸ್ಕೀಮುಗಳಿಗೆ ...ಗೊಡುವವರು ಯಾರು? ದಂಪತಿ ಸಮೇತ ಬಂದರೆ ...ವಾರ್ಯವಾಗಿ ಪುರುಸೊತ್ತು ಮಾಡಿಕೊಂಡೇ ...ದಿರುತ್ತಾರೆ. ಮೇಲಾಗಿ ಇಂಥಾ ಅಗ್ಗದ ಆಮಿಷಗಳು ...ಳೆಯರ ಮೇಲೆ ಹೆಚ್ಚಾಗಿ ಪ್ರಭಾವ ಬೀರುತ್ತವೆ ...ಬುದು ಈ ಷರತ್ತಿನ ಹಿಂದಿನ ಹುನ್ನಾರ. ಹೇಗಿದೆ ...ಟ್ರಿಕ್ ತಂತ್ರ?

ಈಸಕೊಂಡ ಮೇಲೆ ಈರಭದ್ರ

...ಹಣ ಕೆತ್ತ ಮೇಲೆ ಅವರ ಅಸಲಿ ರೂಪ ಒಂದೊಂದಾಗಿ ...ಕ್ಷವಾಗುತ್ತದೆ. ಮೊದಲನೆಯದಾಗಿ ನೀವು ಈ ಕ್ಲಬ್‌ನ ...ಲತ್ತುಗಳನ್ನು ಬಳಸಿರಲಿ ಬಿಡಲಿ, ವಾರ್ಷಿಕ ನಿರ್ವಹಣಾ ...ಲ್ಕ ಎಂಬ ಹೆಸರಿನಲ್ಲಿ ಹತ್ತಾರು ಸಾವಿರಗಳನ್ನು ...ಪಾವತಿಸಬೇಕು. ಇಲ್ಲವಾದರೆ ನಿಮ್ಮ ಕಾರ್ಡ್ ಇನ್‌ವ್ಯಾಲಿಡ್ ...ಗುವ ಅಪಾಯವಿರುತ್ತದೆ. ಹೀಗಾಗಿ ಅನಿವಾರ್ಯವಾಗಿ ...ತ್ತೆ ಹಣ ಕಟ್ಟಲೇಬೇಕು. ಹೋಗಲಿ, ಕ್ಲಬ್‌ನ ...ಲತ್ತುಗಳನ್ನಾದರೂ ಬಳಸಿಕೊಳ್ಳೋಣ ಎಂದು ...ಹೊರಟವರನ್ನು ತೀರಾ ಹೀನಾಯವಾಗಿ ನಿರ್ಲಕ್ಷಿಸಲಾಗುತ್ತದೆ. ...ರೂಮ್‌ಗಳು ಮೊದಲೇ ಬುಕ್ ಆಗಿವೆ, ಕಾಯಬೇಕಾಗುತ್ತೆ ...ಬ ಉತ್ತರ ಬರುತ್ತದೆ. ಒಂದು ವೇಳೆ ಅಕಾಮಡೇಶನ್ ...ಸಿಕ್ಕಿದರೂ ದನದ ಕೊಟ್ಟಿಗೆಯಂಥಾ ರೂಮೇ ಗತಿ.

ಇನ್ನು ಲಕ್ಷುರಿ ವ್ಯವಸ್ಥೆಯೆಂಬುದು ಕನಸಿನ ಮಾತು. ಈ ಎಲ್ಲದರಿಂದ ಬೇಸತ್ತ ನಮ್ಮ ಟೆಕ್ಕಿಗಳು ಯಾರಿಗಾದರೂ ದೂರು ನೀಡಬೇಕೆಂದುಕೊಂಡರೆ ಅಲ್ಲಿ ನಿಮ್ಮ ಮಾತನ್ನು ಕೇಳಿಸಿಕೊಳ್ಳುವವರೂ ಇರುವುದಿಲ್ಲ. ಹೆಚ್ಚೆಂದರೆ ಒಂದು ಕನ್ಸೂಮರ್ ಕೇರ್ ನಂಬರ್ ಸಿಗುತ್ತದೆ. ಆ ನಂಬರಿಗೆ ಮಾತಾಡಿದರೆ ನಿಮ್ಮ ಕಂಪ್ಲೈಂಟ್ ಮೈಲ್ ಮಾಡಿ, ಪರಿಶೀಲಿಸುತ್ತೇವೆ ಎನ್ನುತ್ತಾರೆ. ಅಲ್ಲಿಗೆ ಹಾಲಿಡೇ ಮೂಡ್, ಫ್ಯಾಮಿಲಿ ಟೂರ್ ಎಲ್ಲವೂ ಎಕ್ಕುಟ್ಟಿ ಹೋದಂತೆಯೇ ಸರಿ.

ಇಷ್ಟೆಲ್ಲಾ ಆದಮೇಲೆ ಕಂಟ್ರಿ ಕ್ಲಬ್ ಮೆಂಬರ್ ಎನಿಸಿಕೊಂಡ ಬಡಪಾಯಿಗೆ ಉಳಿದಿರುವುದು ಇನ್ನು ಒಂದೇ ಒಂದು ಆಪ್ಷನ್. ಅದೇನೆಂದರೆ, ಇವರ ಸಹವಾಸವೇ ಬೇಡ ಅಂತಾ ಮೆಂಬರ್‌ಶಿಪ್ ರದ್ದುಗೊಳಿಸುವುದು. ಹೀಗಾಗಿ ಕಂಪನಿಯವರು ಆಶ್ವಾಸನೆ ಕೊಟ್ಟಂತೆ ಮೆಂಬರ್‌ಶಿಪ್ ವರ್ಗಾಯಿಸಿ ನಮ್ಮ ಹಣ ವಾಪಸ್ ಕೊಡಿ ಎಂದು ಕೇಳಿದರೆ, ವರ್ಗಾವಣೆ ಏನಿದ್ದರೂ ನಿಮ್ಮ ಸ್ವಂತ ಜವಾಬ್ದಾರಿ, ನೀವೇ ಒಬ್ಬರು ಗಿರಾಕಿಯನ್ನು ಹುಡುಕಿ ಮಾರಿಕೊಳ್ಳಿ ಎಂಬುದು ಕ್ಲಬ್‌ನ ಅಧಿಕಾರಿಗಳ ಕಟುವಾದ ಉತ್ತರ. ಅಲ್ಲಿಗೆ ತಾವು ಎಂಥಾ ಖೆಡ್ಡಾದೊಳಕ್ಕೆ ಬಿದ್ದಿದ್ದೇವೆ ಎಂಬ ಹಾರ್ಡ್‌ಫ್ಯಾಕ್ಟ್ ಎಂಥಾ ಸಾಫ್ಟ್‌ವೇರ್‌ಗಾದರೂ ಅರ್ಥವಾಗುತ್ತದೆ ಬಿಡಿ.

ಅಲ್ಲಿಂದಾಚೆಗೆ ಸಮಸ್ಯೆಯ ಪರಿಹಾರಕ್ಕಾಗಿ ಇಂಟರ್‌ನೆಟ್‌ನಲ್ಲಿ ಏನಾದರೂ ಸಿಗಬಹುದೇನೋ ಎಂದು ಆನ್‌ಲೈನ್ ಹುಡುಕಾಡುತ್ತಾರೆ. ಯಾಕೆಂದರೆ ಹೀಗೆ ಬಲೆಗೆ ಬೀಳುವ ಮಿಕಗಳಲ್ಲಿ ನೂರರಲ್ಲಿ ಒಬ್ಬರಿಗಾದರೂ ತಮ್ಮ ಹಣವನ್ನು ವಾಪಸ್ ಪಡೆಯಲು ಗಲಾಟೆ ಮಾಡುವುದು ಹಾಗಿರಲಿ, ಕನಿಷ್ಠ ಪೊಲೀಸ್ ಕಂಪ್ಲೈಂಟ್ ಕೊಡುವ ಧೈರ್ಯವೂ ಇರುವುದಿಲ್ಲ. ಮಧ್ಯಮ ವರ್ಗದ ಈ ದೌರ್ಬಲ್ಯವನ್ನು ರಾಜೀವ್‌ರೆಡ್ಡಿಯಂಥಾ ಖದೀಮರು ಯಥೇಚ್ಛವಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಆನ್‌ಲೈನ್ ಕನ್ಸೂಮರ್ ಫೋರಂಗಳಲ್ಲಿ ಕಂಟ್ರಿಕ್ಲಬ್‌ನ ಬಗ್ಗೆ ಒಂದಲ್ಲಾ ಎರಡಲ್ಲಾ... ಸಾವಿರಾರು ಕಂಪ್ಲೈಂಟುಗಳು ದಾಖಲಾಗಿವೆ. ಹೀಗೆ ವಂಚನೆಗೊಳಗಾದ ನೂರಾರು ಮಂದಿಯ ಭಿನ್ನವಿಭಿನ್ನವಾದ ಕತೆಗಳು, ಅನುಭವಗಳು ದಂಡಿಯಾಗಿ ಸಿಗುತ್ತವೆ. ದಿನೇದಿನೇ ರಾಜೀವ್ ರೆಡ್ಡಿ ಅಂಡ್ ಕಂಪನಿ ಜನರನ್ನು ಯಾಮಾರಿಸಲು ಹೊಸಹೊಸ ತಂತ್ರಗಳನ್ನು ಕಂಡುಹಿಡಿಯುತ್ತಿದ್ದಾರೆ. ಹೊಸ ಕಂಪನಿಗಳನ್ನು ಹುಟ್ಟುಹಾಕುತ್ತಿದ್ದಾರೆ. ಅಂಥದರಲ್ಲಿ ಕಂಟ್ರಿ ವೆಕೇಷನ್ಸ್ ಎಂಬ ಕಂಪನಿಯ ಹೆಸರಿನಲ್ಲಿ ಇತ್ತೀಚೆಗೆ ಟೋಪಿ ಹಾಕುತ್ತಿರುವ ಸಂಗತಿ ಬಯಲಿಗೆ ಬಂದಿದೆ.

ಇನ್ನು ಕನ್ಸೂಮರ್ ಕೋರ್ಟ್‌ಗೆ ಹೋಗಿ ಅಥವಾ ಬ್ಯಾಂಕ್‌ಗಳಿಗೆ ಕ್ರೆಡಿಟ್ ಕಾರ್ಡ್ ಸಂಬಂಧಿತ ಕಂಪ್ಲೈಂಟ್ ಕೊಟ್ಟು ತಮ್ಮ ಹಣವನ್ನು ವಾಪಸ್ ಪಡೆದುಕೊಂಡ ಬೆರಳೆಣಿಕೆ ಮಂದಿಯನ್ನು ಹೊರತುಪಡಿಸಿದರೆ ಉಳಿದವರಿಗೆ ತಿರುಪತಿ ವೆಂಕಟರಮಣನೇ ಗತಿಯಾಗಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಪೊಲೀಸರು, ಕಾನೂನು ಏನು ಮಾಡುತ್ತಿದೆ? ಗ್ರಾಹಕ ವೇದಿಕೆಯ ಅರುಣ್ ಸಕ್ಸೇನಾ ಎಂಬುವವರ ಪ್ರಕಾರ ಅವರು ಈಗಾಗಲೇ ಬೆಂಗಳೂರು ಪೊಲೀಸ್ ಕಮಿಷನರ್‌ಗೆ ಈ ಬಗ್ಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲವಂತೆ; ಈ ಪಾತಕಿಗಳಿಗೆ ಪೊಲೀಸರ ಪರೋಕ್ಷ ಬೆಂಬಲವಿದೆಯೆಂಬುದು ಅವರ ಆರೋಪ. ಪೊಲೀಸರು ಇಂಥಾ ಆರೋಪ ಬಂದಾಗ ನಿರಾಕರಿಸುವ ಕಷ್ಟ ತೆಗೆದುಕೊಳ್ಳೋಲ್ಲ ಬಿಡಿ; ಹಾಗೇನಾದರೂ ಒಂದುವೇಳೆ ನಿರಾಕರಿಸಿಬಿಟ್ಟರೆ ರಾಜೀವ್ ರೆಡ್ಡಿಯಂಥಾ ಮಲ್ಟಿ ಬಿಲಿಯನೇರ್‌ಗಳ ಮೇಲೆ ಕಾನೂನುಕ್ರಮ ಜರುಗಿಸಿ ಜೈಲಿಗೆ ಹಾಕಬೇಕಾಗುತ್ತದೆ. ಛೇ! ಛೇ!! ಅದು ಹೇಗೆ ಸಾಧ್ಯ ಹೇಳಿ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಮೀಡಿಯಾ ಮಸಾಲ


ಭಟ್ಕಳದ ಅಕ್ಷರ ಭಯೋತ್ಪಾದಕ ವಿಶ್ವಮಿತ್ರ ಹೆಗಡೆ ವಿರುದ್ಧ ಪೊಲೀಸ್‌ಗೆ ದೂರು

ಕನ್ನಡಪ್ರಭ ದಿನಪತ್ರಿಕೆಯ ಭಟ್ಕಳದ ವರದಿಗಾರ ವಿಶ್ವಮಿತ್ರ ಹೆಗಡೆಯ ವಿರುದ್ಧ ಅಲ್ಲಿನ ಜನತೆ ಪೊಲೀಸರಿಗೆ ದೂರು ಕೊಟ್ಟಿದ್ದಾರೆ.

'ಅಕ್ಷರ ಭಯೋತ್ಪಾದನೆ' ಮಾಡಿದ ಆರೋಪ ವಿಶ್ವಮಿತ್ರನ ಮೇಲಿದೆ.

ಕರ್ನಾಟಕದ ದಲಿತ, ಹಿಂದುಳಿದ ವರ್ಗಗಳ ಹಾಗೂ ಮುಸ್ಲಿಮರ ವಿರುದ್ಧ ನಿತ್ಯ ಯುದ್ಧ ನಡೆಸುತ್ತಿರುವ ಆರೆಸ್ಸೆಸ್‌ಗಳ ಅಣ್ಣೆಯಂತಿರುವ ಕನ್ನಡಪ್ರಭವು ಒಂದು ಸುದ್ದಿಯನ್ನು ಪ್ರಕಟಿಸುವಾಗ ಅದರ ಸತ್ಯಾಸತ್ಯತೆಗಳನ್ನು ಪರಿಶೀಲಿಸದೆ ಮನಸ್ಸಿಗೆ ಬಂದ ವರದಿಗಳನ್ನು ಬರೆಯಲು ವಿಶ್ವಮಿತ್ರನಿಗೆ ಅವಕಾಶ ನೀಡಿರುವುದು ಆಶ್ಚರ್ಯವೇನಲ್ಲ.

ಈ ವಿಶ್ವಮಿತ್ರ ಇತ್ತೀಚೆಗೆ ಭಟ್ಕಳದ ಬಗ್ಗೆ ಒಂದು ವರದಿ ಬರೆಯುತ್ತಾ ಅದರಲ್ಲಿ ಕೆಲವು ಮಸೀದಿ, ಸಂಘ-ಸಂಸ್ಥೆಗಳ ಹೆಸರು ಉಲ್ಲೇಖಿಸಿ 'ಇವೆಲ್ಲ ನಿಷೇಧಿತ ವಲಯಗಳಾಗಿವೆ. ಇಲ್ಲಿ ಪೊಲೀಸರೂ ಸಹ ಪ್ರವೇಶಿಸುವಂತಿಲ್ಲ. ಭಟ್ಕಳದಿಂದ ಆರ್‌ಡಿಎಕ್ಸ್, ಎಕೆ-47 ಗನ್‌ಗಳೆಲ್ಲ ಸಾಗಾಟವಾಗುತ್ತಿದೆ' ಎಂದೆಲ್ಲ ಮನಸ್ಸಿಗೆ ಬಂದಂತೆಲ್ಲ ಬರೆದುಬಿಟ್ಟಿದ್ದ. ಈ ಆರೋಪಗಳಿಗೆಲ್ಲ ಯಾವ ಸಾಕ್ಷಿ ಪುರಾವೆಗಳಿರದಿದ್ದರೂ ವಿಶ್ವಮಿತ್ರನಿಗೆ ಇಡೀ ಭಟ್ಕಳವೇ ಟೆರರಿಸ್ಟರ ಊರಾಗಿಬಿಟ್ಟಿದೆ ಎನಿಸಿಬಿಟ್ಟಿದೆ.



ಬಿಟ್ಟೂಬಿಡದೆ ತಮ್ಮ ವಿರುದ್ಧ ನಡೆಯುತ್ತಿರುವ ಈ ಮಾಧ್ಯಮ ಭಯೋತ್ಪಾದನೆಯ ವಿರುದ್ಧ ಈಗ ಭಟ್ಕಳದ ಜನ ತಿರುಗಿಬಿದ್ದಿದ್ದಾರೆ.

ಈ ವಿಶ್ವಮಿತ್ರ ಹೆಗಡೆ ವಿರುದ್ಧ ಪೊಲೀಸರಿಗೆ ಕಂಪ್ಲೆಂಟ್ ನೀಡಿದ್ದಾರೆ.

ಈ ನಡುವೆ ಜಿಲ್ಲಾ ಪೊಲೀಸ್ ಎಎಸ್‌ಪಿ ಸುಧೀರ್ ಕುಮಾರ್ ರೆಡ್ಡಿ ಒಂದು ಹೇಳಿಕೆ ನೀಡಿ 'ಕನ್ನಡಪ್ರಭ ಪ್ರಕಟಿಸಿರುವಂತೆ ಭಟ್ಕಳದಲ್ಲಿ ಯಾವ ನಿಷೇಧಿತ ಪ್ರದೇಶವೂ ಇಲ್ಲ, ಬಂದೂಕು, ಸ್ಫೋಟಕ ಸಾಗಾಣಿಕೆ ಪ್ರಕರಣಗಳೂ ನಮ್ಮ ಗಮನಕ್ಕೆ ಬಂದಿಲ್ಲ' ಎಂದಿದ್ದಾರೆ.

ಕನ್ನಡಪ್ರಭ

ಹೀಗೆ ಪೊಲೀಸರಿಗೂ ಗೊತ್ತಾಗಿರದ, ಜನರಿಗೂ ಅರಿವಿರದ ಆರ್‌ಡಿಎಕ್ಸ್ ಹಾಗೂ ಎಕೆ-47 ಗನ್‌ಗಳು ವಿಶ್ವಮಿತ್ರ ಹೆಗಡೆ ಕಣ್ಣಿಗೆ ಮಾತ್ರ ಹೇಗೆ, ಎಲ್ಲಿ ಕಂಡಿರಬಹುದು.

ಸಂಕೇಶ್ವರರ 'ದಿಗ್ವಿಜಯ'ವು 'ವಿಜಯವಾಣಿ' ಜೊತೆ ಠೂ!

ವಿಜಯ ಸಂಕೇಶ್ವರರ ಹೊಸ ಡೈಲಿ 'ವಿಜಯವಾಣಿ' ತನ್ನದೇ ಛಾಪು ಮೂಡಿಸುತ್ತಿರುವಾಗಲೇ ಓದುಗರ ನಡುವೆ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಹೋರಾಡುತ್ತಿರುವಾಗಲೇ ಸಂಕೇಶ್ವರರ ಎರಡನೇ ಪ್ರಾಡಕ್ಟ್ ಅಖಾಡಕ್ಕಿಳಿಯುತ್ತಿದೆ. ಅದು 'ದಿಗ್ವಿಜಯ.'

ಸಂಕೇಶ್ವರರ ಹೊಸ ದಿನಪತ್ರಿಕೆ ಇದು. ಈ ಹೊಸ ಪ್ರಾಜೆಕ್ಟ್‌ಗಾಗಿ ಸಿಬ್ಬಂದಿ ನೇಮಕಾತಿ ಭರದಿಂದ ನಡೆದಿದೆ. ಆಶ್ಚರ್ಯ ಏನೆಂದರೆ ಒಂದೇ ಬಿಲ್ಡಿಂಗ್‌ನಲ್ಲಿ ಎರಡೂ ಪತ್ರಿಕೆಗಳ ಕಚೇರಿಗಳು ಇದ್ದರೂ ಕೂಡ ಪರಸ್ಪರ ಸುದ್ದಿ ಹಾಗೂ ಫೋಟೋ ವಿನಿಮಯ . ಕೂಡದೆಂದು ಸಂಕೇಶ್ವರ ಕಟ್ಟಾಜ್ಞೆ ಹೊರಡಿಸಿರುವುದು.

ದಿಗ್ವಿಜಯ ಬೇರ ಡೈಲಿಗಳ ಜೊತೆ ಪೈಪೋಟಿ ನಡೆಸುವಂತೆ ವಿಜಯವಾಣಿ ಜೊತೆಗೂ ಹೋರಾಡಬೇಕು ಎಂಬುದೇ ಸಂಕೇಶ್ವರರ ತರ್ಕ.

USHE

ಹೀಗೂ...ಉಂಟೆ?

ಧಾರವಾಡ ಚಾನಲ್ ವರದಿಗಾರರಿಬ್ಬರ ಸ್ಟ್ರೀಟ್ ಫೈಟ್!

ಧಾರವಾಡದಲ್ಲಿ 'ನಾನೂ, ನನ್ನ ಗಂಡನ ಹೆಂಡತಿಯೂ' ಎಂಬಂತಹ ಒಂದು ಗಂಡು-ಹೆಣ್ಣಿನ ಜಗಳದಲ್ಲಿ ಮೀಡಿಯಾ ಮಂದಿ ಮೂಗು ತೂರಿಸಿ ಇಡೀ ಶಹರದೆದುರು ನಗೆಪಾಟಲಿಗೀಡಾದ ಘಟನೆ ನಡೆದಿದೆ.

ಧಾರವಾಡ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಪ್ರೊ|| ಲಕ್ಷ್ಮಣ್ ಎಂಬುವರು ಅದೇಕೊ ತಮಗಿದ್ದ ಸಾಂಸಾರಿಕ ಜೀವನದಲ್ಲಿ ವೈರಾಗ್ಯ ಹೊಂದಿ ನಿರ್ಮಲ ಎಂಬಾಕೆಯೊಂದಿಗೆ ಹೊಸ ಸಂಸಾರ ನಡೆಸಲು ಯತ್ನಿಸಿ ನಾನಾ ರೀತಿಯ ರೇಜಿಗೆ ಮಾಡಿಕೊಂಡಿದ್ದಾರೆ. ಈ ಕುರಿತ ಸುದ್ದಿಯೊಂದು ವಾರಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು. ಜೊತೆಗೆ ಟಿವಿ ಚಾನೆಲ್‌ಗಳೆರಡರ ಸ್ಥಳೀಯ ವರದಿಗಾರರಿಬ್ಬರು ಈ ಪ್ರಸಂಗ ಬಳಸಿಕೊಂಡು ಲಕ್ಷ್ಮಣ್‌ರಿಂದ ಕೊಂಚ ಹಣ ಕಿತ್ತಿದ್ದಾರೆಂತಲೂ ಹೇಳಲಾಗಿತ್ತು.

ಇದು ತಕ್ಷಣ ಲಕ್ಷ್ಮಣರ ಕುಟುಂಬ ಕಲಹಕ್ಕಿಂತಲೂ ದೊಡ್ಡ ವಿವಾದವಾಗಿ ಧಾರವಾಡ ಪೊಲೀಸ್ ಸ್ಟೇಷನ್ನಿನ ಕಾಂಪೌಂಡಿನೊಳಗೆಯೇ ಕೆಲವು ಟಿವಿ ಪತ್ರಕರ್ತರ ಮಾರಾಮಾರಿಗೆ ಕಾರಣವಾಗಿದೆ. ಇದನ್ನು ನೋಡಿದ ಯಾರೋ 'ಪೊಲೀಸ್ ಪೊಲೀಸ್' ಎಂದು ಚೀರಿಕೊಂಡಾಗ ಇನ್ಸ್‌ಪೆಕ್ಟರ್ ಒಬ್ಬರು 'ನನ್ನ ಚೇಂಬರ್‌ನಾಗ ಹೊಡೆದಾಟ ಆಗ್ತಿಲ್ರಪ್ಪಾ... ಅವರು ಬೀದ್ಯಾಗ ಫೈಟ್ ಮಾಡ್ಕೊಂಡ್ರೆ ನಾವೇನು ಮಾಡಂಗಿಲ್ಲ' ಎಂದು ಹೇಳಿದಾಗ ಮರಣಾನಂದದಿಂದ ನಕ್ಕರಂತೆ ಪೊಲೀಸರೆಲ್ಲಾ!

ಉದಯ ಟಿವಿಯ ಆ್ಯಂಕರ್ 'ಆಗಿದ್ದೆಲ್ಲಾ ಒಳ್ಳೆದಾಯ್ತು' ಅಂದಳು!

ಸನ್ ನೆಟ್‌ವರ್ಕ್‌ನವರ ಉಷೆ ಟಿವಿಯಲ್ಲಿ ವೀಕ್ಷಕರು ಫೋನ್ ಮಾಡಿ ತಮಗಿಷ್ಟವಾದ ಹಾಡುಗಳನ್ನು ಪ್ರಸಾರ ಮಾಡುವಂತೆ ಕೇಳುವ ಪ್ರೋಗ್ರಾಂಗಳಿರುವುದು ನಿಮಗೂ ಗೊತ್ತಿರುತ್ತವೆ. ಈ ವೀಕ್ಷಕರು ಫೋನ್ ಮಾಡಿದಾಗ ಆ್ಯಂಕರ್ ಹುಡುಗಿಯರು ಅವರೊಂದಿಗೆ ಕೊಂಚ ಹರಟುವುದು ಉಂಟು. ಕಳೆದ ವಾರ ಬೆಳಗ್ಗೆ ಉಷೆಯ ಆ್ಯಂಕರ್ ಹಾಗೂ ಹುಬ್ಬಳ್ಳಿಯ ವೀಕ್ಷಕಿಯೊಬ್ಬರ ನಡುವೆ ನಡೆದ ಸಂಭಾಷಣೆ ಹೀಗಿತ್ತು.

ವೀಕ್ಷಕಿ: ಹಲೋ ರೂಪಾ ಅವರೆ...

ಆ್ಯಂಕರ್: ಹಲೋ... ಯಾರಿದು? ಎಲ್ಲಿಂದ ಕರೆ ಮಾಡ್ತಿದ್ದೀರಾ?

ವೀಕ್ಷಕಿ: ನಾನು ಸುಮಿತ್ರಾ ಅಂತ ಹುಬ್ಬಳ್ಳಿಯಿಂದ.

ಆ್ಯಂಕರ್: ಹೇಳಿ ಸುಮಿತ್ರ ಅವರೆ ಹೇಗಿದ್ದೀರಾ?

ವೀಕ್ಷಕಿ: ಅ... ಏನಿಲ್ಲಾ!


ಆ್ಯಂಕರ್: ಮಾತಾಡಿ ಸುಮಿತ್ರ ಯಾಕೆ ಡಲ್ಲಾಗಿದ್ದೀರಾ... ಹೇಳಿ.

ವೀಕ್ಷಕಿ: ಇವತ್ತಿಗೆ ನಮ್ ತಾಯಿ ತೀರಿಕೊಂಡು ಒಂದು ವರ್ಷ ಆಯ್ತು, ಅವರ ನೆನಪಾಗಿ ಬೇಜಾರ ಆಗ್ತಾ ಇದೆ ಮೇಡಂ.

ಆ್ಯಂಕರ್: ಓಹೋ ಹಾಗಾ... ಇರಲಿ ಬಿಡಿ ಆಗಿದ್ದೆಲ್ಲಾ ಒಳ್ಳೇದಾಯ್ತು ಅಂದುಕೊಳ್ಳಿ. ಈಗ ನಿಮಗೆ ಯಾವ ಹಾಡು ಇಷ್ಟ ಹೇಳಿ...!

ಅಶೋಕ್ V/s ಶ್ರೀನಿವಾಸ್ ಜಿದ್ದಾಜಿದ್ದಿ

ಕೌನ್ಸಿಲರ್ ತೊಡೆತಟ್ಟಿದ-ಎಮ್ಮೆಲ್ಲೇ ಕೊಲ್ತೀನಿ ಅಂದ!



"ಇದು ಬಿಜೆಪಿ ರಿಯಲ್ ಎಸ್ಟೇಟ್ ಕಾಳಗ!

ತನ್ನದೇ ಪಕ್ಷದ ಪಾಲಿಕೆ ಸದಸ್ಯನೊಬ್ಬನ ಮುಖ ಕಂಡಿದ್ದೇ ದೆವ್ವ ಮೈಮೇಲೆ ಬಂದಂತೆ ನುಗ್ಗಿ ಆತನ ಕೊರಳಪಟ್ಟಿಗೆ ಕೈಹಾಕುವ ಶಾಸಕ ಮಹಾಶಯ, ಶಾಸಕನ ತಲೆ ಕಂಡಿದ್ದೇ ತೋಳೇರಿಸಿ ಕುಸ್ತಿಗೆ ನಿಲ್ಲುವ ಪಾಲಿಕೆ ಸದಸ್ಯೋತ್ತಮ. ಮಿಕಮಿಕ ನೋಡುವ ಪೊಲೀಸರು, ಬಿಟ್ಟಿ ಮನರಂಜನೆಗೆ ಸರಕು ಸಿಕ್ಕ ಖುಷಿಯಲ್ಲಿ ಟೀವಿ ಚಾನಲ್ಲಿನವರು, ಒಂದೇ ಪಕ್ಷದ ಎಮ್ಮೆಲ್ಲೇ ಮತ್ತು ಕೌನ್ಸಿಲರ್ ನಡುರಸ್ತೆಯಲ್ಲಿ ಕಚ್ಚಾಡುತ್ತಿದ್ದರೆ ಖುಷಿಪಟ್ಟು ಗೇಲಿಗಿಳಿದ ಮತದಾರರು!

ಇದು ರಾಜರಾಜೇಶ್ವರಿನಗರದ ವಯೋವೃದ್ಧ ಶಾಸಕ ಶ್ರೀನಿವಾಸ್ ಮತ್ತು ಅದೇ ವಾರ್ಡಿನ ಬಿಜೆಪಿ ಕೌನ್ಸಿಲರ್ ರಾಮಚಂದ್ರ, ನಡುಬೀದಿಯಲ್ಲಿ ಕಿತ್ತಾಡಿದ ರೀತಿ. ಬೆಂಗಳೂರಿನ ಬಿಜೆಪಿಯಲ್ಲೇ ವಿವಿಧ ಬಣಗಳ ಮಧ್ಯೆ ಭುಗಿಲೆದ್ದ ವೈಷಮ್ಯ, ಪಾಲಿಕೆ ಕಾಂಟ್ರಾಕ್ಟ್ ದಂಧೆ, ಆಶ್ರಯ ಸೈಟುಗಳ ಹೆಸರಲ್ಲಿ ಹೆಡೆಯೆತ್ತಿದ ರಿಯಲ್ ಎಸ್ಟೇಟ್ ಹಾವಳಿ, ವ್ಯವಸ್ಥಿತವಾಗಿ ಬೆಂಗಳೂರಿನ ಕೆರೆ, ಪಾರ್ಕು, ಆಟದ ಮೈದಾನಗಳನ್ನು ನುಂಗುವ ದುರಾಶೆ ಮತ್ತು ಬಿಜೆಪಿ ನಾಯಕರ ಕಾಮಲಾಲಸೆ ಎಲ್ಲವೂ ಪರಸ್ಪರ ಪೈಪೋಟಿಗಿಳಿದಿದ್ದರ ಪ್ರತಿಫಲವೇ ಮೊನ್ನೆ ಸೆಪ್ಟಂಬರ್ 10ರ ಮಧ್ಯಾಹ್ನದ ಬೀದಿಕಾಳಗ.


ರಾಜರಾಜೇಶ್ವರಿನಗರದ ಶಾಸಕ ಎಂ.ಶ್ರೀನಿವಾಸ್ ಹೆಗಡೆ ಕಾಲದ ಹಳೇ ತಲೆಮಾರಿನ ರಾಜಕಾರಣಿಯಾದರೆ, ರಾಜರಾಜೇಶ್ವರಿವಾರ್ಡಿನ ಬಿಬಿಎಂಪಿ ಬಿಜೆಪಿ ಸದಸ್ಯ ಜೆ.ಹೆಚ್.ರಾಮಚಂದ್ರ ರಾಜಕೀಯವಾಗಿ ಯುವಕ ಮತ್ತು ಉಪಮುಖ್ಯಮಂತ್ರಿ ಅಶೋಕ್‌ರ ಬಲಗೈಬಂಟ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾಸರಹಳ್ಳಿ ಮುನಿರಾಜನಿಗೆ ಬಿಜೆಪಿ ಟಿಕೆಟ್ ಕೊಟ್ಟಂತೆ ಶಿಷ್ಯ ರಾಮಚಂದ್ರನನ್ನೂ ರಾಜ ರಾಜೇಶ್ವರಿನಗರದಿಂದ ಗೆಲ್ಲಿಸಿ ಶಾಸಕನನ್ನಾಗಿಸಬೇಕೆಂಬ ಮಹದಾಸೆಯೇನೋ ಅಶೋಕ್‌ನಿಗಿತ್ತು. ಆದರೆ ಎಂ.ಶ್ರೀನಿವಾಸ್ ಬಿಡಬೇಕಲ್ಲ, ಶೋಭಾ ಕರಂದ್ಲಾಜೆಯ ಕಾಲಿಗೆ ಬಿದ್ದು ಯಡ್ಡಿಯನ್ನು ಪುಸಲಾಯಿಸಿ ಟಿಕೆಟ್ ಗಿಟ್ಟಿಸಿ ಬಿಟ್ಟರು. ಅವತ್ತು ಶುರುವಾದ ಅಶೋಕ್ ವರ್ಸಸ್ ಶ್ರೀನಿವಾಸ್ ಜಿದ್ದಾಜಿದ್ದಿ ಈಗ ಅಶೋಕ್ ಪಕ್ಕಾ ಬೆಂಬಲಿಗ ರಾಮಚಂದ್ರನ ಕೊರಳಪಟ್ಟಿಗೆ ಕೈಹಾಕುವ ತನಕ ಬೆಳೆದುಬಿಟ್ಟಿದೆ.

ಲ್ಯಾಂಡ್‌ವಾರ್ಸ್

ಹಾಗಂತ ಇದನ್ನು ಬಿಜೆಪಿ ಗ್ಯಾಂಗ್‌ವಾರ್ ಎಂದೋ, ಬಣಗಳ ಜಿದ್ದಾಜಿದ್ದಿಯೆಂದೋ ಲೆಕ್ಕಹಾಕಿದರೆ ಅದೂ ಅರ್ಧ ಸತ್ಯವಾಗುತ್ತದೆ. ಇಲ್ಲಿರುವುದು ಶುದ್ಧ ರಿಯಲ್ ಎಸ್ಟೇಟ್ ಜಿದ್ದಾಜಿದ್ದಿ!

ಇದೆಲ್ಲಕ್ಕೂ ಮೂಲವಾಗಿದ್ದು 2012ರ ಫೆಬ್ರವರಿ 21ರಂದು ಪಾಲಿಕೆಯ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಗೆ ಅಧ್ಯಕ್ಷರಾಗಿದ್ದ ರಾಮಚಂದ್ರ ಬಿಬಿಎಂಪಿಯ ಆಯುಕ್ತ ಶಂಕರಲಿಂಗೇಗೌಡರಿಗೆ ಬರೆದ ಪತ್ರ. ಅದರ ಸಾರಾಂಶವಿಷ್ಟೇ. ಹೊಸಕೆರೆ ಹಳ್ಳಿ ಸರ್ವೆ ನಂ.7ರಲ್ಲಿರುವ 7.5ಎಕರೆ, ಕೆಂಗೇರಿ ಹೋಬಳಿ ಪಂತರಪಾಳ್ಯದ ಸರ್ವೆ ನಂ.59ರಲ್ಲಿದ್ದ 2.1 ಎಕರೆ ಕೆರೆ ಭೂಮಿ, ವಡ್ಡರಪಾಳ್ಯದ ಸರ್ವೆ ನಂ.8ರಲ್ಲಿರುವ 3.18 ಎಕರೆ ಮತ್ತು ಚನ್ನಸಂದ್ರದ ಸರ್ವೆ ನಂ. 22ರಲ್ಲಿರುವ 2.35 ಎಕರೆಯಷ್ಟು ಸರ್ಕಾರಿ ಜಮೀನುಗಳನ್ನು ಆಶ್ರಯದ ಹೆಸರಲ್ಲಿ ಉಚಿತ ನಿವೇಶನಗಳನ್ನಾಗಿ ವಿಂಗಡಿಸಿ ಹಂಚುವ ಶಾಸಕರ ಮನವಿಯನ್ನು ತಿರಸ್ಕರಿಸಬೇಕೆಂದೂ ಭವಿಷ್ಯದಲ್ಲಿ ರಾಜರಾಜೇಶ್ವರಿ ನಗರ ಪ್ರದೇಶದಲ್ಲಿ ಸರ್ಕಾರಿ ಕಟ್ಟಡ, ಸ್ಮಶಾನ, ಆಟದ ಮೈದಾನ, ನೀರಿನ ಟ್ಯಾಂಕು, ಪಾಠಶಾಲೆ, ಸಮುದಾಯ ಭವನ, ಕ್ರೀಡಾಂಗಣ, ಆಸ್ಪತ್ರೆ ಇತ್ಯಾದಿಗಳಿಗೆಲ್ಲ ಜಮೀನೇ ಇಲ್ಲ ಮತ್ತು ನಮ್ಮ ಕ್ಷೇತ್ರದಲ್ಲಿ ಯಾರೊಬ್ಬರಿಗೂ ಆಶ್ರಯ ನಿವೇಶನಗಳ ಆವಶ್ಯಕತೆಯೇ ಇಲ್ಲವಾದ್ದರಿಂದ, ಮೇಲ್ಕಂಡ ಎಲ್ಲಾ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಷ್ಟೇ ಮೀಸಲಿಡಬೇಕೆಂಬುದು ಬಿಜೆಪಿ ಕೌನ್ಸಿಲರ್ ರಾಮಚಂದ್ರರ ಮನವಿಯ ಸಾರಾಂಶ.

ಇದು ಶಾಸಕ ಶ್ರೀನಿವಾಸ್ ಮತ್ತು ಕೌನ್ಸಿಲರ್ ರಾಮಚಂದ್ರರ ಜಿದ್ದಾಜಿದ್ದಿಯ ಮೂಲಕಾರಣ. ಕಳೆದ ಕೆಲ ದಿನಗಳಿಂದ ಶಾಸಕ ಶ್ರೀನಿವಾಸ್ ಮತ್ತು ಕೌನ್ಸಿಲರ್ ರಾಮಚಂದ್ರರ ಮಧ್ಯೆ ಯಾಪಾಟಿ ಘರ್ಷಣೆಗಳಾಗಿವೆಯೆಂದರೆ; ಇಲ್ಲಿಗೆ ತಿಂಗಳ ಹಿಂದೆ ಅಶೋಕ್ ಫೋಟೋ ಹಾಕಿದ್ದ ರಾಮಚಂದ್ರನ ಫ್ಲೆಕ್ಸ್-ಬ್ಯಾನರ್‌ಗಳನ್ನು ಶ್ರೀನಿವಾಸ್ ಪುತ್ರ ಮತ್ತು ಕೊಟ್ಟಿಗೆಪಾಳ್ಯ ವಾರ್ಡಿನ ಕೌನ್ಸಿಲರ್ ವೆಂಕಟೇಶ್ ಬಾಬು ಬಂಟರು ಕುಯ್ದು ಹಾಕಿದ್ದಾರೆ. ಹಾಗೇ ಶಾಸಕ ಶ್ರೀನಿವಾಸ್ ಕಟೌಟುಗಳಿಗೆ ಕೌನ್ಸಿಲರ್ ರಾಮಚಂದ್ರನ ಬೆಂಬಲಿಗರು ಮಸಿ ಬಳಿದಿದ್ದಾರೆ. ತಮ್ಮ ಯಾವುದೇ ಕರಪತ್ರ-ಬ್ಯಾನರ್‌ಗಳಲ್ಲಿ ರಾಮಚಂದ್ರ, ಅಪ್ಪಿತಪ್ಪಿಯೂ ಶ್ರೀನಿವಾಸ್ ಭಾವಚಿತ್ರ ಮುದ್ರಿಸುವುದಿಲ್ಲ, ಹಾಗೇ ಶ್ರೀನಿವಾಸ್ ನಡೆಸುವ ಕಾರ್ಯಕ್ರಮಗಳಿಗೆ ಸೌಜನ್ಯಕ್ಕೂ ಕೌನ್ಸಿಲರ್ ರಾಮಚಂದ್ರನನ್ನು ಕರೆಯುವುದಿಲ್ಲ!




ರಾಮಚಂದ್ರ

ರಾಜರಾಜೇಶ್ವರಿನಗರದ ಯಾವುದೇ ಕಾಮಗಾರಿ, ಟೆಂಡರ್, ವರ್ಗಾವರ್ಗಿಯ ವಿಷಯದಲ್ಲಿ ಶಾಸಕ ಶ್ರೀನಿವಾಸ್ ಧೋರಣೆಯೇ ಒಂದಾದರೆ ಅದಕ್ಕೆ ಕೌನ್ಸಿಲರ್ ರಾಮಚಂದ್ರನ ನಿಲುವು ತೀರ ವ್ಯತಿರಿಕ್ತ, ಕೌನ್ಸಿಲರ್ ರಾಮಚಂದ್ರನ ವಿರುದ್ಧ ಶಾಸಕರ ಪುತ್ರ ವೆಂಕಟೇಶ್ ಬಾಬು ದೂರು ಕೊಡುವುದು, ಶ್ರೀನಿವಾಸ್ ಬೆಂಬಲಿಗರ ವಿರುದ್ಧ ಕೌನ್ಸಿಲರ್ ಅನುಯಾಯಿಗಳು ದೂರು ನೀಡುವುದು ನಡೆದೇ ಇದೆ. ಬಹುಶಃ ಬೆಂಗಳೂರಿನ ಯಾವೊಂದು ಬಿಜೆಪಿ ಶಾಸಕನ ಕ್ಷೇತ್ರದಲ್ಲೂ ಅವರದ್ದೇ ಪಕ್ಷದ ಕಾರ್ಯಕರ್ತರ ಮಧ್ಯೆ ಈ ಮಟ್ಟದ ಜಿದ್ದಾಜಿದ್ದಿ ಕಾಣಸಲಿಕ್ಕಿಲ್ಲ.

ಕುವೆಂಪು ಪಾರ್ಕ್ ಧ್ವಂಸ

ಕೆಂಗೇರಿ ಹೋಬಳಿಯ ಪಂತರಪಾಳ್ಯದಲ್ಲಿದ್ದ ಕೆರೆಜಾಗದ 2.1 ಗುಂಟೆಯಲ್ಲಿ ಇಲ್ಲಿಗೆ ವರ್ಷದ ಹಿಂದೊಂದು ಉದ್ಯಾನವನ ನಿರ್ಮಿಸಿದ್ದು ಕೌನ್ಸಿಲರ್ ರಾಮಚಂದ್ರ. ಅದನ್ನು ಡಿಸಿಎಂ ಅಶೋಕ್ ಕೈಯ್ಯಲ್ಲೇ ಉದ್ಘಾಟಿಸಿದ್ದಾಯ್ತು. ಆದರೆ ಒಂದೇ ತಿಂಗಳಿಗೆ ಶಾಸಕ ಶ್ರೀನಿವಾಸ್ ತಮ್ಮ ಕೌನ್ಸಿಲರ್ ಪುತ್ರನ ಗ್ಯಾಂಗ್ ಛೂಬಿಟ್ಟಿದ್ದೇ ಇಡೀ ಪಾರ್ಕನ್ನು ನೆಲಸಮಗೊಳಿಸಿಬಿಟ್ಟರು. ಪಾರ್ಕ್ ನಿರ್ಮಾಣಕ್ಕೆಂದು ಪಾಲಿಕೆ ಮಂಜೂರು ಮಾಡಿದ್ದ 37 ಲಕ್ಷ ರೂಪಾಯಿಗಳು ಮಣ್ಣುಪಾಲಾಯಿತು.

ಹಕೀಕತ್ತೇನೆಂದರೆ ಪಾರ್ಕನ್ನು ನೆಲಸಮಗೊಳಿಸಿ ಅದರ ಎರಡೆಕರೆ ಭೂಮಿಯನ್ನು ಆಶ್ರಯ ನಿವೇಶನಗಳನ್ನಾಗಿ ವಿಂಗಡಿಸಿ ಹಂಚುವುದು ಶಾಸಕ ಶ್ರೀನಿವಾಸ್ ಉದ್ದೇಶ. ಹೊಸಕೆರೆ ಹಳ್ಳಿಯಲ್ಲಿರುವ ಏಳೆಕರೆ ಐದು ಗುಂಟೆಯ ಪಾಲಿಕೆ ಸೊತ್ತು, ವಡ್ಡರಪಾಳ್ಯದಲ್ಲಿರುವ ಮೂರೆಕರೆ 18 ಗುಂಟೆಯ ಸರ್ಕಾರಿ ಜಮೀನು, ಚನ್ನಸಂದ್ರ ದಲ್ಲಿರುವ ಎರಡೆಕರೆ 35 ಗುಂಟೆಯ ಪಾಲಿಕೆ ಆಸ್ತಿ; ಹೀಗೆ ಎಲ್ಲೆಲ್ಲಿ ಸರ್ಕಾರಿ ಭೂಮಿ ಖಾಲಿ ಬಿದ್ದಿದೆಯೋ ಅದೆಲ್ಲವನ್ನೂ ಸೈಟುಗಳನ್ನಾಗಿ ವಿಂಗಡಿಸಿ ತನ್ನ ಕ್ಷೇತ್ರದ ವಸತಿಹೀನರಿಗೆ ಹಂಚುತ್ತೇನೆಂದು ಹೊರಟ ಶಾಸಕ ಶ್ರೀನಿವಾಸ್ ಉದ್ದೇಶ ಮೇಲುನೋಟಕ್ಕೆ ಮಹಾನ್ ಜನಕಾಳಜಿಯಂತೆ, ಬಡವರ ಉದ್ಧಾರದಂತೆ ಕಾಣುತ್ತದೆಯಾದರೂ ಅದರ ಒಳಮರ್ಮವೇ ಬೇರೆಯಿದೆ.



ಹೀಗೆ ವಿಂಗಡಿಸಿದ ಸೈಟುಗಳನ್ನು ಶ್ರೀನಿವಾ 30ಥ40 ಅಳತೆಯಲ್ಲಿ ನಿರ್ಮಿಸಿದ್ದಾರೆ. ಯಾರೇ ಬಡವ ಬೀದಿಗೆ ಬಿದ್ದವರಿಗೆ ಏಕೆ 30ಥ40 ಸೈಟುಗಳು ಬೇಕ ಅಸಲಿಗೆ ಬೆಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ ಆಶ್ರ ಸಮಿತಿಯೆಂಬುದೇ ಅಪ್ರಸ್ತುತ ಮತ್ತು ಅನಗತ್ಯ. ತಿ ನಿರ್ಗತಿಕರು ಸರ್ಕಾರಿ ಜಾಗದಲ್ಲಿ ಜೋಪಡಿಗಳನ್ನೊ ಸ್ಲಮ್ಮನ್ನೋ ಎಬ್ಬಿಸಿದ್ದರೆ ಅದಕ್ಕೆ ಕೊಳಚೆ ನಿರ್ಮೂಲ ಮಂಡಳಿಯೇ ಮನೆಕಟ್ಟಿಸಿಕೊಡುತ್ತದೆ. ಮಿಕ್ಕಂತೆ ಬಿಡಿ ಮತ್ತು ಹೌಸಿಂಗ್ ಬೋರ್ಡುಗಳಿವೆ. ಓಟ್ ಬ್ಯಾ ರಾಜಕಾರಣದ ಉದ್ದೇಶದಿಂದ ಬಂಗಾರಪ್ಪ ಶುರುವಿ ಆಶ್ರಯ ಯೋಜನೆಯೇ ಮತ್ತೊಂದು ರೂಪದ ರಿಯ ಎಸ್ಟೇಟ್ ದಂಧೆಯೆಂಬುದು ಬೆಸ್ಕ್ಕಿ ಅರುಣಾಚಲಂನಂಥವರು ಜೈಲುಪಾಲಾಗುವ ಮೂ ಸಾಬೀತಾಗಿದೆ. ಇಂಥಾದ್ದರಲ್ಲಿ ಮೊದಲೇ ಬೋಗಸ್ 15 ಕೋಟಿಯ ಬಿಲ್ ಕಾಮಗಾರಿ ಹಗರಣದಲ್ಲಿ ಸಿಕ್ಕಿಬ ಶಾಸಕ ಶ್ರೀನಿವಾಸ್ ಅದು ಸಾಲದೆಂಬಂತೆ ಆಶ್ರ ನಿವೇಶನವೆಂಬ ಹೊಸ ಸಾಹಸಕ್ಕೆ ಕೈಯಿಟ್ಟದ್ದು ನೈ ಖದೀಮ ಟೀಣಿಯ ಕಾರಣದಿಂದ.

ಹೊಸಕೆರೆಹಳ್ಳಿಯ ಪ್ರಮೋದ್ ಲೇಔಟ್‌ನಲ್ಲಿ ಬಹುತೇಕ ಸೈಟುಗಳನ್ನು ನೈಸ್ ರಸ್ತೆಗಾಗಿ ಖೇ ಆಕ್ರಮಿಸಿಕೊಂಡ. ಅದು ಯಾವುದೇ ಕಾನೂನುಬ ಆಧಾರದಿಂದಲ್ಲದೇ ಕೇವಲ ರೌಡಿಗಳು ಮ ಪೊಲೀಸರನ್ನಿಟ್ಟುಕೊಂಡು ಖೇಣಿ ಆಕ್ರಮಿಸಿದ ನಿವೇಶ ಳಾಗಿತ್ತು. ನೊಂದ ಜನ ನ್ಯಾಯ ಕೇಳಲು ಶಾಸಕ ಶ್ರೀನಿವಾ ಮನೆಗೆ ಬಂದು ಕಣ್ಣೀರಿಟ್ಟರೆ ಎಮ್ಮೆಲ್ಲೇ ಸಾಹೇಬ ಭೂಮಿ ಆಕಾಶ ನೋಡತೊಡಗಿದರು. ಏಕೆಂದರೆ ಹೊತ್ತಿಗಾಗಲೇ ಶ್ರೀನಿವಾಸ್ ಖೇಣಿಯೆದುರು ತ ಮಗಳು ಕಟ್ಟಿಸುತ್ತಿರುವ ಕಾಲೇಜಿಗೆಂದು ದೊಡ್ಡ ಮೊತ್ತಕ್ಕ ಕೈಚಾಚಿದ್ದಾಗಿತ್ತು!

ವೈಯ್ಯಾರಿ ಡಿಸೋಜಾ

ಹಾಗಂತ ಜನ ಆಡಿಕೊಂಡಿದ್ದು ಯಾವತ್ತು ಶ್ರೀನಿವಾ ಕಿವಿಗೆ ಬಿತ್ತೋ ಖೇಣಿಯಿಂದಾಗಿ ಯಾರ್‍ಯಾರು ಸೈ ಕಳಕೊಂಡಿದ್ದರೋ ಅವರೆಲ್ಲರಿಗೂ ಪಂತರಪಾಳ್ಯದ ಭೂಮಿಯಲ್ಲಿ ನಿರ್ಮಿಸಿದ್ದ ಕುವೆಂಪು ಪಾರ್ಕ್‌ನಲ್ಲೇ ಸೈ ಕೊಡಿಸುತ್ತೇನೆಂದು ಘೋಷಿಸಿಬಿಟ್ಟರು. ಮೇಲುನೋಟಕ್ಕೆ ಎಮ್ಮೆಲ್ಲೇ ಸಾಹೇಬರ ನ್ಯಾಯ ನಿರ್ಣಯದಂತೆ ಕಂಡರ ಅದರ ಒಳಾರ್ಥ ಮಾತ್ರ ಒಂದೇ ಕಲ್ಲಿಗೆ ಎರಡು ಕಾ ಉದುರಿಸುವ ಡಬ್ಬಲ್ ಧಮಾಕ. ಮುಗ್ಧರ ಸೈಟು ದೋಚಿ ಬಿಟ್ಟದ್ದಕ್ಕೆ ನೈಸ್ ಖೇಣಿಯಿಂದ ಕೋಟಿ ಮೊತ್ತ ಮ ಸೈಟು ಕೊಟ್ಟದ್ದಕ್ಕೆ ನಿವೇಶನ ಪಡೆದವರಿಂದಲೂ ಲಕ್ಷ ಮೊತ್ತ!

ಹೆಸರಿಗೆ ಆಶ್ರಯ ಉಚಿತ ನಿವೇಶನವಾದರ ಯಾರ್‍ಯಾರಿಗೆ ಸೈಟು ಸಿಗುತ್ತೋ ಪ್ರತಿಯೊಬ್ಬರೂ ಕನಿಷ್ಠ ಲಕ್ಷದಿಂದ 15 ಲಕ್ಷದ ತನಕ ಮಡಗಲೇಬೇಕು. 20x3 ಸೈಟಿಗೆ 5 ರಿಂದ 10 ಲಕ್ಷ. 30x40 ನಿವೇಶನವಾದ 10 ರಿಂದ 15 ಲಕ್ಷ!

ಆಶ್ರಯ ಯೋಜನೆಗೆಂದು ಫಲಾನುಭವಿಗಳ ಗುರುತಿಸದೆ ಯಾರ್‍ಯಾರೋ ಮಾರ್ವಾಡಿ, ತಮಿಳರ ಕುವೆಂಪು ಪಾರ್ಕಿನ ಭೂಮಿ ಮಾರುತ್ತಿರುವ ಎಮ್ಮೆ ಶ್ರೀನಿವಾಸ್‌ರ ರಿಯಲ್ ಎಸ್ಟೇಟ್ ದಂಧೆ ಬಯಲಾಗಿ

ಅದ್ಧೂರಿ ಹುಟ್ಟುಹಬ್ಬಕ್ಕೆ ಎಮ್ಮೆಲ್ಲೇಗೇ ಆಹ್ವಾನವಿಲ್ಲ!

ಎಮ್ಮೆಲ್ಲೇಗೂ ಕೌನ್ಸಿಲರ್‌ಗೂ ಭುಗಿಲೆದ್ದ ಘರ್ಷಣೆಗೆ ಕೇವಲ ಪಾಲಿಕೆ ಆಸ್ತಿ, ಪಾರ್ಕು, ಮೈದಾನಗಳನ್ನು ಉಳಿಸುವುದಷ್ಟೇ ಅಲ್ಲ ಅದಕ್ಕೂ ಮಿಗಿಲಾದ ರಾಜಕೀಯ ಜಿದ್ದಾಜಿದ್ದಿಯಿದೆ. ಅದು ಅಶೋಕ್ ವಿರುದ್ಧದ ಶ್ರೀನಿವಾಸ್ ಆಕ್ರೋಶ ಮತ್ತು ಬದಲಾದ ರಾಜಕೀಯ ಸನ್ನಿವೇಶದ ವೈಪರೀತ್ಯ. ಕಳೆದ ವಿಧಾನಸಭಾ ಚುನಾವಣೆಯಲ್ಲಿಯೇ ಎಮ್ಮೆಲ್ಲೆಯಾಗಬೇಕಿದ್ದ ತನ್ನ ಏಳಿಗೆಗೆ ಶಾಸಕ ಶ್ರೀನಿವಾಸ್ ದೊಡ್ಡ ತಡೆಗೋಡೆಯಾದನೆಂಬ ಆಕ್ರೋಶ ರಾಮಚಂದ್ರನದ್ದಾದರೆ ನಾಳೆ ತನ್ನ ಮಗ ವೆಂಕಟೇಶ್‌ಬಾಬುವನ್ನು ಶಾಸಕನನ್ನಾಗಿ ಮಾಡಿಯೇ ನೋಡಬೇಕೆಂಬುದು ಶಾಸಕ ಶ್ರೀನಿವಾಸ್ ದುರಾಸೆ.


ಅಶೋಕ್ ಯಾವತ್ತಿದ್ದರೂ ತನಗೆ ಕಂಟಕವೇ ಎಂಬ ಸಂಕಟದಲ್ಲೇ ಶ್ರೀನಿವಾಸ್ ಆಶ್ರಯಿಸಿದ್ದು ಯಡ್ಡಿಯನ್ನು. ನಿನ್ನೆಮೊನ್ನೆಯ ತನಕ ಯಡ್ಡಿ ಕೂಡ ಅಶೋಕ್ ವಿರುದ್ಧ ಶ್ರೀನಿವಾಸ್‌ರನ್ನೇ ಎತ್ತಿಕಟ್ಟುತ್ತಲೇ ಬಂದರು. ಯಾವತ್ತು ಸದಾನಂದಗೌಡರೇ ಕೈಕೊಟ್ಟರೋ ಯಡ್ಡಿಗೆ ಅಶೋಕ್ ಜೊತೆ ಕೈಜೋಡಿಸುವುದು ಬಿಟ್ಟರೆ ಬೇರೆ ದಾರಿಯೇ ಇಲ್ಲವಾಯ್ತು, ಆಗ ಅಂತರಪಿಶಾಚಿಯಂತಾದ ಶ್ರೀನಿವಾಸ್ ಎಡಬಿಡಂಗಿಯಂತೆ ಸದಾನಂದಗೌಡರನ್ನು ಹೊಗಳುವುದು, ಅದಕ್ಕೆ ಸದಾನಂದಗೌಡ ಸೊಪ್ಪು ಹಾಕಲಿಲ್ಲವೆಂದು ಮತ್ತೆ ಯಡ್ಡಿಯನ್ನು ಕೊಂಡಾಡಿದ್ದು, ಕೊನೆಕೊನೆಗೆ ಯಡ್ಡಿ, ಅಶೋಕ್, ಅನಂತ್, ಈಶ್ವರಪ್ಪ ಯಾರೂ ಶ್ರೀನಿವಾಸ್‌ರನ್ನು ನಂಬದಂತಾಗಿದ್ದು ಅತ್ತ ಬಿಜೆಪಿಯಲ್ಲೂ ನೆಲೆಯಿಲ್ಲ, ಇತ್ತ ಮಂತ್ರಿಗಿರಿಯೂ ಇಲ್ಲದಂತಾಗಿ ಶ್ರೀನಿವಾಸ್ ಜೆಡಿಎಸ್‌ನತ್ತಲೂ ಕಣ್ಣುಹಾಕಿದ್ದು, ಇದೆಲ್ಲವೂ ವಯೋವೃದ್ಧ ರಾಜಕಾರಣಿ ಶ್ರೀನಿವಾಸ್‌ರ ಅತಂತ್ರ ಪರಿಸ್ಥಿತಿಯಷ್ಟೇ ಸೂಚಿಸುತ್ತವೆ.

ಇದನ್ನೆಲ್ಲ ಲೆಕ್ಕ ಹಾಕಿಯೇ ಕೌನ್ಸಿಲರ್ ರಾಮಚಂದ್ರನ ಎಮ್ಮೆಲ್ಲೇ ಕನಸಿಗೆ ಜೀವ ಬಂದಿದೆ. ಹೇಗೂ ಶ್ರೀನಿವಾಸ್‌ಗೆ ವಯಸ್ಸಾಗಿದೆ. ಮುಂಬರುವ ಚುನಾವಣೆ ಹೊತ್ತಿಗೆ ರೋಸತ್ತು ಜೆಡಿಎಸ್‌ಗೆ ಹೋದರೂ ಅಚ್ಚರಿಯಿಲ್ಲ. ಆಗ ರಾಜರಾಜೇಶ್ವರಿ ನಗರಕ್ಕೆ ತನ್ನನ್ನು ಬಿಟ್ಟರೆ ಎಮ್ಮೆಲ್ಲೇ ಕ್ಯಾಂಡಿಡೇಟಿಲ್ಲ. ಅದಕ್ಕೆಂದು ರಾಮಚಂದ್ರ ಬಳಸಿಕೊಂಡಿದ್ದು ಇದೇ ಸೆಪ್ಟಂಬರ್ 5ರ ತನ್ನ ಹುಟ್ಟುಹಬ್ಬವನ್ನು!


ಇಡೀ ರಾಜರಾಜೇಶ್ವರಿ ಕ್ಷೇತ್ರವೇ ದಂಗಾಗುವಂತೆ ಕೌನ್ಸಿಲರ್ ರಾಮಚಂದ್ರರ ಹುಟ್ಟುಹಬ್ಬದ ಬ್ಯಾನರ್, ಫ್ಲೆಕ್ಸ್‌ಗಳನ್ನು ಹಾಕಲಾಯ್ತು, ಇಂಥ ಫ್ಲೆಕ್ಸ್‌ಗಳ ತುಂಬಾ ತನ್ನ ಗುರು ಅಶೋಕ್ ಫೋಟೋ ಬಿಟ್ಟರೆ ಸೌಜನ್ಯಕ್ಕೂ ಶ್ರೀನಿವಾಸ್‌ರ ಫೋಟೋ ಹಾಕಲಿಲ್ಲ, ಕಾಟಾಚಾರಕ್ಕೂ ತನ್ನ ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಶಾಸಕರನ್ನು ಕರೆಯಲಿಲ್ಲ; ಇಡೀ ಕ್ಷೇತ್ರಾದ್ಯಂತ ರಾಮಚಂದ್ರ ಬರ್ತ್‌ಡೇ ಸಮಾರಂಭದ ಕಾವೇರಿದ್ದನ್ನು ಕಂಡ ಶ್ರೀನಿವಾಸ್ ಹಿಂದಿನ ದಿನವೇ ಮನೆಗೆ ಬರುವಂತೆ ರಾಮಚಂದ್ರನನ್ನು ಆಹ್ವಾನಿಸಿದರೆ ಅದಕ್ಕೆ ರಾಮಚಂದ್ರ ನಯಾಪೈಸೆಯ ಗೌರವ ಕೊಡಲಿಲ್ಲ. ಹುಟ್ಟುಹಬ್ಬಕ್ಕೆಂದು ಬಾಲಗಂಗಾಧರ ಸ್ವಾಮೀಜಿಯೇ ಬಂದು ಆಶೀರ್ವದಿಸಿದರು. ಅಶೋಕ್, ಪಕ್ಕದ ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಮತ್ತು ಶ್ರೀನಿವಾಸ್ ತಮ್ಮ ಕೃಷ್ಣಪ್ಪ ಕಾಂಗ್ರೆಸ್ ನಾಯಕ ಹನುಮಂತರಾಯಪ್ಪ ಬೇಕಾಬಿಟ್ಟಿ ಕೌನ್ಸಿಲರ್‌ಗಳೆಲ್ಲ ಬಂದರಾದರೂ ಶ್ರೀನಿವಾಸ್‌ಗೆ ಆಹ್ವಾನವೇ ಇರಲಿಲ್ಲ. ತನ್ನದೇ ಪಕ್ಷದ ಸ್ಥಳೀಯ ಶಾಸಕನನ್ನೇ ಹೊರಗಿಟ್ಟು ಏಳೆಂಟು ಸಾವಿರ ಜನರನ್ನು ಸೇರಿಸಿ ಅಭೂತಪೂರ್ವವಾಗಿ ಹುಟ್ಟುಹಬ್ಬ ಆಚರಿಸಿಕೊಂಡ ರಾಮಚಂದ್ರ ಮುಂದಿನ ಎಮ್ಮೆಲ್ಲೇ ಚುನಾವಣೆಯ ಮೇಲೆ ಕಣ್ಣಿಟ್ಟೇ ಮಾಡಿದ್ದು ಶಾಸಕ ಶ್ರೀನಿವಾಸ್‌ಗೆ ಹೊಟ್ಟೆ ಸಂಕಟವಾಗದೇ ಇನ್ನೇನು? ಮೊನ್ನೆ ನಡೆದ ಮಾರಾಮಾರಿಗೆ ತಕ್ಷಣದ ಕಾರಣವಾಗಿದ್ದೇ ಈ ಹುಟ್ಟು ಹಬ್ಬ!



ಚನ್ನಸಂದ್ರದ ಪಾಲಿಕೆ ಜಮೀನು



ಚನ್ನಸಂದ್ರದ ಪಾಲಿಕೆ ಜಮೀನಿನಲ್ಲಿ ಸೈಟು ವಿಂಗಡಿಸಿದ್ದು



ಎಂಎಲ್ಎ ವಿರುದ್ಧ ರೊಚ್ಚಿಗೆದ್ದ ಜನ

ರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ಡಿಸೋಜಾ ಎಂಬಾಕೆಯು ...ಲಕ. ಈಕೆ ಶ್ರೀನಿವಾಸ್ ಪುತ್ರ ಮತ್ತು ಕೊಟ್ಟಿಗೆ...ದ ಕೌನ್ಸಿಲರ್ ವೆಂಕಟೇಶ ಬಾಬುವಿನ ಪರಮಾಪ್ತೆ, ...ಲೋಕ ಸುಂದರಿಯಂತೆ ವೈಯ್ಯಾರವಾಗಿ ಶಾಸಕರ ...ಮರವನ್ನು ಆಕ್ರಮಿಸಿರುವ ರಶ್ಮಿ ಡಿಸೋಜಾ ತಲಾ ...ಗೆ ಲಕ್ಷದ ಲೆಕ್ಕದಲ್ಲಿ ಹಣ ವಸೂಲಿ ...ಮತ್ತಿದ್ದಾಳೆಂದೂ ಆಕೆಗೆ ಎಮ್ಮೆಲ್ಲೇ ಸಾಹೇಬರ ಡ್ರೈವರ್ ...ಎಂಬಾತನೇ ಸೈಟು ದಂಧೆಯಲ್ಲಿ ಸಹಾಯಕನೆಂದೂ ಕ್ಷೇತ್ರದುದ್ದಕ್ಕೂ ಪುಕಾರೆದ್ದಿದೆ.

...ಇದರ ವಾಸನೆ ಹಿಡಿದೇ ಕೆದಕ ಹೊರಟಿದ್ದು ಶಾಸಕರ ...ವಿರೋಧಿ ಕೌನ್ಸಿಲರ್ ರಾಮಚಂದ್ರ. ಕೇವಲ ...ಪಾಳ್ಯದ ಕುವೆಂಪು ಪಾರ್ಕ್ ಮಾತ್ರವೇ ಅಲ್ಲ ...ಕೆರೆಯಲ್ಲಿದ್ದ 7.5 ಎಕರೆ, ವಡ್ಡರಪಾಳ್ಯದ 3.18 ...ರೆ, ಚನ್ನಸಂದ್ರದ 2.35 ಎಕರೆ ಅಂದರೆ ...ರಾಜೇಶ್ವರಿನಗರದಲ್ಲಿ ಎಲ್ಲೆಲ್ಲಿ ಚೂರು-ಪಾರು ಪಾಲಿಕೆ ...ತ್ತೋ ಅದೆಲ್ಲವನ್ನು ಆಶ್ರಯ ಹೆಸರಲ್ಲಿ ಸೈಟು ವಿಂಗಡಿಸಿ ...ಹಾಕಲು ಎಮ್ಮೆಲ್ಲೇ ಸಾಹೇಬರು ಕೈಇಟ್ಟಾಗಿತ್ತು. ...ವಿರುದ್ಧ ಬೀದಿಗಿಳಿದ ರಾಮಚಂದ್ರ ಕಳೆದ ಫೆಬ್ರುವರಿ ...ಒಂದು ಶಾಸಕ ಶ್ರೀನಿವಾಸ್ ವಿರುದ್ಧವೇ ಬಿಬಿಎಂಪಿ ...ಯುಕ್ತರಿಗೆ ದೂರು ಕೊಟ್ಟರು.


ರಶ್ಮಿ ಡಿಸೋಜಾ


ವೆಂಕಟೇಶ್ ಬಾಬು

...ಇದರಿಂದ ರಾಮಚಂದ್ರ ...ದ್ಧ ಕಿಡಿಕಾರಲಾರಂಭಿಸಿದ ...ನಿವಾಸ್ ಆಗಿದ್ದಾಗಲಿ ಸೈಟು ...ಕೇ ಬಿಡ್ತೀನಿ ಎಂದು ಮೊನ್ನೆ ...ದರೆ ಸೆಪ್ಟಂಬರ್ 10ರ ...ಮವಾರ ಮಧ್ಯಾಹ್ನ ಏಕಾಏಕಿ ...ಸಂದ್ರದ ಪಾಲಿಕೆ ಆಟದ ...ದಾನಕ್ಕೆ ದಂಡು ದಾಳಿ ಸಮೇತ ...ಮುಸಿದ್ದಾರೆ. ಮಗ ವೆಂಕಟೇಶ್ ...ಬು, ಪೊಲೀಸ್ ಸಬ್‌ಇನ್ಸ್...ಕ್ಟರ್ ಹನುಮಂತಯ್ಯ, ಬಿನ್ನಾಣ ...ರಶ್ಮಿ ಡಿಸೋಜಾ ಮುಂತಾದ ...ವರೊಂದಿಗೆ ಚನ್ನಸಂದ್ರಕ್ಕೆ ಬಂದು ... ಆಟದ ಮೈದಾನ, ಸರ್ಕಾರಿ ...ಲೆ, ಪಾರ್ಕಿಗೆಂದು ಮೀಸಲಿಟ್ಟ ...5 ಎಕರೆ ಭೂಮಿಯಲ್ಲಿ ಸೈಟು ...ವಿಂಗಡಿಸತೊಡಗಿದ್ದಾರೆ.

ಕೊಚ್ಚಾಕ್ರೋ ಅವನ್ನ...!

...ಇದರಿಂದ ರೊಚ್ಚಿಗೆದ್ದ ಆ ಭಾಗದ ನಾಗರಿಕರೆಲ್ಲ ...ಏಕಿ ಜಮಾಯಿಸಿದ್ದೇ ಎಮ್ಮೆಲ್ಲೇ ವಿರುದ್ಧ ಕಿಡಿಕಾರಿದ್ದಾರೆ. ...ರೆ ಸುರಸುಂದರಿ ರಶ್ಮಿ ಡಿಸೋಜಾ ಸುಮ್ಮನಿರಲಾರದೆ ...ಭಟಿಸಿದ ಜನರ ಮೇಲೇ ಅವಾಚ್ಯ ಬೈಗುಳಕ್ಕಿಳಿದು ...ಗೆ ನಿಂತಿದ್ದಾಳೆ. ಇದು ಕೌನ್ಸಿಲರ್ ರಾಮಚಂದ್ರನ ...ಗೆ ಬಿದ್ದಿದೆ. ಎಷ್ಟೆಂದರೂ ಚನ್ನಸಂದ್ರ ಕೂಡ ...ಸರಾಜೇಶ್ವರಿ ವಾರ್ಡಿಗೆ ಬರುತ್ತದೆ. ನಾಳೆ ತನ್ನ ವಿರುದ್ಧ ... ಎಲ್ಲಿ ರೊಚ್ಚಿಗೇಳುತ್ತಾರೋ ಎಂದು ಭೀತಿಗೆ ಬಿದ್ದೇ ...ಬಂದ ರಾಮಚಂದ್ರರನ್ನ ಕಂಡಿದ್ದೇ ಎಮ್ಮೆಲ್ಲೇ ಸಾಹೇಬರ ...ನೆತ್ತಿಗೇರಿದೆ. "ಏನೋ ಸೂ... ಮಗನೆ! ಮಿಕಿದ್ದೆಲ್ಲಕ್ಕೂ ...ಲೋಕ್ ಫೋಟೋ ಹಾಕ್ಕೋತ್ತೀಯಾ, ಇಲ್ಲೇನು ...ಯೋಕ್ಕೆ ಬಂದ್ಯಾ? ಮೊದಲು ಇಲ್ಲಿಂದ ಜಾಗ ಖಾಲಿ ...ಮಾಡು" ಎಂದು ಕೂಗಹಾಡಿಬಿಟ್ಟರು.

ಅಷ್ಟಕ್ಕೇ ಕಂಗಾಲಾದ ರಾಮಚಂದ್ರ ನೆರೆದ ಜನರೆದುರು ...ಕೇರಿಸಿದ್ದೇ? ಇದು ನಿಮ್ಮ ಅಪ್ಪನ ಆಸ್ತಿ ಅಂದ್ಕೊಂಡ್ರಾ? ...ಚಂಡೋರಿಗೆ ಸೈಟು ಹಂಚೋದಕ್ಕಲ್ಲಾ ಇದನ್ನು ಖಾಲಿ ...ಟ್ಟಿದ್ದು, ಆಟದ ಮೈದಾನ, ಶಾಲೆ, ಪಾರ್ಕಿಗೆ ಅಂತಲೇ ...ಟ್ಟ ಜಾಗನ ಯಾರ್‍ಯಾರಿಗೋ ಹಂಚೋಕೆ ನೀವ್ಯಾರ್ರೀ?, ...ದು ಕೂಗಾಡಿಬಿಟ್ಟ. ಇದರಿಂದ ಮತ್ತಷ್ಟು ರೊಚ್ಚಿಗೆದ್ದ ...ನಿವಾಸ್ ಹೋಗಿದ್ದೇ ರಾಮಚಂದ್ರರ ಕಾಲರ್ ಹಿಡಿದು ...ಳಕ್ಕೆ ಗುದ್ದಿಬಿಟ್ಟರು. ಜೊತೆಗಿದ್ದ ರಶ್ಮಿ ಡಿಸೋಜಾ ...ಯಿಗೆ ಬಂದಂತೆ ರಾಮಚಂದ್ರನನ್ನು ಬೈದಿದ್ದಾಳೆ. ಇನ್ನೇನು ...ಹುತವಾದೀತೋ ಎಂದು ಅಲ್ಲೇ ಇದ್ದ ಪೊಲೀಸರು ...ಗ್ಗದ್ದೇ ಜಗಳ ಬಿಡಿಸಿದ್ದಾರೆ. ಪೊಲೀಸರೆದುರು ಎಮ್ಮೆಲ್ಲೇ ...ಗ ವೆಂಕಟೇಶ್ ಬಾಬುವಿಗೆ, ಈ ನನ್ನ ಮಗನ್ನ ಕೊಚ್ಚಿ ...ಹಾಕ್ರೋ...., ಎಂದು ಕೂಗಾಡಿದ್ದು ಕೇಳಿಸಿದೆ. ...ಮಚಂದ್ರನ ಜೊತೆ ಬಂದಿದ್ದ ಮಾಜಿ ಪಟ್ಟಣಗೆರೆ ...ಪಂಚಾಯ್ತಿ ಸದಸ್ಯ ನರಸಿಂಹನಿಗೂ ಎಮ್ಮೆಲ್ಲೇ ಭಟ್ಟಂಗಿಗಳಿಂದ ...ಟೆ ಬಿದ್ದಿದೆ. ಶಾಸಕರ ವಿರುದ್ಧವೇ ಬಿಜೆಪಿ ಕಾರ್ಯಕರ್ತ ...ನರಸಿಂಹಯ್ಯ ದೂರು ದಾಖಲಿಸಿದ್ದಾರೆ.


ಇದು ಎಮ್ಮೆಲ್ಲೇ ವಿರುದ್ಧದ ಕೌನ್ಸಿಲರ್ ಜಿದ್ದಾಜಿದ್ದಿಯ ...ದಲ ಸ್ಫೋಟವಷ್ಟೇ. ಸೈಟು ಕೊಡುತ್ತೇನೆಂದು ಈಗಾ...ಲೇ ನೂರಾರು ಜನರಿಂದ ಲಕ್ಷದ ಲೆಕ್ಕದಲ್ಲಿ ದುಡ್ಡು ...ತ್ತ ಎಮ್ಮೆಲ್ಲೆಗೆ ಪಾರ್ಕು, ಆಟದ ಮೈದಾನ, ಕೆರೆಗಳ್ಯಾ...ವುದನ್ನೂ ಬಿಡದೆ ಸೈಟು ವಿಂಗಡಿಸಲೇಬೇಕಾದ ಅನಿವಾ...ರ್ಯತೆ. ಶಾಸಕನ ಪಾಪಕ್ಕೆ ಜನ ತಸಗಲ್ಲಿ ಬಿದಿದಾರೋ ...ಎಂದು ಅದನ್ನು ಪ್ರತಿಭಟಿಸಲೇಬೇಕಾದ ಹರಕತ್ತು ...ಕೌನ್ಸಿಲರ್‌ಗೆ ಈ ಜಿದ್ದಾಜಿದ್ದಿ ಎಲ್ಲಿಗೆ ಮುಟ್ಟುತ್ತೋ? ...ಆಶ್ರಯ ಸೈಟು ಹಂಚಿಕೆಯಲ್ಲೇ ಇಂತಿಷ್ಟು ಪಾಲೆಂದು ...ಸರಿಪಾಗುತ್ತೋ? ಸೈಟಿಗಾಗಿ ದುಡ್ಡು ಕೊಟ್ಟವರಿಗೇ ...ನಾಮ ನೀಳುತ್ತೋ ಬಲ್ಲವರ್‍ಯಾರು?

● ವರದಿಗಾರ

ಮೈಲಾರಪ್ಪನವರೇ ಇದಕ್ಕೇನು ಮಾಡುತ್ತೀರಿ?

ಬೆಂಗಳೂರು ವಿವಿ ಅರಾಜಕತೆ ಅದ್ವಾನಗಳ ತಾಣ

ನೂತನ ವಿಸಿ ರಂಗಸ್ವಾಮಿ ಹಾಗೂ ರಿಜಿಸ್ಟ್ರಾರ್ ಪ್ರೊ. ಮೈಲಾರಪ್ಪನವರಿಗೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ನಿಜಕ್ಕೂ ಈ ಮೊದಲಿದ್ದಂತೆ ಉತ್ತಮ ರೀತಿಯಲ್ಲಿ ಮುನ್ನಡೆಸಬೇಕೆಂಬ ಅಪೇಕ್ಷೆ ಇರುವುದೇ ಆದಲ್ಲಿ ಈ ಉದ್ಧಟರ ವಿರುದ್ಧ ಕ್ರಮ ಕೈಗೊಳ್ಳಲಿ.



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಿಸಿ ಡಾ.ಪ್ರಭುದೇವ್ ಹಾಗೂ ರಿಜಿಸ್ಟ್ರಾರ್ ಪ್ರೊ. ಮೈಲಾರಪ್ಪನವರ ನಡುವೆ ನಡೆಯುತ್ತಿದ್ದ ನಿತ್ಯಕದನ ಕೊನೆಗೊಳ್ಳುವ ಹಂತಕ್ಕೆ ಬಂತೆಂದು ಕಾಣುತ್ತದೆ.

ಡಾ. ಪ್ರಭುದೇವರನ್ನು ಬಿಜೆಪಿ ಸರ್ಕಾರ ಅಲ್ಲಿಂದ ಸ್ಥಳ ಬದಲಿಸಿ ಕರ್ನಾಟಕ ಗ್ರಾಮೀಣ ಆರೋಗ್ಯ ಮಿಷನ್‌ನ ಚೇರ್‌ಮೆನ್ ಆಗಿ ನೇಮಿಸಿದೆ. ಈಗ ಪ್ರೊ. ರಂಗಸ್ವಾಮಿ ಬೆಂವಿವಿ ಎಂಬ ನಿತ್ಯ ರಗಳೆಯ ತಾಣದ ಹೊಸ ವಿಸಿಯಾಗಿ ಬರುತ್ತಿದ್ದಾರೆ. ಇಲ್ಲಿ ಮುಂದೇನಾಗುವುದೋ ಕಾದು ನೋಡೋಣ ಆದರೆ ವಿವಿಯೊಳಗೆ ಹಾಗೂ ವಿವಿ ವ್ಯಾಪ್ತಿಯ ಕಾಲೇಜುಗಳಲ್ಲಿ ಅರಾಜಕತೆ ಮೈದುಂಬಿ ಕುಣಿಯುತ್ತಿದೆ. ವಿವಿ ನಿಯಮಗಳು, ಪರೀಕ್ಷಾ ಪಾವಿತ್ರ್ಯ, ಆಡಳಿತದಲ್ಲಿ ದಕ್ಷತೆ ಇವೆಲ್ಲವೂ ಕರಗಿಹೋಗುತ್ತಿವೆ.

ನೂತನ ವಿಸಿ ಪ್ರೊ. ರಂಗಸ್ವಾಮಿ ಹಾಗೂ ರಿಜಿಸ್ಟ್ರಾರ್ ಪ್ರೊ.ಮೈಲಾರಪ್ಪ ತುರ್ತಾಗಿ ಗಮನಿಸಲಿ ಎಂಬ ಉದ್ದೇಶದಿಂದ ಅರಾಜಕತೆ ಹಾಗೂ ಅದ್ವಾನಗಳ ಒಂದೆರಡು ಸ್ಯಾಂಪಲ್‌ಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ಉತ್ತರವನ್ನು ತಿದ್ದುವ ಭೂಪರು

ಯುವಿಸಿಇ ಇಂಜಿನಿಯರಿಂಗ್ ಕೋರ್ಸ್‌ನ ಫೈನಲ್ ಇಯರ್ ಪರೀಕ್ಷೆಗಳನ್ನು ಕೆಲವರಿಗೆ ಅನುಕೂಲ ಮಾಡಿಕೊಡುವ ದುರುದ್ದೇಶದಿಂದ ಅವಧಿಗೆ ಮೊದಲೇ ನಡೆಸಿ ಈ ಹಿಂದೆ ರಾದ್ಧಾಂತವಾಗಿತ್ತು, ಆದರೂ ಕಲಿತ ಚಾಳಿ ಬಿಡದ ವಿವಿ ಪರೀಕ್ಷಾ ವಿಭಾಗದವರು ಆ ಪರೀಕ್ಷೆಯಲ್ಲಿ ಫೇಲಾಗಿದ್ದವರ ಈಗಿನ ಮರು ಪರೀಕ್ಷೆಯ ಉತ್ತರ ಪತ್ರಿಕೆಯನ್ನೇ ತಿದ್ದಿ ಇನ್ನೊಂದು ಹೊಸ ಹಗರಣ ಸೃಷ್ಟಿಸಿದ್ದಾರೆ. ವಿವಿಯ ಸಿಂಡಿಕೇಟ್ ಮೆಂಬರ್ ಕೃಷ್ಣ ಈ ಹಗರಣದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಆಶ್ಚರ್ಯ ಅಂದರೆ ಪರೀಕ್ಷೆಗೆ ಹಾಜರೇ ಆಗಿರದಿದ್ದ ವಿದ್ಯಾರ್ಥಿಗಳೂ ಕೂಡ ಈಗ ಒಳ್ಳೇ ಮಾರ್ಕ್ಸ್ ಪಡೆದು ಪಾಸಾಗಿರುವುದು. ವಿವಿಯ ಪರೀಕ್ಷಾ ನಿಯಮದಂತೆ ಯಾವ ವಿದ್ಯಾರ್ಥಿಯೂ ಓಎಂಆರ್ ಶೀಟ್‌ನಲ್ಲಿ ಉತ್ತರ ಪತ್ರಿಕೆಯ ಸಂಖ್ಯೆಯನ್ನು ನಮೂದಿಸುವಂತಿಲ್ಲ, ಆದರೂ ಕೆಲವರು ಸಂಖ್ಯೆ ನಮೂದಿಸಿ ಅಕ್ರಮ ನಡೆಸಲು ದಾರಿಮಾಡಿಕೊಂಡಿದ್ದಾರೆ. ವಿವಿಯ ಸ್ಪೆಷಲ್ ಆಫೀಸರ್ ಆಗಿರುವ ಸೈಯ್ಯದ್ ಜಮಾಲ್ ಎಂಬಾತ ತನ್ನ ಅಧಿಕಾರ ವ್ಯಾಪ್ತಿ ಮೀರಿ ಕೆಲವು ಉತ್ತರ ಪತ್ರಿಕೆಗಳಿಗೆ ಸಹಿ ಹಾಕಿರುವುದು ಈಗ ಪತ್ತೆಯಾಗಿದೆ.


ಮಾಸ್ಟರ್ ಡಿಗ್ರಿ ಆಗದಿದ್ದವರು ಲೆಕ್ಚರರ್‌ಗಳೇ


ಬೆಂಗಳೂರಿನ ಬಸವನಗುಡಿ ಬಳಿ ಇರುವ ವಾಸವಿ ಮಹಿಳಾ ಕಾಲೇಜಿನಲ್ಲಿ ಈ ತರದ ಒಂದು ಹಗರಣ ಬೆಳಕಿಗೆ ಬಂದಿದೆ.

ಹೇಳುವವರು ಕೇಳುವವರು ಯಾರು ಇಲ್ಲವೇನೊ ಎಂಬಂತೆ ಈ ಕಾಲೇಜಿನ ಪ್ರಿನ್ಸಿಪಾಲ್ ಡಾ.ಎಂ.ಜಿ. ನಮಿತಾ ಎಂ.ಕಾಂ.ಮುಗಿದಿರದ ಇಬ್ಬರನ್ನು ತಮ್ಮ ಕಾಲೇಜಿಗೆ ಲೆಕ್ಚರರ್‌ಗಳಾಗಿ ನೇಮಿಸಿಕೊಂಡು ಸರ್ಕಾರದ ಕಾನೂನು ಹಾಗೂ ಶಿಕ್ಷಣ ನೀತಿಗೇ ಸವಾಲೆಸೆದಿದ್ದಾರೆ.

ಬೆಂಗಳೂರಿನ ಅತೀ ಹಳೆಯ ಹಾಗೂ ಉತ್ತಮ ಕಾಲೇಜುಗಳ ಪೈಕಿ ಒಂದೆನಿಸಿಕೊಂಡಿದ್ದ ವಾಸವಿ ಮಹಿಳಾ ಕಾಲೇಜು ಈಗ ಹಣ ಮಾಡುವ ಹಾಗೂ ವಿದ್ಯಾರ್ಥಿನಿಯರ ಭವಿಷ್ಯವನ್ನೇ ಆಪತ್ತಿಗೆ ದೂಡುವಂತೆ ಹುಚ್ಚಾಟ ನಡೆಸುತ್ತಿದೆ.

ಆರ್ಟ್ಸ್ ವಿಭಾಗದಿಂದ ದುಡ್ಡು ಹುಟ್ಟುವುದಿಲ್ಲವೆಂದು ಈಗ ಕಾಲೇಜಿನ ಆರ್ಟ್ಸ್ ವಿಭಾಗವನ್ನೇ ನಿಷ್ಕ್ರಿಯಗೊಳಿಸಲಾಗಿದೆ. ಆಗಿನ ಶಿಕ್ಷಣ ಸಚಿವ ಡಾ. ವಿ.ಎಸ್. ಆಚಾರ್ಯ ಆರ್ಟ್ಸ್ ವಿಭಾಗ ಮುಂದುವರೆಸಬೇಕೆಂದು ಆದೇಶ ನೀಡಿದ್ದಾಗಲೂ ಪ್ರಿನ್ಸಿಪಾಲ್ ನಮಿತಾ ಅದನ್ನು ನಿರ್ಲಕ್ಷಿಸಿ ಆರ್ಟ್ಸ್ ಓದಲು ಬರುವವರನ್ನು ಕಾಲೇಜಿನೊಳಗೆ ಬಿಟ್ಟುಕೊಳ್ಳದೆ ಆರ್ಟ್ಸ್‌ನ ಕತ್ತು ಹಿಸುಕಿದ್ದಾರೆ.



ಪ್ರಿನ್ಸಿಪಾಲ್ ಎಂ.ಜಿ.ನಮಿತಾ


ಉಪಪ್ರಿನ್ಸಿಪಾಲ್ ಶ್ರೀಕಂಠೇಶ್ವರ್

ಅಲ್ಲೀಗ ಜಾಸ್ತಿ ಹಣ ತರುವ ಕಾಮರ್ಸ್, ಬಿಬಿಎಂ ಕೋರ್ಸ್‌ಗಳದ್ದೇ ಭರಾಟೆ. ಅದು ಹಾಳಾಗಲಿ, ಆದರೆ ಇದನ್ನಾದರೂ ನೆಟ್ಟಗೆ ನಡೆಸುತ್ತಿದ್ದಾರಾ ಎಂದು ನೋಡಿದರೆ ಅಲ್ಲೂ ಅದ್ವಾನವೇ ತುಂಬಿದೆ.

ಪ್ರಿನ್ಸಿಪಾಲ್ ನಮಿತಾ ಹಾಗೂ ವೈಸ್‌ಪ್ರಿನ್ಸಿಪಾಲ್ ಶ್ರೀಕಂಠೇಶ್ವರ ಅದೆಂತಾ ಭಂಡರೆಂದರೆ ಕಾಲೇಜಿನ ವಿದ್ಯಾರ್ಥಿನಿಯರಿಗೆ ಪಾಠ ಹೇಳಲು ಇತ್ತೀಚೆಗೆ ಇಬ್ಬರು ಲೆಕ್ಚರರ್‌ಗಳನ್ನು ನೇಮಿಸಿಕೊಂಡಿದ್ದಾರೆ.

ಚೈತ್ರಾ ಹಾಗೂ ಸುಚಿತ್ರಾ ಎಂಬ ಈ ಹೊಸ ಉಪನ್ಯಾಸಕಿಯರು ಇನ್ನೂ ಮಾಸ್ಟರ್ ಡಿಗ್ರಿ ಮುಗಿಸಿಯೇ ಇಲ್ಲ! ಕಾಲೇಜು ಲೆಕ್ಚರರ್ ಆಗಬೇಕೆಂದರೆ ಎಂ.ಎ., ಎಂ.ಕಾಂ., ಅಥವಾ ಎಂ.ಎಸ್ಸಿ., ಓದಿ ಪಾಸಾಗಿರಬೇಕೆಂಬ ನಿಯಮದ ಬಗ್ಗೆ ಎಂತಾ ದಡ್ಡರಿಗೂ ಗೊತ್ತಿರುತ್ತದೆ. ಇದು ನಮಿತಾ ಮತ್ತು ಶ್ರೀಕಂಠೇಶ್ವರ್‌ಗೂ ಗೊತ್ತಿಲ್ಲದೇ ಏನು ಇಲ್ಲ.


ಅರ್ಹತೆಯಿರದಿದ್ದರೂ ಲೆಕ್ಚರರ್‌ಗಳಾಗಿರುವ ಸುಚಿತ್ರ ಮತ್ತು ಚೈತ್ರ

ಅವರ ಉದ್ದೇಶ ಏನೆಂದರೆ ಮಾಸ್ಟರ್ ಡಿಗ್ರಿ ಪಾಸಾಗಿರದವರು ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ. ಅದರಿಂದ ಕಾಲೇಜಿನ ಲಾಭ ಜಾಸ್ತಿಯಾಗುತ್ತದೆಂಬ ದುರ್ಬುದ್ಧಿ.

ಸೂಕ್ತ ವಿದ್ಯಾರ್ಹತೆ ಇರದವರಿಂದ ಪಾಠ ಹೇಳಿಸಿದರೆ ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯ ಹಾಳಾಗುತ್ತದೆಂಬ ಪರಿಜ್ಞಾನವೂ ಈ ಅವಿವೇಕಿಗಳಿಗಿಲ್ಲ.

ಬೆಂಗಳೂರು ವಿವಿಯ ಹೊಸ ವಿಸಿ ಹಾಗೂ ರಿಜಿಸ್ಟ್ರಾರ್‌ರವರು ಈ ಬಗ್ಗೆ ತಕ್ಷಣ ಗಮನ ಹರಿಸಲಿ. ಪ್ರಿನ್ಸಿಪಾಲ್ ನಮಿತಾ ಅದೆಂತಾ ದಡ್ಡ ಹೆಂಗಸೆಂದರೆ ಒಂದು ಕಡೆ ಹೆಚ್.ಎಸ್. ಸುಚಿತ್ರ ಹಾಗೂ ಎನ್. ಚೈತ್ರಾ ಎಂಬುವರು ಎಂ.ಕಾಂ. ಓದಿ ಒಂದು ಕಡೆ ಮುಗಿಸಿಲ್ಲವೆಂದೂ, ಇನ್ನೊಂದು ಕಡೆ ಸರ್ಕಾರಿ ನಿಯಮಾನುಸಾರ ಮಾಸ್ಟರ್ ಡಿಗ್ರಿ ಮಾಡದವರನ್ನು ಲೆಕ್ಚರರ್ ಕೆಲಸಕ್ಕೆ ನೇಮಿಸಲಾಗದೆಂದೂ ತಾನೇ ದಾಖಲಿಸಿದ್ದಾರೆ.

ಈ ತಿಕ್ಕಲುತನಕ್ಕೆ ಏನನ್ನಬೇಕು. ಬೆಂಗಳೂರು ವಿವಿಯು ಪ್ರಿನ್ಸಿಪಾಲ್ ನಮಿತಾರ ವಿರುದ್ಧ ಕಾನೂನು ಉಲ್ಲಂಘನೆ ನಿಯಮಾನುಸಾರ ಶಿಸ್ತಿನ ಕ್ರಮ ವಹಿಸ ಬೇಕಿದೆ. ಜೊತೆಗೆ ಎಂ.ಕಾಂ ಮುಗಿಸಲು ಇನ್ನು ತಿಣುಕಾಡುತ್ತಿರುವ ಸುಚಿತ್ರ ಮತ್ತು ಚೈತ್ರ ಎಂಬ ಡೋಂಗಿ ಲೆಕ್ಚರರ್‌ಗಳ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕಿದೆ. ಕಾಲೇಜಿನ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಇದು ಮುಖ್ಯ.

ಕಾಮರ್ಸ್ ಲೆಕ್ಚರರ್‌ಗಳ ದಬ್ಬಾಳಿಕೆ

ಬೆಂಗಳೂರು ವಿವಿಯಲ್ಲಿ ರಿಪೇರಿಯಾಗಬೇಕಾದ ಎಮರ್ಜೆನ್ಸಿ ಕೇಸುಗಳ ಪೈಕಿ ಇದೂ ಒಂದಾಗಿದೆ. ಈ ವಿವಿ ವ್ಯಾಪ್ತಿಯ ಬಹುತೇಕ ಕಾಲೇಜುಗಳಲ್ಲಿ ಕಾಮರ್ಸ್ ಹಾಗೂ ಎಕನಾಮಿಕ್ಸ್ ಲೆಕ್ಚರರ್‌ಗಳ ನಡುವೆ ಕಳೆದ ಕೆಲ ವರ್ಷಗಳಿಂದ ಮುಸುಕಿನ ಗುದ್ದಾಟವೇ ನಡೆಯುತ್ತಿದೆ. ಎಂ.ಕಾಂ.ಮುಗಿಸಿರುವ ಕಾಮರ್ಸ್ ಲೆಕ್ಚರರ್‌ಗಳು ಕಾಮರ್ಸ್‌ಗೆ ಸಂಬಂಧಿಸಿದ ಎಕನಾಮಿಕ್ ಅನಾಲಿಸಿಸ್, ಸ್ಟ್ಯಾಟಿಸ್ಟಿಕ್ಸ್, ಅಕೌಂಟೆನ್ಸಿ ಮುಂತಾದ ಸಬ್ಜೆಕ್ಟ್‌ಗಳನ್ನು ಪಾಠ ಮಾಡುತ್ತಿರುವುದೇ ಅಲ್ಲದೇ ಆರ್ಟ್ಸ್ ವಿಭಾಗದ ಎಕನಾಮಿಕ್ಸ್ ಸಬ್ಜೆಕ್ಟ್‌ಗಳಲ್ಲೂ ಮೂಗು ತೂರಿಸುತ್ತ ಒತ್ತುವರಿ ಮಾಡಿಕೊಂಡು ಎಲ್ಲೆಡೆ ರೇಜಿಗೆ ಸೃಷ್ಟಿಸುತ್ತಿದ್ದಾರೆ. ಇದರಿಂದಾಗಿ ಎಂ.ಎ ಎಕನಾಮಿಕ್ಸ್‌ನ ಲೆಕ್ಚರರ್‌ಗಳು ಮೂಲೆಗುಂಪಾಗಿದ್ದಾರೆ. ಉನ್ನತ ಶಿಕ್ಷಣ ಇಲಾಖೆ ಹಾಗೂ ವಿವಿಯ ಆಡಳಿತ ಮುಂಡಳಿಯು ಈ ಗೊಂದಲ ನಿವಾರಿಸಲು ಏನೇನೂ ಕ್ರಮ ವಹಿಸದೆ ಎಲ್ಲೆಡೆ ಅರಾಜಕತೆ ತಾಂಡವವಾಡುತ್ತಿದೆ. ಕಾಮರ್ಸ್ ಲೆಕ್ಚರರ್‌ಗಳ ಲಾಬಿ ಯಾವ ಮಟ್ಟಕ್ಕೆ ಬೆಳೆದು ಬಂದುಹೋಗಿದೆಯೆಂದರೆ ಶುದ್ಧ ಎಕನಾಮಿಕ್ಸ್ ವಿಭಾಗಕ್ಕೆ ಸೇರುವ ಬ್ಯುಸಿನೆಸ್ ಎಕನಾಮಿಕ್ಸ್, ಬ್ಯುಸಿನೆಸ್ ಕಮ್ಯೂನಿಕೇಷನ್ ವಿಷಯಗಳಲ್ಲೂ ಎಂ.ಎ., ಎಕನಾಮಿಕ್ಸ್‌ನವರಿಗೆ ಬೋಧಿಸುವ ಅವಕಾಶ ಸಿಗದಂತೆ ಮಾಡುತ್ತಿದ್ದಾರೆ. ಇದನ್ನು ಈಗಲಾದರೂ ಸರಿಪಡಿಸದೇ ಹೋದರೆ ಮುಂದಿನ ದಿನಗಳಲ್ಲಿ ಈ ಲಾಬಿಯು ಗೈನಕಾಲಜಿ ಸಬ್ಜೆಕ್ಟನ್ನು ಬೇಕಿದ್ದರೆ ಬ್ಯುಸಿನೆಸ್ ಗೈನಕಾಲಜಿ ಎಂದು ಪುನರ್ ನಾಮಕರಣ ಮಾಡಿಕೊಂಡು 'ಅದನ್ನು ನಾವೇ ಪಾಠ ಮಾಡುತ್ತೇವೆ' ಎಂದರೂ ಆಶ್ಚರ್ಯಪಡಬೇಕಾಗಿಲ್ಲ ಎನ್ನುವಂತಾಗಿದೆ.

ನೂತನ ವಿಸಿ ರಂಗಸ್ವಾಮಿ ಹಾಗೂ ರಿಜಿಸ್ಟ್ರಾರ್ ಪ್ರೊ. ಮೈಲಾರಪ್ಪನವರಿಗೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ನಿಜಕ್ಕೂ ಈ ಮೊದಲಿದ್ದಂತೆ ಉತ್ತಮ ರೀತಿಯಲ್ಲಿ ಮುನ್ನಡೆಸಬೇಕೆಂಬ ಅಪೇಕ್ಷೆ ಇರುವುದೇ ಆದಲ್ಲಿ ಮೇಲೆ ಹೇಳಿರುವ ಅವ್ಯವಹಾರ, ಕಾನೂನು ಉಲ್ಲಂಘನೆ ಹಾಗೂ ಅರಾಜಕತೆಗಳನ್ನು ಮೊದಲು ಸರಿ ಮಾಡಿ ಉದ್ಧಟರ ವಿರುದ್ಧ ಕ್ರಮ ಕೈಗೊಳ್ಳಲಿ. ●


ತಿಳಿಸುವುದೇನೆಂದರೆ, ವಾಣಿಜ್ಯಶಾಸ್ತ್ರದ ಉಪನ್ಯಾಸಕರಾದ ಶ್ರೀಮತಿ ಚೈತ್ರ ಮತ್ತು ಶ್ರೀಮತಿ ಸುಚಿತ್ರ ಎಂಬುವವರು ಎಂ.ಕಾಂ. ಪದವಿಯ ಅಂತಿಮ ಸೆಮೆಸ್ಟರ್‌ನ ಪರೀಕ್ಷೆಗೆ ಹಾಜರಾಗಿದ್ದು ಪರೀಕ್ಷೆಯ ಫಲಿತಾಂಶದ ನಿರೀಕ್ಷೆಯಲ್ಲಿರುತ್ತಾರೆ ಎಂಬುದಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ತಮ್ಮ ವಿಶ್ವಾಸಿ

Namitha M.G
ಪ್ರಾಂಶುಪಾಲರು
ವಿ. ವಿ. ಎಸ್. ಪದವಿ ಕಾಲೇಜು
...ವಿಲಾಸ ರಸ್ತೆ,
...560004

ಎಂ.ಕಾಂ ಮುಗಿಸದಿರುವವರನ್ನೇ ಲೆಕ್ಚರರ್‌ಗಳಾಗಿ ನೇಮಿಸಿಕೊಂಡಿರುವ ಬಗ್ಗೆ ಪ್ರಿನ್ಸಿಪಾಲ್ ನಮಿತಾರ ತಪ್ಪೊಪ್ಪಿಗೆ ಪತ್ರ


ಸಾಯಿ ಬಾಬಾನ ಸಂಶಯದ ಉಯಿಲು



● ಗಿರೀಶ್ ತಾಳಿಕಟ್ಟೆ

"ನಿರೀಕ್ಷಿಸಿದ್ದಂತೆ ಸಾಯಿಬಾಬಾನ ವಿಲ್ ಒಂದು ಈಗ ಪ್ರತ್ಯಕ್ಷವಾಗಿದೆ. ಸತ್ಯನಾರಾಯಣ ರಾಜು ಅರ್ಥಾತ್ ಸತ್ಯ ಸಾಯಿಬಾಬಾನ ಈ 44 ವರ್ಷಗಳಷ್ಟು ಹಳೆಯ ಉಯಿಲು ಭಾರೀ ಗೊಂದಲವನ್ನೇ ಸೃಷ್ಟಿಸುತ್ತಿದೆ. ಯಾಕೆಂದರೆ ಬಾಬಾ ಬಿಟ್ಟು ಹೋಗಿರುವುದು ಬರೋಬ್ಬರಿ 1.54 ಲಕ್ಷ ಕೋಟಿ ರೂಪಾಯಿ ಬೆಲೆಯ ಬೃಹತ್ ಸಾಮ್ರಾಜ್ಯವನ್ನು. ಅಷ್ಟೂ ಆಸ್ತಿಗೆ ವಾರಸುದಾರ ಯಾರಾಗಬೇಕೆನ್ನುವ ಯುದ್ಧವಿನ್ನೂ ಬಾಬಾನ ಕುಟುಂಬ, ಸಾಯಿ ಟ್ರಸ್ಟ್‌ನವರ ನಡುವೆ ಚಾರಿಯಲ್ಲಿರುವಾಗಲೇ ಸಾಯಿಯ ಪರಮಶಿಷ್ಯ ಸತ್ಯಜಿತ್ ಉಯಿಲನ್ನು ತೇಲಿಬಿಟ್ಟಿರುವುದು ಕುತೂಹಲ ತರಿಸುತ್ತದೆ. ಇಷ್ಟಕ್ಕೂ ಸತ್ಯಸಾಯಿ ಆಧ್ಯಾತ್ಮಿಕತೆಯನ್ನು ಬಳರಿಗಿಟ್ಟು 'ವಿಭೂತಿ ಜಾದೂ'ವಿನಿಂದ ಕೂಡಿಟ್ಟ ಅಕ್ರಮ ಸಂಪತ್ತದು. ಟ್ರಸ್ಟ್ ಎಂಬ ಒಂದೇ ಕಾರಣಕ್ಕೆ ಟ್ಯಾಕ್ಸ್ ಕಟ್ಟುವಂತಿರಲಿಲ್ಲ, ಸರ್ಕಾರಕ್ಕೆ ಅಕೌಂಟ್ ತೋರಿಸುವಂತಿರಲಿಲ್ಲ. ಹಾಗಾಗಿ ರಾಜಕಾರಣಿಗಳ, ಬೃಹತ್ ಕೈಗಾರಿಕೋದ್ಯಮಿಗಳ, ಮಹಾನ್ ಚಿತ್ರನಟರುಗಳ ಬ್ಲ್ಯಾಕ್‌ಮನಿ ಅಲ್ಲಿ ಭಾರೀ ಚಲಾವಣೆ ಕಾಣುತ್ತಿತ್ತು, ಅದರ ಪರಿಣಾಮವಾಗೇ ಮ್ಯಾಜಿಕ್ ಬಾಬಾ ಸಖತ್ ಆಸ್ತಿ ಮಾಡಿಟ್ಟಿದ್ದ. ಆತನ ನಂತರ ಆ ಕಳ್ಳಗಂಟನ್ನು ತಿಂದು ಮುಕ್ಕಲು ಈಗ ಹೊಸ ತಲೆಮಾರಿನವರ ರೇಸು ಶುರುವಾಗಿದೆ. ಅದೇನೇ ಇರಲಿ, ಧುತ್ತನೇ ಜೀವ ತಳೆದಿರುವ ಉಯಿಲಿನ ಹಿಂದೆ 'ಭರ್ಜರಿ ಬೇಟೆ'ಯ ಮಸಲತ್ತಿರುವುದಂತೂ ಸತ್ಯ.

ಇಂದೂಲಾಲ್ ಷಾ ಎನ್ನುವ ಸಾಕ್ಷಿಯ ಸಮ್ಮುಖದಲ್ಲಿ 26 ಮಾರ್ಚ್ 1967ರಂದು ಬಾಬಾ ಸಹಿ ಮಾಡಿದ ವಿಲ್ (ಉಯಿಲು) ಅದು. ಬಾಂಬೆ ಹೈಕೋರ್ಟ್‌ನ ಮೂರು ರೂಪಾಯಿ ಐವತ್ತು ಪೈಸೆ ಛಾಪಾ ಕಾಗದದ ಮೇಲೆ ಅಡ್ವೊಕೇಟ್ ಟಿ.ಜೆ ಶುಕ್ಲಾ ಉಯಿಲನ್ನು ತಯಾರಿಸಿದ್ದಾರೆ.I am making so that nobody can claim under or through me in the family properties if , any ಹೀಗೆ ಆರಂಭವಾಗುವ ಉಯಿಲಿನಲ್ಲಿ 'ನಾನೊಬ್ಬ ಅವಿವಾಹಿತನಾಗಿದ್ದು 12ನೇ ವಯಸ್ಸಿಗೇ ಮನೆ ಬಿಟ್ಟು ಸನಾತನ ಧರ್ಮದ ಪ್ರಚಾರಕ್ಕೆ ನಿಂತಿದ್ದೇನೆ. ಕುಟುಂಬಕ್ಕೆ ಸೇರಿದ ಚರಾಸ್ತಿ ಸ್ಥಿರಾಸ್ತಿಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದು, ಭಕ್ತಾದಿಗಳಿಂದ ನನಗೆ ನೀಡಲ್ಪಟ್ಟ ಯಾವುದನ್ನೇ ಆಗಲಿ ಟ್ರಸ್ಟ್‌ನ ಮೂಲಕ ಧರ್ಮಾರ್ಥ ಕೆಲಸಗಳಿಗೆ ವಿನಿಯೋಗವಾಗಬೇಕು'


MAHARASHTRA
-6 JUL 1965

ಎಂಬುದು ಸ್ಪಷ್ಟವಾಗಿ ನಮೂದಾಗಿದೆ. ಕೊನೆಯಲ್ಲಿರುವ I am making so that nobody can claim under or through me in the family properties if , any ಎನ್ನುವ ವಾಕ್ಯಗಳಂತು ಸಾಯಿ ಕುಟುಂಬದವರಿಗೆ ಕೋಟ್ಯಂತರ ಆಸ್ತಿಯಲ್ಲಿ ಕಿಂಚಿತ್ತೂ ಅಧಿಕಾರವಿಲ್ಲ ಎಂಬುದನ್ನು ಸಾಕ್ಷೀಕರಿಸುತ್ತಿವೆ.

ಸಾಯಿಯ ತಮ್ಮನ ಮಗ ಆರ್.ಜೆ. ರತ್ನಾಕರ್ ಮತ್ತು ಸತ್ಯಸಾಯಿ ಕೇಂದ್ರ ಟ್ರಸ್ಟ್ ಸದಸ್ಯರ ನಡುವಿನ ನೇರಾನೇರ ಕಾಳಗ ಇದು. ಕಳೆದ ವರ್ಷ ಏಪ್ರಿಲ್‌ನಲ್ಲಿ ಸಾಯಿಬಾಬಾ ಸತ್ತ ಮರು ಘಳಿಗೆಯಿಂದಲೇ ಕಾಳಗ ಶುರುವಾಗಿತ್ತು, ಅಂತ್ಯಸಂಸ್ಕಾರದಲ್ಲೇ ಅದು ಸ್ಫೋಟಿಸಬೇಕಿತ್ತಾದರೂ ಹಿರಿಯ ರಾಜಕಾರಣಿಗಳ ಮಧ್ಯಸ್ಥಿಕೆಯಿಂದ ತಣ್ಣಗಾಗಿತ್ತು, ಆದರೆ ಕ್ರಿಯಾವಿಧಿಗಳೆಲ್ಲ ಮುಗಿದು ಒಂದೂವರೆ ತಿಂಗಳ ನಂತರ ಬಾಬಾನ ಖಾಸಗಿ ಬಂಗಲೆ 'ಯಜುರ್ ಮಂದಿರ'ವನ್ನು ತೆರೆದು ಲೋಡುಗಟ್ಟಲೆ (ವಿವರವನ್ನು ಬಾಕ್ಸ್‌ನಲ್ಲಿ ನೀಡಲಾಗಿದೆ) ಗುಪ್ತನಿಧಿ ಹೊರಗೆಳೆಯುತ್ತಿದ್ದಂತೆ ಸಮರ ಮತ್ತಷ್ಟೂ ತಾರಕಕ್ಕೇರಿತ್ತು. ಈ ನಡುವೆ ಸಾಯಿ ಬಾಬಾನ ಕೊನೆಯ ದಿನಗಳಲ್ಲಿ ಆತನ ಆತ್ಮೀಯತೆ ಗಿಟ್ಟಿಸಿಕೊಂಡು ನೆರಳಿನಂತೆ ಹಿಂಬಾಲಿಸಿ ನೋಡಿಕೊಂಡಿದ್ದ ಸತ್ಯಜಿತ್ ಕೂಡಾ ಉತ್ತರಾಧಿಕಾರತ್ವದ ಪೈಪೋಟಿಗೆ ನಿಂತದ್ದು ರತ್ನಾಕರನಿಗೆ ವಿಪರೀತ ಸಿಟ್ಟು ತರಿಸಿತ್ತು, ರತ್ನಾಕರ್ ಕೂಡಾ ಟ್ರಸ್ಟ್‌ನ ಸದಸ್ಯನಾದ್ದರಿಂದ ಟ್ರಸ್ಟ್‌ನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿ ಆ ಮೂಲಕವಾದರೂ ಆಸ್ತಿಯನ್ನು ಕಬಳಿಸಬೇಕೆನ್ನುವ ಹುನ್ನಾರ ನಡೆಸಿದ್ದ. ನಿವೃತ್ತ ಐಎಎಸ್ ಆಫೀಸರ್‌ಗಳು, ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು, ಬ್ಯಾಂಕ್‌ಗಳ ಉನ್ನತಾಧಿಕಾರಿಗಳು, ಬಿಗ್ ಇಂಡಸ್ಟ್ರಿಯಲಿಸ್ಟ್‌ಗಳೇ ತುಂಬಿರುವ ಟ್ರಸ್ಟಾದ... ನಿರಾಯಾಸವಾಗಿ ರತ್ನಾಕರನಿಗೆ ಗಂಟು ಬಿಟ್ಟುಕೊಡ... ತಯಾರಿರಲಿಲ್ಲ, ಕೊಂಚ ರಫ್ ಸ್ವಭಾವದ, ಸತ್ಯಸಾ... ಇದ್ದಾಗಲೇ ಮರ್ಡರ್‌ನಂತಹ ಕ್ರೈಮ್‌ಗಳಲ್ಲಿ ಫಿಟ್ ಆಗಿ... ರತ್ನಾಕರ್‌ನನ್ನು ನೇರವಾಗಿ ಎದುರುಹಾಕಿಕೊಳ್ಳದ ಟ್ರಸ್ಟ್‌ನವ... ಉಪಾಯವಾಗಿ ಅಡ್ಡಗಾಲು ಹಾಕುತ್ತಲೇ ಬಂದಿದ್ದ... ಇದರ ಭಾಗವಾಗಿ ಕಾನೂನು ಸಮರವೂ ನಡೆಯುತ್ತಿ...

ಇದೇ ಸಮಯದಲ್ಲಿ ಸತ್ಯಜಿತ್‌ನ 'ಉಯಿಲು ಪ್ರಸ... ಸ್ಫೋಟಿಸಿರುವುದು ಹಲವು ಹತ್ತು ಅನುಮಾನಗ... ಎಡೆಮಾಡಿಕೊಡುತ್ತಿದೆ. ಸತ್ಯಜಿತ್ ಹೇಳುವಂತೆ ...


ರತ್ನಾಕರ್


ಸತ್ಯಜಿತ್

...ವರ್ಷಗಳ ಹಿಂದೆ ಖುದ್ದು ಸಾಯಿಬಾಬಾನೇ ಅದ... ಈತನಿಗೆ ನೀಡಿದ್ದನಂತೆ. ಇಷ್ಟು ದಿ... ಜೋಪಾನವಾಗಿರಿಸಿಕೊಂಡು ಸಾಯಿಬಾಬಾ ಸತ್ತ ಒಂದೂ... ವರ್ಷದ ನಂತರ ಹೊರಜಗತ್ತಿಗೆ, ಅದೂ ಒಡೆತನ... ಜಗ್ಗಾಟ ಜೋರಾದ ಸಮಯದಲ್ಲೆ ಹಾಜರುಪಡಿಸುತ್ತಿರುವು... ಅನುಮಾನಾಸ್ಪದ ಎನ್ನುವಂತಿದೆ. ಅಲ್ಲದೆ ವಿಲ್ ಮಾಡಿಸಿ... ಸಾಯಿಬಾಬಾನೇ ಎಂಬುದನ್ನು ಖಾತ್ರಿಪಡಿಸಲು ಅಡ್ವೊಕೇ... ಅಂತೂ ಬದುಕುಳಿದಿಲ್ಲ, ಜೀವಂತವಾಗಿರುವು... ಮುಪ್ಪಿನಲ್ಲಿರುವ ಅವತ್ತು ಸಾಕ್ಷೀದಾರನಾಗಿದ್ದ ಇಂದೂಲಾ... ಮಾತ್ರ. ಆತ ಇದು ತನ್ನೆದುರಿಗೆ ಸಾಯಿಬಾಬಾನೇ ಸ... ಮಾಡಿದ ವಿಲ್ ಎಂದು ಒಪ್ಪಿಕೊಳ್ಳುತ್ತಾನಾದರ... ಇಂದೂಲಾಲ್ ಕೂಡ ಟ್ರಸ್ಟ್‌ನ ಸದಸ್ಯ ಎಂಬು... ಮೊದಲನೇ ತೊಡಕು. ಇದರ ಹೊರತಾಗಿ ಸತ್ಯ ಸಾ... ಬರೆಸಿದ್ದೆನ್ನಲಾಗಿರುವ ಉಯಿಲನ್ನೊಮ್ಮೆ ಸೂಕ್ಷ್ಮವಾ... ಗಮನಿಸಿದರೆ ಪ್ರಪಂಚದ ಅದ್ಭುತಗಳಂತೆ ಏ... ಅನುಮಾನಗಳು ಕಾಡಲಾರಂಭಿಸುತ್ತವೆ.

ಮೊದಲನೆಯದು, ಸತ್ಯಜಿತ್ ಹಾಜರುಪಡಿಸಿರು... ವಿಲ್‌ಗೆ ಸತ್ಯಸಾಯಿಬಾಬಾ 1967ರಲ್ಲೇ ಸಹಿ ಮಾಡಿ... ಅದರಲ್ಲಂತೂ ಅನುಮಾನವಿಲ್ಲ, ಆದರನ್ವಯ ಸಮ... ಆಸ್ತಿಯೂ ಟ್ರಸ್ಟ್‌ಗೇ ಸೇರಬೇಕು, ಇದನ್ನೂ ಅನುಮಾ... ಸಲಿಕ್ಕಾಗದು. ಆದರೆ ವಿಸ್ಮಯದ ಸಂಗತಿ ಅಂತೆಂದ... ಸ್ವತಃ ಬಾಬಾನೇ ಸತ್ಯ ಸಾಯಿ ಚಾರಿಟಬಲ್ ಸೆಂಟ್ರ... ಟ್ರಸ್ಟ್ ಅನ್ನು ಹುಟ್ಟುಹಾಕಿದ್ದು 1972 ರಲ್ಲಿ! ಅಸ್ತಿತ್ವ... ಇಲ್ಲದ ಟ್ರಸ್ಟ್‌ಗೆ ಆಸ್ತಿಯ ಉಸಾಬರಿಯನ್ನು ಬರೆಯುವ... ಮನೋವಿಕಲತೆ ಸತ್ಯಸಾಯಿಗೆ ಕಾಡಿತ್ತೇ?

ಎರಡನೆಯದು, ಸತ್ಯಜಿತ್‌ನಿಗೆ 1998ರಲ್ಲೇ ಇ... ಸಿಕ್ಕಿತ್ತು ಅಂತಾದರೆ, ಇಂದೂಲಾಲ್ ಷಾಗೆ 44 ವರ್ಷಗ... ಹಿಂದೆಯೇ ಇದಕ್ಕೆ ಸಾಕ್ಷಿಯಾದದ್ದು ಸ್ಪಷ್ಟವಾಗಿ ನೆನಪಿತ್ತಾದ... ಸಾಯಿಬಾಬಾ, ಸತ್ತ ಕೂಡಲೇ ಒಡೆತನದ ವಿವಾ... ಭುಗಿಲೆದ್ದಿದ್ದರೂ ವಿಲ್‌ನ ಕಿಂಚಿತ್ತೂ ಕ್ಲೂ ಕೊಡದೆ ಈ... ಒಂದೂವರೆ ವರ್ಷದ ನಂತರ ಹಠಾತ್ತಾಗಿ ಬಹಿರ... ಗೊಳಿಸಿದ್ದೇಕೆ?

ಮೂರನೆಯದು, ಸಾಮಾನ್ಯವಾಗಿ ವಿಲ್‌ಗಳನ... ಕುಟುಂಬದ ಇಲ್ಲವೇ ಟ್ರಸ್ಟ್‌ನ ಲಾಯರ್‌ಗಳ ಮೂಲ... ಬಹಿರಂಗಪಡಿಸಲಾಗುತ್ತದೆ. ಕುಟುಂಬ ಮತ್ತು ಟ್ರಸ್ಟ್... ನಡುವೆ ವಿವಾದ ಭುಗಿಲೆದ್ದು ಸರ್ಕಾರ ಮುಟ್ಟುಗೋಲ... ಹಾಕಿಕೊಳ್ಳುವ ವಿಚಾರ ಬಂದರೂ ಟ್ರಸ್ಟ್‌ನ ಲಾಯ... ಏಕೆ ಇದನ್ನು ಬಹಿರಂಗಪಡಿಸಲಿಲ್ಲ, ವಿಷಯವಿನ... ಪರಾಮರ್ಶೆ ಯಲ್ಲಿರುವಾಗಲೆ, ಬಹುಮುಖ್ಯ ದಾಖಲೆಯಾ... ಇದನ್ನು ಸ್ಕ್ಯಾನ್ ಮಾಡಿಸಿ ಮಾಧ್ಯಮಗಳಿಗೆ ಮೇಲ್ ಮಾ... ಬಹಿರಂಗಪಡಿಸಿದ್ದೇಕೆ?

ಗೋಲ್ಡನ್ ಟಾಯ್ಲೆಟ್

ಅದು ಸಾಯಿ ಸಾಮ್ರಾಜ್ಯ

ಉದ್ದಕ್ಕೂ ನಿಗೂಢವಾಗೇ ಬದುಕಿದ್ದ ಸಾಯಿಬಾಬಾ ಸತ್ತ ನಂತರ ಅನಾವರಣಗೊಂಡದ್ದೇ 1,54,000 ಕೋಟಿಯ ಭಯಂಕರ ಸಂಪತ್ತು, ಭಾರತ ಮಾತ್ರವಲ್ಲದೆ 186 ದೇಶಗಳಲ್ಲಿ 1,200 ಸಂಘಟನೆಗಳ ಮುಖಾಂತರ 30 ರಿಂದ 40 ಮಿಲಿಯನ್ ಅನುಯಾಯಿಗಳಿಂದ ಸಂಗ್ರಹಿಸಿದ ಕಾಣಿಕೆ ಮತ್ತು ಉಳ್ಳವರ ಬ್ಲ್ಯಾಕ್‌ಮನಿಯ ಫಲ ಅದಾಗಿತ್ತು, ಸಾಯಿಬಾಬಾಗೆ ಪುಟ್ಟಪರ್ತಿ ಅಸುಪಾಸಿನಲ್ಲೆ 4000 ಕೋಟಿಗೂ ಮಿಗಿಲಾದ ಸ್ಥಿರಾಸ್ತಿಗಳಿದ್ದವು. ಆತನ ಸಮಗ್ರ ಸಾಮ್ರಾಜ್ಯದಲ್ಲಿ ಪ್ರತ್ಯಕ್ಷವಾಗಿ ಕಾಣುವಂತೆ ಸತ್ಯಸಾಯಿ ಯುನಿವರ್ಸಿಟಿ ಕಾಂಪ್ಲೆಕ್ಸ್, ಚೈತನ್ಯ ಜ್ಯೋತಿ ಮ್ಯೂಸಿಯಂ, ಪ್ಲಾನೆಟೋರಿಯಮ್, 30 ಕೋಟಿ ರೂಪಾಯಿ ಮೌಲ್ಯದ, ಒಳಾಂಗಣ ಕ್ರೀಡಾಂಗಣ, ಹಿಲ್ ವ್ಯೂ ಸ್ಟೇಡಿಯಮ್, ಮ್ಯೂಸಿಕ್ ಕಾಲೇಜ್, 300 ಕೋಟಿಯ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್, ಪ್ರಶಾಂತಿ ನಿಲಯಂ, ಖಾಸಗಿ ಏರ್‌ಪೋರ್ಟ್, 2500 ಕೋಟಿಯ ಕುಡಿಯುವ ನೀರಿನ ಯೋಜನೆ, ಬೆಂಗಳೂರಿನ



ವೈಟ್‌ಫೀಲ್ಡ್‌ನಲ್ಲಿರುವ 800 ಕೋಟಿಯ ಸುಸಜ್ಜಿತ ಆಸ್ಪತ್ರೆಗಳಲ್ಲದೆ ಸಾಯಿಯ ಐಷಾರಾಮಿ ತೆವಲುಗಳೂ ಸೇರಿವೆ. ಆತ ಸತ್ತ ಒಂದೂವರೆ ತಿಂಗಳ ನಂತರ ಸರ್ಕಾರಿ ಅಧಿಕಾರಿಗಳು ಮತ್ತು ಟ್ರಸ್ಟ್, ಕುಟುಂಬ ಸದಸ್ಯರ ಸಮ್ಮುಖದಲ್ಲಿ ತೆರೆಯಲಾದ ಸಾಯಿ ಖಾಸಗಿ ಬಂಗಲೆ ಯಜುರ್‌ಮಂದಿರದ ಗುಪ್ತನಿಧಿಯೇ ಸಾಕು ಅವನ ಆಸ್ತಿ ಅಂದಾಜಿಸಲು.

ಪುಟ್ಟಪರ್ತಿಯ ಪ್ರಶಾಂತಿ ನಿಲಯಮ್‌ಗೆ ಹೊಂದಿಕೊಂಡೇ ಇದ್ದ ಈ ಯಜುರ್ ಮಂದಿರಕ್ಕೆ ಸಾಯಿ ಮತ್ತವನ ಪರಮಶಿಷ್ಯ ಸತ್ಯಜಿತ್ ಅಲ್ಲದೆ ಸ್ವತಃ ಟ್ರಸ್ಟ್ ಸದಸ್ಯರಿಗೇ ಪ್ರವೇಶವಿರಲಿಲ್ಲ, ಎರಡಂತಸ್ತಿನ ಆ ಬಂಗಲೆಯಲ್ಲಿ ಅವನ ತಮ್ಮನ ಮಗ ರತ್ನಾಕರನಿಗೆ ಪ್ರವೇಶಾನುಮತಿ ಇದ್ದದ್ದು ಕೇವಲ ತಳಮಹಡಿವರೆಗೆ ಮಾತ್ರ. ಇನ್ನುಳಿದಂತೆ ಅವನ ದುಬಾರಿ ಭಕ್ತಾದಿಗಳು, ಆತ್ಮೀಯ ರಾಜಕಾರಣಿಗಳು ವ್ಯವಹಾರ ಕುದುರಿಸಲು ಆ ಖಾಸಗಿ ಮಂದಿರವನ್ನು ಪ್ರವೇಶಿಸಬಹುದಿತ್ತು, ಅದೂ ತಳಮಹಡಿಗೆ ಮಾತ್ರವೇ ಸೀಮಿತ. ಸರ್ವಸಂಗ ಪರಿತ್ಯಾಗಿಯ ಈ ಖಾಸಗಿತನ ಮತ್ತು ಸೂಪರ್ ಸೆಕ್ಯುರಿಟಿಯ ಬಂಡವಾಳ ಬಯಲಾದದ್ದು ಆತ ಸತ್ತ ನಂತರವೆ.

16 ಜೂನ್ 2011 ರಂದು ತಪಾಸಣೆಗೆಂದು ಮಂದಿರ ಪ್ರವೇಶಿಸಿದವರನ್ನು ಸ್ವಾಗತಿಸಿದ್ದು ರಾಶಿರಾಶಿ ಹಣ, ಕೆ.ಜಿ. ಗಟ್ಟಲೆ ಚಿನ್ನ, ಬೆಳ್ಳಿ, ವಜ್ರ, ಹವಳ, ತರಹೇವಾರಿ ಸೆಂಟು, ಹೇರ್ ಸ್ಪ್ರೇ, ಐಷಾರಾಮಿ ಶೂಗಳು. ಅಲ್ಲಿ ಭಾರತದ ರೂಪಾಯಿ ಮಾತ್ರವಲ್ಲದೆ ವಿವಿಧ ದೇಶಗಳ ಕರೆನ್ಸಿಗಳೂ ಗುಡ್ಡೆ ಬಿದ್ದಿದ್ದವು. ಸಾಯಿಯ ಈ ಐಷಾರಾಮಿ ಕಂಡು ಖುದ್ದು ಟ್ರಸ್ಟ್ ಸದಸ್ಯರೇ ದಿಗ್ಭ್ರಾಂತರಾಗಿದ್ದರು. ಎಸ್.ಬಿ.ಐ ನ ಹಣ ಎಣಿಸುವ ಮೂರು ಮಷಿನ್ ಬಳಸಿ ಸತತ 36 ಗಂಟೆಗಳ ಕಾಲ ಎಣಿಸಿದವರಿಗೆ ಅಲ್ಲಿ ಸಿಕ್ಕದ್ದು ಬರೋಬ್ಬರಿ 11,56,47,049 ರೂಪಾಯಿ!

ಇಷ್ಟೇ ಅಲ್ಲ, 98 ಕೆ.ಜಿ ಚಿನ್ನ, 307 ಕೆ.ಜಿ ಬೆಳ್ಳಿ, ಲೆಕ್ಕವಿಲ್ಲದಷ್ಟು ವಜ್ರ, ಹವಳುಗಳು ಸಹ ಜಪ್ತಿಯಾಗಿದ್ದವು. ಅಂದಹಾಗೆ ಸಾಯಿ ಮಲಗಲು ಬಳಸುತ್ತಿದ್ದುದ್ದೇ ಚಿನ್ನದ ಪ್ಲೇಟಿಂಗ್ ಉಳ್ಳ ಬೆಳ್ಳಿಯ ಮಂಚವನ್ನು. ಒಂದು ಕಪಾಟಿನ ತುಂಬಾ ವಿದೇಶಿ ಸೆಂಟುಗಳು, ವಿಚಿತ್ರ ದುಬಾರಿ ಶೂಗಳೇ ತುಂಬಿದ್ದವಂತೆ. ದೇವಮಾನವನಿಗೆ ಸೆಂಟಿನ ಗಮ್ಮತ್ತಾದರೂ ಏಕೆ ಬೇಕಿತ್ತೊ.

ಅದೇ ದಿವಸ ಇತ್ತ ಬೆಂಗಳೂರಿನ ವೈಟ್‌ಫೀಲ್ಡ್ ಆಶ್ರಮದಲ್ಲಿದ್ದ ಸಾಯಿಯ ಮತ್ತೊಂದು ಖಾಸಗಿ ಬಂಗಲೆಯನ್ನೂ ತೆರೆಯಲಾಗಿತ್ತು, ಯಥಾಪ್ರಕಾರ ಇಲ್ಲೂ ಸಹ ರಾಶಿ ಹಣ, ಚಿನ್ನ, ಬೆಳ್ಳಿ, ವಜ್ರಗಳು ಬಯಲಿಗೆ ಬಂದಿದ್ದವು. ಆದರೆ ತಪಾಸಣೆ ಮಾಡಲು ಬಾತ್‌ರೂಮ್ ಬಾಗಿಲು ತೆರೆದವರಿಗೆ ಅಲ್ಲೊಂದು ಶಾಕ್ ಕಾದಿತ್ತು, ಸಾಯಿಬಾಬಾ ತನ್ನ ಟಾಯ್ಲೆಟ್ ಕಮೋಡನ್ನೂ ಚಿನ್ನದಿಂದಲೇ ಮಾಡಿಸಿಕೊಂಡಿದ್ದ. ಇದು ಸಾಯಿ ಐಷಾರಾಮಿಯ ಒಂದು ಸ್ಯಾಂಪಲ್ ಅಷ್ಟೆ.

ಆತನ ಆತ್ಮೀಯರು ಹೇಳುವಂತೆ ಸಾಯಿಬಾಬಾಗೆ ಬಂಗಾರದ ರೋಗ ನಿವಾರಕ ಗುಣಕಾರಿ ಶಕ್ತಿ ಬಗ್ಗೆ ಅಪಾರ ನಂಬಿಕೆಯಿತ್ತಂತೆ. ಅದಕ್ಕಾಗೆ ತನ್ನ ಸುತ್ತಮುತ್ತ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಬಂಗಾರವನ್ನು ಬಳಸುತ್ತಿದ್ದ ಎನ್ನುತ್ತಾರೆ. ಬಂಗಾರದ ವ್ಯಾಮೋಹಕ್ಕೆ ಒಳಗಾಗಿದ್ದ ಸಾಯಿ ತನ್ನ ಶ್ರೀಮಂತ ಭಕ್ತರಿಂದ ಬಂಗಾರದ ಕಾಣಿಕೆಗಳನ್ನೇ ಬೇಡುತ್ತಿದ್ದ ಎಂಬುದೂ ಬಹಿರಂಗವಾಗಿದೆ. ಅಷ್ಟಲ್ಲದೆ ಇವನ ಶಿಫಾರಸ್ಸಿನ ಮೇಲೆಯೇ 'ಚವನ್‌ಪ್ರಶ್' ಆಯುರ್ವೇದಿಕ್ ಸಂಸ್ಥೆಯವರು ತಮ್ಮ ಉತ್ಪನ್ನಕ್ಕೆ 'ಸೋನಾ ಚಾಂದಿ ಚವನ್ ಪ್ರಶ್' ಎಂಬುದಾಗಿ ಮರುನಾಮಕರಣ ಮಾಡಿದ್ದು, ಅಂದಹಾಗೆ ಆತನ ಕಡೆಯ ದಿನಗಳಲ್ಲಿ ಮಲಬದ್ಧತೆ ಆಗಿಂದಾಗ್ಗೆ ಕಾಡುತ್ತಿತ್ತಾದ್ದರಿಂದ ಟಾಯ್ಲೆಟ್ ಕಮೋಡನ್ನೂ ಬಂಗಾರದಿಂದಲೇ ಮಾಡಿಸಿಕೊಂಡಿದ್ದನಂತೆ.

ಅದೆಲ್ಲಾ ಸರಿ, ಆದರೆ ಜನರ ರೋಗರುಜಿನಗಳನ್ನು ಹುಡಿ ವಿಭೂತಿಯಲ್ಲಿ ವಾಸಿ ಮಾಡಿಬಿಡುತ್ತಿದ್ದ ಸಾಯಿಯ ಆರೋಗ್ಯ ಕಾಪಾಡಲು ದುಬಾರಿ ಚಿನ್ನದ ಕಮೋಡೇ ಬೇಕಿತ್ತಾ?


...ಪನಿಕಿ ವಸ್ತುಂದಿ: ...ಲ್ ಹಿಂದಿನ ಕಥೆ

... 1998ನೇ ಇಸವಿ. ಸಾಯಿಬಾಬಾ ತನ್ನ ... ಫೈಲುಗಳನ್ನೆಲ್ಲ ಶಿಷ್ಯರಿಂದ ಬೇರೊಂದು ಜಾಗಕ್ಕೆ ...ಸುತ್ತಿರುವಾಗ ಆಚಾನಕ್ಕಾಗಿ ಯಾವುದೋ ಫೈಲ್ ...ಸಿಕೊಂಡಿದ್ದ ಈ ಉಯಿಲು ಸತ್ಯಜಿತನಿಗೆ ಸಿಕ್ಕಿತ್ತಂತೆ. ... ಸಾಯಿಗೆ ತೋರಿಸಿದಾಗ ಓದುವಂತೆ ಸತ್ಯಜಿತನಿಗೇ ...ತೆ. ಓದಿದ ಸತ್ಯಜಿತ ಅದನ್ನು ಕಚೇರಿಯಲ್ಲಿಡಲೇ ...ನ್ನ ಭಗವಾನ್ ಸಾಯಿಯನ್ನು ಕೇಳಿದಾಗ 'ಆಫೀಸ್ ...ತ ವದ್ದು ಭದ್ರಂಗಾ ಪೆಟ್ಟುಕೋ, ಪನಿಕಿ ವಸ್ತುಂದಿ' ...ಲ್ಲಿ ಇಡಬೇಡ, ಭದ್ರವಾಗಿ ಇಟ್ಟುಕೋ, ತುಂಬಾ ...ಯೋಗಕ್ಕೆ ಬರುತ್ತದೆ) ಎಂಬುದಾಗಿ ಅಪ್ಪಣೆ ...ದ್ದನಂತೆ.

... ಉಯಿಲಿನ ಕುರಿತು ಸತ್ಯಜಿತ್ ಹೇಳುತ್ತಿರುವ ...ದಹಾಗೆ, ಇಷ್ಟು ಅಮೂಲ್ಯವಾದ ದಾಖಲೆಪತ್ರವನ್ನು ... ತನಗೇ ಗೊತ್ತಿಲ್ಲದಂತೆ ಯಾವುದೋ ಫೈಲ್‌ನಲ್ಲಿ ...ಹೋಗವಷ್ಟು ನಿರ್ಲಕ್ಷ್ಯ ವಹಿಸಿದ್ದನೆಂಬುದನ್ನು ...ಗುತ್ತದೆಯೇ?



...ನೆಯದು, ಸಾಯಿಬಾಬಾನೇ ...ಮಾಡಿಸಿದ್ದ ಎಂದಮೇಲೆ ಅದನ್ನೇಕೆ ... ಕೊನೆಗಳಿಗೆ ಯಲ್ಲೂ ...ಗಪಡಿಸಲಿಲ್ಲ? ಅಲ್ಲದೆ ...ವಾಗಿ ವಿಲ್‌ನಲ್ಲಿ ಇರುವಂತೆ ಕನಿಷ್ಠ ...ಒಂದು ನಿರ್ದಿಷ್ಟ ಆಸ್ತಿಯ ಬಗ್ಗೆ ...ದೆ whatever (ಯಾವುದೇ ... whenever (ಯಾವಾಗಲೇ ...ಎಂಬಂತಹ ಅಸ್ಪಷ್ಟ ನಿಷ್ಕರ್ಷಗಳೂ ...ನ ಮೂಡಿಸುತ್ತವೆ.



ಇಂದುಲಾಲ್ ಷಾ

...ನೆಯದು, ಉಯಿಲಿನಲ್ಲಿ ಹೇಳಿರು ವಂತೆ ...ಬಾಬಾ ಮನೆ, ಹೆತ್ತವರು ಎಲ್ಲರನ್ನೂ ಬಿಟ್ಟು ಸನ್ಯಾಸತ್ವ ... ಧರ್ಮಪ್ರಚಾರಕ್ಕೆ ನಿಂತಿದ್ದನು. ಇದನ್ನು ಯಾರೂ ...ಕೊಳ್ಳಲಿಕ್ಕಾಗದು. ಏಕೆಂದರೆ ಆತನ ಜೀವನ ಯಾವ ...ಲ್ಲೂ ತನ್ನ ಮನೆಯಿಂದ ದೂರ ಉಳಿದವನಲ್ಲ ಸತ್ಯಸಾಯಿ. ಪುಟ್ಟಪರ್ತಿಯಲ್ಲಿ ಮಠ ಕಟ್ಟಿಕೊಂಡು ವಿಭೂತಿ ಪವಾಡಕ್ಕೆ ಮುಂದಾಗಿ ಸ್ವಾಮಿ ಅಂತ ಕರೆಸಿಕೊಂಡಾಗಲೂ ಅವನ ಸುತ್ತಮುತ್ತ ರಕ್ತಸಂಬಂಧಿಗಳು ತುಂಬಿತುಳುಕಿದ್ದರು. ಟ್ರಸ್ಟ್‌ನ ದುಡ್ಡಿನಲ್ಲೇ ಅವರಿಗೆಲ್ಲ ಭಾರೀ ಸೌಲಭ್ಯ ಕಲ್ಪಿಸಿದ್ದ. ಅಷ್ಟೇ ಏಕೆ, ಅವನ ಟ್ರಸ್ಟ್‌ನಲ್ಲಿ ಕುಟುಂಬದವರೂ ಸದಸ್ಯರಾಗಿದ್ದರು. ಕೊನೆಗೆ ಅವನ ಅಂತ್ಯಸಂಸ್ಕಾರವನ್ನು ಮಾಡಿದ್ದೂ ಅವನ ಅಣ್ಣನ ಮಗ ರತ್ನಾಕರನೆ. ಹಾಗಿರುವಾಗ ಆತ ಮನೆ ಬಿಟ್ಟದ್ದು ಎಲ್ಲಿಂದ ಬಂತು.

ಆರನೆಯದು, 1967ರಲ್ಲಿ 44ನೇ ವಯಸ್ಸಿನಲ್ಲಿರುವ ತಾನು ತನ್ನ 12ನೇ ವಯಸ್ಸಿನಲ್ಲೇ ಮನೆ ಬಿಟ್ಟು ಧರ್ಮಪ್ರಚಾರಕ್ಕೆ ನಿಂತನೆಂದು ಸಾಯಿ ಹೇಳಿಕೊಳ್ಳುತ್ತಿದ್ದಾನೆ (ವಿಲ್‌ನಲ್ಲಿ). ಅಂದರೆ ಆತ 1935ರಲ್ಲಿ ಮನೆ, ಓದು ಎಲ್ಲವನ್ನೂ ಬಿಟ್ಟು ಹೊರಟ ಎಂದಾಯಿತು. ಆದರೆ 1940-41 ರಲ್ಲೂ ಆತ ಕಮಲಾಪುರದ ಶಾಲೆಯಲ್ಲಿ ಓದುತ್ತಿದ್ದ ದಾಖಲೆಗಳಿವೆ. ಅದಕ್ಕೆ ವಿಲ್ ಅಥವಾ ಸತ್ಯಜಿತ್ ಏನು ಸಮಜಾಯಿಷಿ ನೀಡುತ್ತಾರೆ?

ಇನ್ನು ಕೊನೆಯದಾಗಿ ಏಳನೆಯದು, ತುಂಬಾ ಮುಖ್ಯವಾದ ವಿಷಯ ಇದು. ಉಯಿಲಿನ ಪ್ರಕಾರ 1967ರಲ್ಲಿ ಸಾಯಿಗೆ 44 ವರ್ಷ. ಅಂದರೆ ಆತ 1922-23 ರಲ್ಲಿ ಜನಿಸಿರಬೇಕು. ಆದರೆ ಖುದ್ದು ಸಾಯಿಯೇ ಹೇಳಿಕೊಂಡಂತೆ, ಸಾಯಿ ಅನುಯಾಯಿಗಳು ಭಕ್ತಿಯಿಂದ ನಂಬಿಕೊಂಡಿರುವಂತೆ ಆತ ಹುಟ್ಟಿದ್ದು 23 ನವೆಂಬರ್ 1926ರಲ್ಲಿ. ಇದನ್ನು ಚೈ... ಮಿಸ್ಟೇಕ್ ಅಂತ ಸುಮ್ಮನಾಗಲಿಕ್ಕಾಗುವುದಿಲ್ಲ ಏಕೆಂದರೆ ಸಾಯಿಬಾಬಾ ತನ್ನ ಜನ್ಮ ದಿನಾಂಕದ ಬಗ್ಗೆ ಅಂತಹದ್ದೊಂದು ಅನಗತ್ಯ ಉತ್ಪ್ರೇಕ್ಷೆಯನ್ನು ಸೃಷ್ಟಿಸಿಹೋಗಿದ್ದಾನೆ. ವಿಲ್‌ನ ಪ್ರಕಾರ ಆತ ಹುಟ್ಟಿದ್ದು 1922-23 ರಲ್ಲೇ ಅನ್ನುವುದನ್ನು ಒಪ್ಪಿಕೊಂಡರೆ ಸಾಯಿ ಮಹಾನ್ ಸುಳ್ಳುಗಾರ ಎಂಬುದು ಸಾಬೀತಾಗುತ್ತದೆ. 1926ರಲ್ಲೇ ತಾನು ಹುಟ್ಟಿದ್ದು ಎಂದು ಸಾಯಿ ಒತ್ತಿ ಹೇಳಲು ಪ್ರಮುಖ ಕಾರಣವಿದೆ. ಅದಕ್ಕೂ




ಮುನ್ನ ಶ್ರೀ ಅರಬಿಂದೋ ಭವಿಷ್ಯ ನುಡಿದು 1926 ನವೆಂಬರ್ 24 ರಂದು ಶ್ರೀಕೃಷ್ಣ ಭೂಮಿಯಲ್ಲಿ ಮತ್ತೊಮ್ಮೆ ಮಾನವರೂಪಿಯಾಗಿ ಅವತರಿಸಲಿದ್ದಾನೆ ಎಂದಿದ್ದರು. ಅದು ತಾನೇ ಎಂದು ಸಾಬೀತುಪಡಿಸಿ ತನ್ನ ಜನ್ಮಕ್ಕೆ ದೈವಿಕ ಕಳೆಕಟ್ಟುವಂತೆ ಮಾಡಲು ಆ ದಿನಾಂಕಕ್ಕಿಂತ ಒಂದು ದಿನ ಮಾತ್ರವೇ ಮೊದಲಿದ್ದ ತನ್ನ ಹುಟ್ಟಿನ 1922 ... 1926ಕ್ಕೆ ಜಂಪ್ ಮಾಡಿಸಿ ಬಿಟ್ಟ ಭಕ್ತಿ ಗಿಟ್ಟಿಸಿಕೊಂಡದ್ದು ಖಾತ್ರಿಯಾಗುತ್ತದೆ. ಹಾಗಾದರೆ ಸತ್ಯಸಾಯಿ ಸುಳ್ಳುಗಾರ ಅನ್ನೋದನ್ನು ವಿಲ್ ಒಪ್ಪಿಕೊಳ್ಳುತ್ತದೆಯೇ?

ಹೀಗೆ ಒಂದೊಂದಾಗಿ ಭುಗಿಲೇಳುವ ಅನುಮಾನಗಳು ಉಯಿಲಿನ ಪ್ರಾಮಾಣಿಕತೆಯನ್ನೆ ಕ್ಷೀಣಿಸುತ್ತಾ ಸಾಗುತ್ತವೆ. ಕಿಂಚಿತ್ತೂ ಕಷ್ಟವಿಲ್ಲದೆ, ಮುಂದೆಯೂ ಕಷ್ಟ ಬರದಂತೆ (ಇನ್‌ಕಮ್ ಟ್ಯಾಕ್ಸ್ ರೇಡ್ ಇಲ್ಲ, ಅಕೌಂಟ್ಸ್ ತೋರಿಸುವ ಭೀತಿ ಇಲ್ಲ) ಅನುಭವಿಸುವ ಆಸ್ತಿಯನ್ನು ನುಂಗಲು ನಡೆದಿರುವ ಹೈಡ್ರಾಮಾಗಳ ನಡುವೆ ಇಷ್ಟೂ ಅನುಮಾನಗಳನ್ನು ನಿವಾರಿಸುವ ತಾಕತ್ತು ಉಯಿಲಿಗೆ ಇದ್ದಂತೆ ಕಾಣುತ್ತಿಲ್ಲ. ರತ್ನಾಕರ್ ನೇತೃತ್ವದ ಕುಟುಂಬ ಹಾಗೂ ಸತ್ಯಜಿತ್‌ನನ್ನು ಮುಂದಿಟ್ಟುಕೊಂಡಿರುವ ಟ್ರಸ್ಟ್‌ಗಳ ನಡುವಿನ ವಾರ್‌ನಲ್ಲಿ ತನ್ನ 44ನೇ ವಯಸ್ಸಿನಲ್ಲಿ ಜನ್ಮವೆತ್ತಿರುವ ಪೀಚಲು ಉಯಿಲಿನ ಕಥೆ ಏನಾಗುತ್ತದೋ ಗೊತ್ತಿಲ್ಲ. ಹಾಗೆ ನೋಡಿದರೆ ಅದು ರತ್ನಾಕರನಂತ ಕಳ್ಳನಿಗೋ, ಟ್ರಸ್ಟ್‌ನಂತಹ ಕನ್ನಡಿಯ ಖಜಾನೆಗೋ ಸೇರತಕ್ಕ ಆಸ್ತಿಯೇ ಅಲ್ಲ. ಸರ್ಕಾರ ಮುಂದಾಗಿ ಮುಟ್ಟುಗೋಲು ಹಾಕಿಕೊಳ್ಳುವುದೇ ಉತ್ತಮ. ಸದ್ಯದ ಭ್ರಷ್ಟ ರಾಜಕಾರಣದಲ್ಲಿ ಹಾಗೆ ಮಾಡಿದಾಗಲೂ ಅದೇನು ಜನರಿಗೆ ಉಪಯೋಗವಾಗುವ ಭರವಸೆಯಿಲ್ಲ. ಆದ್ದರಿಂದ ಸಾಯಿ ಆಸ್ತಿ ಒಂದರ್ಥದಲ್ಲಿ ನಾಯಿಮೊಲೆಯ ಹಾಲಿನಂತಾಗಿ ಹೋಗಿದೆ.

ಇಲ್ಲಿ ಇನ್ನೊಂದು ವಿಷಯವನ್ನೂ ತಳ್ಳಿ ಹಾಕಲಿಕ್ಕೆ ಬರುವುದಿಲ್ಲ. ಆಸ್ತಿಗಾಗಿ ತಾವು ಕಿತ್ತಾಟ ನಡೆಸುತ್ತಿರುವುದರಿಂದ ಸರ್ಕಾರವೇ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಮುಂದಾಗುತ್ತಿರುವ ಸೂಚನೆ ಸಿಕ್ಕ ಕೂಡಲೇ ಎರಡೂ ಟೀಮಿನವರು ಕಾಂಪ್ರಮೈಸಿಗೆ ಬಂದು ಈ ಉಯಿಲಿನ ಪ್ರಹಸನ ಸೃಷ್ಟಿಸಿ ತಮ್ಮಲ್ಲೇ ಉಳಿಸಿಕೊಳ್ಳುವ ಹುನ್ನಾರವನ್ನೂ ನಡೆಸಿರಬಹುದು. ರತ್ನಾಕರನೂ ಟ್ರಸ್ಟ್ ಸದಸ್ಯನಾಗಿರುವುದರಿಂದ ಆಸ್ತಿ ಟ್ರಸ್ಟ್‌ನ ಪಾಲಾದನಂತರ ಹಂಚಿಕೊಳ್ಳುವ ಒಡಂಬಡಿಕೆ ಏರ್ಪಟ್ಟಿರುವ ಸಾಧ್ಯತೆಯೂ ಇರಬಹುದು. ಅಂತೂ ಸತ್ಯಸಾಯಿಯ ಕರಾಳ ಬೆನ್ನಿಗಿದ್ದವರೆಲ್ಲರೂ 'ಎಲ್ಲಮ್ಮ'ನ ಜಾತ್ರೆ ಮಾಡಲು ...

ಕೆ.ಎಂ.ಎಫ್. ಕದನ

ದುಷ್ಟ-ಕಮ್-ಭ್ರಷ್ಟ ವೆಂಕಟರಾಮುಗೆ ರೇವಣ್ಣನ ಅಭಯ!?





...ಅಂತೂಇಂತೂ ಕೆ.ಎಂ.ಎಫ್ ಭವಿಷ್ಯ ಬೀದಿಗೆ ...ದೆ.

... ಪಶು ಆಹಾರ ಖರೀದಿಯಲ್ಲಿ ಭಾಗಿಯಾದ ಕಾರಣಕ್ಕೆ ...ರ್ಕಾರದಿಂದ ವಜಾ ಆಗಿರುವ ನಿರ್ದೇಶಕ ...ಕಟರಾಮುವಿನ ರೌಡಿಸಂ ವೃತ್ತಾಂತವಿದು. ನಿಯೋಜಿತ ...ತನ ನಿರ್ದೇಶಕ ಪ್ರೇಮನಾಥ್ ಮೇಲೆ ಹಲ್ಲೆ ...ಡಿಸಿದ್ದಲ್ಲದೆ, ಆಡಳಿತ ಮಂಡಳಿ ಸಭೆ ಸೇರಲು ...ಮುಂದಾದಾಗ ಸಭಾಂಗಣಕ್ಕೆ ಬೀಗ ಜಡಿಸಿ ...ಧಿಕಾರಿಯಂತೆ ಮೆರೆದಾಡಿದ್ದಾನೆ. ಯಾವುದೋ ...ಕೀಯದ ಹಂಗಿಗೆ ಬಿದ್ದು ಇಂತಹ ದುಷ್ಟ ಕಮ್ ...ಷ್ಟನ ಬೆಂಬಲಕ್ಕೆ ಬೋರ್ಡ್ ನಿರ್ದೇಶಕ ಎಚ್.ಡಿ. ...ಣ್ಣ ನಿಂತಿರುವುದೇ ಬಲು ದೊಡ್ಡ ವಿಪರ್ಯಾಸ!

...ಕೆ.ಎಂ.ಎಫ್ ಪಾಲಿನ ಕಂಟಕದಂತಿರುವ ...ಕಟರಾಮು ತನ್ನ ಸಹೋದ್ಯೋಗಿ ನಿರ್ದೇಶಕ ನರಸಿಂಹ ...ಯ ಜೊತೆ ಸೇರಿ ಪಶು ಆಹಾರ ಖರೀದಿಯಲ್ಲಿ ...ಗೋಲ್‌ಮಾಲ್ ನಡೆಸಿದ ಪರಿಣಾಮವಾಗಿ ಕೆ.ಎಂ.ಎಫ್ ... 40 ಕೋಟಿ ಲಾಸ್ ಆಗಿತ್ತು, ಈ ಕುರಿತು ತನಿಖೆ ...ಸುವಂತೆ ಸರ್ಕಾರವೇ ಆದೇಶಿಸಿದ್ದರಿಂದ ವಿಚಾರಣೆ ...ಗಿಯುವವರೆಗೆ ಈತ ಅಧಿಕಾರದಲ್ಲಿ ...ಮುಂದುವರೆಯುವುದು ಸೂಕ್ತವಲ್ಲ ಎಂಬ ಅಭಿಪ್ರಾಯ ...ಗಿತ್ತು, ಹಾಗಾಗಿ ಸೆಪ್ಟೆಂಬರ್ 5 ರಂದು ಸಭೆ ...ದ ಆಡಳಿತ ಮಂಡಳಿ ವೆಂಕಟರಾಮುವನ್ನು ಬೇರೊಂದು ಕಡೆಗೆ ಎತ್ತಂಗಡಿ ಮಾಡಿ ಹಿಂದಿದ್ದ ಎ.ಎಸ್ ಪ್ರೇಮನಾಥ್‌ರನ್ನು ನೂತನ ಎಂ.ಡಿ ಯನ್ನಾಗಿ ಘೋಷಿಸಿತ್ತು.

ಮಂಡಳಿಯ ನಿರ್ಧಾರವನ್ನು ಧಿಕ್ಕರಿಸಿದ ವೆಂಕಟರಾಮು ಹೊಸ ಎಂ.ಡಿ ಗೆ ಅಧಿಕಾರ ವಹಿಸಿಕೊಡಲು ನಿರಾಕರಿಸಿದ್ದ. ತನ್ನ ಜಾಗಕ್ಕೆ ಬರುತ್ತಾರೆಂಬ ಒಂದೇ ಕಾರಣಕ್ಕೆ ತಾನು ಅಧಿಕಾರದಲ್ಲಿ ಇಲ್ಲದೇ ಇದ್ದರೂ ಎ.ಎಸ್ ಪ್ರೇಮನಾಥ್‌ರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದ. ಇವನ ಈ ದಬ್ಬಾಳಿಕೆಗೆ ತಕ್ಕ ಶಾಸ್ತಿ ಮಾಡಲು ಸೆಪ್ಟೆಂಬರ್ 11 ರಂದು ಆಡಳಿತ ಮಂಡಳಿ ಸಭೆ ಸೇರಲು ನಿರ್ಧರಿಸಿತ್ತು. ಕೆ.ಎಂ.ಎಫ್ ಅಧ್ಯಕ್ಷ ಎನಿಸಿಕೊಂಡ ಸೋಮಶೇಖರ್ ರೆಡ್ಡಿ ಚಂಚಲಗೂಡ ಜೈಲು ಸೇರಿರುವುದರಿಂದ ಆತನ ಲಿಖಿತ ಒಪ್ಪಿಗೆಯ ಮೇಲೆ ಮತ್ತೊಬ್ಬ ಚುನಾಯಿತ ನಿರ್ದೇಶಕ ರೇವಣಸಿದ್ದಪ್ಪನ ನೇತೃತ್ವದಲ್ಲಿ ಸಭೆ ಆಯೋಜನೆಯಾಗಿತ್ತು. ಆ ಸಭೆಯಲ್ಲಿ ತನ್ನನ್ನು ಅಮಾನತು ಮಾಡುವ ನಿರ್ಧಾರ ಅಂಗೀಕರಿಸ ಲಾಗುತ್ತದೆ ಎನ್ನುವ ಸೂಚನೆ ಸಿಗುತ್ತಿದ್ದಂತೆಯೇ ಶತಾಯಗತಾಯ ಅದನ್ನು ತಡೆಯಲು ಯೋಜನೆ ರೂಪಿಸಿದ ವೆಂಕಟರಾಮು ಪಶು ಸಂಗೋಪನಾ ಕಾರ್ಯದರ್ಶಿಗಳಿಂದ ಸಭೆ ನಡೆಸಬಾರದೆನ್ನುವ ಆದೇಶವನ್ನು ಹೊರತರಿಸಿದ್ದ. ಅದನ್ನೂ ಮೀರಿ ಸಭೆಯಲ್ಲಿ ಪಾಲ್ಗೊಳ್ಳಲು ನಿರ್ದೇಶಕರು ಮುಂದಾದಾಗ ಲಿಂಗೇಶ್ ಕುಮಾರ್ ಎನ್ನುವವನ ಮುಂದಾಳತ್ವದಲ್ಲಿ ತನ್ನ ಪುಂಡ ಬೆಂಬಲಿಗರನ್ನು ಬಿಟ್ಟು, ಪ್ರೇಮನಾಥ್ ಮೇಲೆ ಹಲ್ಲೆ ಮಾಡಿಸುವ ಹೀನಕೆಲಸಕ್ಕೂ ಕೈಹಾಕಿದ್ದ.



ಪ್ರೇಮ್‌ನಾಥ್

ಅಲ್ಲಿಗೂ ಸುಮ್ಮನಾಗದೆ ಸಭೆ ನಡೆಯಲಿದ್ದ ಮೀಟಿಂಗ್ ಹಾಲ್‌ಗೆ ಬೀಗ ಹಾಕಿ ಆಡಳಿತ ಮಂಡಳಿಗೇ ಸೆಡ್ಡು ಹೊಡೆದಿದ್ದ. ಒಟ್ಟು 21 ನಿರ್ದೇಶಕರಲ್ಲಿ 11 ಸದಸ್ಯರು ಭಾಗಿಯಾಗಿದ್ದ ಸಭೆಯನ್ನು ಕೊನೆಗೂ ನಡೆಸಿದ ಆಡಳಿತ ಮಂಡಳಿ ವೆಂಕಟರಾಮುನನ್ನು ಸಸ್ಪೆಂಡ್ ಮಾಡಿದ ಆದೇಶ ಹೊರಡಿಸಿ ಆತ ಸೆಪ್ಟೆಂಬರ್ 5ರ ನಂತರ ಹೊರಡಿಸಿದ ಎಲ್ಲಾ ಆದೇಶಗಳನ್ನೂ ರದ್ದುಪಡಿಸುವ ಠರಾವನ್ನು ಕೈಗೊಳ್ಳಲಾಯಿತು. ಅಲ್ಲದೆ ಪ್ರೇಮನಾಥ್‌ರವರ ಎಂ.ಡಿ ಆಯ್ಕೆಯನ್ನು ಮರುಘೋಷಿಸಲಾಯಿತು. ಸಭೆಯನಂತರ ಆತನ ಸಸ್ಪೆಂಡ್ ಆದೇಶವನ್ನು ಖುದ್ದು ರೇವಣಸಿದ್ದಪ್ಪನೇ ನೀಡಲು ಹೋದಾಗಲೂ ಅದನ್ನು ಸ್ವೀಕರಿಸದ ವೆಂಕಟರಾಮು ಸಭೆಯೇ ಅನಧಿಕೃತವಾಗಿರುವಾಗ ಆದೇಶ... ನಾನ್ಯಾಕೆ ಸ್ವೀಕರಿಸಲಿ ಎಂಬಂತಹ ದರ್ಪದ ಮಾತುಗಳನ್ನೂ ಆಡಿದ್ದಾನೆ. ಇಂತಹ ಪರಮ ಭ್ರಷ್ಟ ಮತ್ತು ಮಹಾನ್ ದರ್ಪಿಷ್ಟ ಕೆ.ಎಂ.ಎಫ್‌ನಲ್ಲಿ ಈ ಪರಿ ಭಾನಗಡಿ ಸೃಷ್ಟಿಸುವ ಧೈರ್ಯ ಮಾಡುತ್ತಿರುವುದರ ಹಿಂದೆ ಕೀಳುಮಟ್ಟದ ರಾಜಕೀಯ ಇದೆ.


ಕೆ.ಎಂ.ಎಫ್ ಹಿಂದಿನ ಕರಾಳ ರಾಜಕೀಯವನ್ನು ವಿಶ್ಲೇಷಿಸುವುದಕ್ಕೂ ಮುನ್ನ ಒಂದು ವಿಷಯವನ್ನಂತೂ ಸ್ಪಷ್ಟಪಡಿಸಿಕೊಳ್ಳಬೇಕು. ಇಡೀ ಭಾರತದಲ್ಲಿ ಅಮೂಲ್ ಸಂಸ್ಥೆಯನ್ನು ಬಿಟ್ಟರೆ ಹಾಲು ಉತ್ಪಾದಕ ತೆಗ್ಗಳಿಕೆಯಲ್ಲಿ ಕೆ.ಎಂ.ಎಫ್.ನದೇ ಎರಡನೇ ... ಸ್ಥಾನ. ಇದರ ಹಿಂದೆ ಎಚ್.ಡಿ. ರೇವಣ್ಣರ ಅಪಾರ ... ಇರುವುದಂತೂ ಸತ್ಯ. ಕೆ.ಎಂ.ಎಫ್ ಅಧ್ಯಕ್ಷರಾಗಿದ್ದ ಸುದೀರ್ಘ ಅವಧಿಯಲ್ಲಿ ರೇವಣ್ಣ ಕೈಗೊಂಡ ಅಭಿವೃದ್ಧಿ ಕಾರ್ಯಗಳು, ಆಡಳಿತದ ಮೇಲಿನ ಹಿಡಿತ, ಪಾರದರ್ಶಕತೆಯಿಂದಾಗಿಯೇ ಕೆ.ಎಂ.ಎಫ್ ಎತ್ತರಕ್ಕೆ ಬಂದು ತಲುಪಿದೆ. ಆದರೆ ರಾಜಕೀಯ ಜಿದ್ದಾಜಿದ್ದಿ, ದೂರಾಲೋಚನೆಯ ಷಡ್ಯಂತ್ರದಿಂದಾಗಿ ರೇವಣ್ಣನ ಜಾಗಕ್ಕೆ ಸೋಮಶೇಖರ್ ರೆಡ್ಡಿ ವಕ್ಕರಿಸಿದ್ದು, ನಂದಿನಿ ಅಂಗಳದಲ್ಲಿ ಕಮಲ ಅರಳಿದ್ದು, ಅನಂತರ ಸಾಲುಸಾಲು ಹಗರಣ ನಡೆದದ್ದು ಇವತ್ತಿನ ಮಟ್ಟಿಗೆ ಹಳೆಯ ವಿಷಯ.

ಸದ್ಯದ ಕೆ.ಎಂ.ಎಫ್ ಕಿತ್ತಾಟದಲ್ಲಿ ಭ್ರಷ್ಟ, ದುಷ್ಟ ವೆಂಕಟರಾಮುವಿನ ಬೆಂಬಲಕ್ಕೆ ರೇವಣ್ಣ ನಿಂತಿರುವುದು ಅಚ್ಚರಿಯ ವಿಷಯ. ಹೊಸದಾಗಿ ಎಂ.ಡಿ.ಯಾಗಿರುವ ಪ್ರೇಮನಾಥ್ ಮತ್ತು ರೇವಣ್ಣನ ನಡುವೆ ವೈಯಕ್ತಿಕ ಭಿನ್ನಾಭಿಪ್ರಾಯಗಳಿರಬಹುದು ಅಥವಾ ಕುಚೋದ್ಯವೆಂಬಂತೆ ಅಕಸ್ಮಾತ್ತಾಗಿ ಪ್ರೇಮನಾಥ್ ಕೂಡಾ ಲಿಂಗಾಯಿತ ವ್ಯಕ್ತಿಯಾಗಿರುವುದರಿಂದ ಪ್ರೇಮನಾಥ್ ಮುಖದಲ್ಲೂ ರೇವಣ್ಣನಿಗೆ ಯಡಿಯೂರಪ್ಪನೇ ಕಾಣುತ್ತಿರಬಹುದು. ಆದರೆ ಪ್ರೇಮನಾಥ್‌ರನ್ನು ವಿರೋಧಿಸುವ ಭರಾಟೆಯಲ್ಲಿ ರೇವಣ್ಣನವರು ಪರಮ ಭ್ರಷ್ಟ ವೆಂಕಟರಾಮುವಿನ ಬೆನ್ನಿಗೆ ನಿಲ್ಲುವುದು ಕೆ.ಎಂ.ಎಫ್ ಭವಿಷ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯೇನೂ ಅಲ್ಲ. ಹಾಗೊಮ್ಮೆ ಈಗಿನ ಹೊಸ ಎಂ.ಡಿಯ ಮೇಲೂ ಆರೋಪಗಳಿದ್ದರೆ ಅದನ್ನು ತನಿಖೆಗೆ ಆಗ್ರಹಿಸುವ ಮೂಲಕ ರೇವಣ್ಣ ಹೋರಾಟಕ್ಕಿಳಿಯಬಹುದಿತ್ತು. ಆದರೆ ಹಳೆ ಎಂ.ಡಿ ವೆಂಕಟರಾಮುವಿನಿಂದ ಕೆಲ ನಿರ್ದೇಶಕರಿಗೆ 'ಮೇವು' ಹೋಗುತ್ತಿಲ್ಲವಾದ್ದರಿಂದ ಅವರನ್ನು ಕೆಳಗಿಳಿಸುವ ...ಸಲಾಗುತ್ತಿದೆ ಎನ್ನುವ ಮೂಲಕ ಆ ಭ್ರಷ್ಟನಿಗೆ ಅಭಯದ ಕೃಪೆ ನೀಡಿದ್ದಾರೆ. (ಮೇವು ಸಿಗದವರು ಎಂ.ಡಿಯ ವಿರುದ್ಧ ನಿಂತಿದ್ದಾರೆ ಎನ್ನುವುದಾದರೆ ವೆಂಕಟರಾಮು ಪರವಾಗಿ ನಿಂತವರನ್ನು ಏನೆನ್ನಬೇಕಾಗುತ್ತೆ)

ರೇವಣ್ಣನೇ ಕಟ್ಟಿ ಬೆಳೆಸಿದ ಕೆ.ಎಂ.ಎಫ್ ನ ಭವಿಷ್ಯ ಮತ್ತಷ್ಟೂ ಉಜ್ವಲವಾಗಬೇಕೆಂದರೆ ರೇವಣ್ಣ ಜಾತಿಯ ಸಂಕುಚಿತ ದೃಷ್ಟಿಯಿಂದ ಹೊರಬಂದು ಯೋಚಿಸಬೇಕಾದ ಅಗತ್ಯತೆಯಿದೆ. ತಮಾಷೆಯ ವಿಷಯವೆಂದರೆ ರೇವಣ್ಣ ಅಂದುಕೊಂಡಂತೆ ಪ್ರೇಮನಾಥ್ ಬಿಜೆಪಿಯೂ ಅಲ್ಲ, ಯಡ್ಡಿಯ ಭಂಟರೂ ಅಲ್ಲ. ಇದೆಲ್ಲಕ್ಕಿಂತ ಮುಖ್ಯವಾಗಿ ವೆಂಕಟರಾಮುವಿನಂತಹ ಕಿರಾತಕನನ್ನು ಖಾಲಿ ಮಾಡಿಸುವುದು ಕೆ.ಎಂ.ಎಫ್ ಹಿತದೃಷ್ಟಿಯಿಂದ ತುಂಬಾ ಅನಿವಾರ್ಯ. ಯಾವುದೋ ಲೆಕ್ಕಾಚಾರದಲ್ಲಿ ಇಂತಹ ... ಬೇರೆ ಆರ್ಟಿಸಲು ಅವಕಾಶ ... ಸೂಕ್ತವಲ್ಲ.

ನಾಗರಾಜ್

KSRTC- ಕಾರ್ಮಿಕ ದ್ರೋಹಿ ಅಶೋಕ



ಸಾರಿಗೆ ಮುಷ್ಕರ ಇಡೀ ರಾಜ್ಯವನ್ನೇ ಸ್ತಬ್ಧಗೊಳಿಸಿದೆ. ಇದರ ನೇರ ಕಾರಣ ಸಚಿವ ಅಶೋಕ್ ಹಾಗೂ ಸಂಸ್ಥೆಯ ಅಧಿಕಾರಿಗಳೇ. 9 ಮಂದಿ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಖುದ್ದಾಗಿ ಹಾಜರಾಗಿ ಮಾಡಿಕೊಂಡ ಒಪ್ಪಂದದ ಲಿಖಿತ ದಾಖಲೆಯಿದ್ದಾಗಲೂ ಅದನ್ನು ಉಲ್ಲಂಘಿಸಿಬಿಡುತ್ತಾರೆಂದರೆ ಯಾರಾದರೂ ನಂಬುತ್ತಾರೆಯೆ? ಆದರೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಅಂಥಾ ಹೀನಕೃತ್ಯಕ್ಕೆ ಸಾಕ್ಷಿಯಾಗಿದ್ದಾರೆ. ತಾವೇ ಮಾಡಿಕೊಂಡ ಒಪ್ಪಂದವನ್ನು ತಾವೇ ಮುರಿದು ಲಜ್ಜೆಗೇಡಿಗಳಂತೆ ವರ್ತಿಸುತ್ತಿದ್ದಾರೆ. ಈ ಎಲ್ಲಾ ಕಾನೂನುಬಾಹಿರ ಕೃತ್ಯಗಳ ಹಿಂದೆ ಸಾರಿಗೆ ಸಚಿವ ಆರ್.ಅಶೋಕ ಶತಭಂಡನಾಗಿ ನಿಂತಿದ್ದಾರೆ!


ಈ ಒಪ್ಪಂದ ನಡೆದದ್ದು ಇದೇ ಏಪ್ರಿಲ್ 25ರಂದು. ಅದರ ಹಿನ್ನೆಲೆ ಹೀಗಿದೆ. ಸುಮಾರು 16 ವರ್ಷಗಳಿಂದ ಬಾಕಿಯಿರುವ ಬೇಡಿಕೆಗಳನ್ನು ಈಡೇರಿಸುವಂತೆ ಹತ್ತಾರು ಬಾರಿ ಮಾಡಿಕೊಂಡ ಮನವಿಗಳು ಕಸದಬುಟ್ಟಿ ಸೇರಿದ ನಂತರ, ಕಾರ್ಮಿಕ ಸಂಘಗಳ ಜಂಟಿ ಸಮಿತಿಯು ಬೇರೆ ವಿಧಿಯಿಲ್ಲದೆ ಏಪ್ರಿಲ್ 27 ರಂದು ರಾಜ್ಯಾದ್ಯಂತ ಮುಷ್ಕರ ನಡೆಸುವುದಾಗಿ ಸರ್ಕಾರಕ್ಕೆ ನೋಟಿಸ್ ಕೊಟ್ಟಿತ್ತು. ಇದರ ಪೂರ್ವಭಾವಿಯಾಗಿ ಬಾಗಲಕೋಟೆ ಹುಬ್ಬಳ್ಳಿ, ಚಿಕ್ಕಮಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಂಗಳೂರು ಮುಂತಾದೆಡೆಗಳಲ್ಲಿ ಬೃಹತ್ ಸಮಾವೇಶಗಳು ನಡೆದವು. ಹೀಗೆ ಮಡುಗಟ್ಟಿದ್ದ ನೌಕರರ ಆಕ್ರೋಶ ಸ್ಫೋಟಕ ಸ್ಥಿತಿಗೆ ಬಂದದ್ದನ್ನು ಕಂಡು ಸಾರಿಗೆ ಸಚಿವ ಆರ್.ಅಶೋಕ್ ಒಂದು ಹೊಸತಂತ್ರವನ್ನು ಹೂಡಿದ್ದರು. ಇಲಾಖೆಯ 9 ಅಧಿಕಾರಿಗಳನ್ನು ಒಟ್ಟುಮಾಡಿ ಕಾರ್ಮಿಕ ನಾಯಕರೊಂದಿಗೆ ಮಾತುಕತೆ ನಡೆಸುವಂತೆ ಆಜ್ಞಾಪಿಸಿದರು. ಆದರೆ ತಾನು ಮಾತ್ರ ನೇರವಾಗಿ ಸೀನ್‌ಗೆ ಬರದೆ ತನಗೆ ಸಂಬಂಧವಿಲ್ಲದವನಂತೆ ಇದ್ದುಬಿಟ್ಟರು.

ಆ ಸಭೆಯಲ್ಲಿ ಕಾರ್ಮಿಕರ ಪರವಾಗಿ ಹಿರಿಯ ಕಾರ್ಮಿಕ ಮುಖಂಡರಾದ ಎಂ.ಸಿ.ನರಸಿಂಹನ್, ಕೆ.ಎಸ್.ಶರ್ಮಾ, ಎಚ್.ವಿ.ಅನಂತಸುಬ್ಬರಾವ್ ಮುಂತಾದ ಒಟ್ಟು ಹನ್ನೆರಡು ಮಂದಿ ಮುಖಂಡರು ಭಾಗವಹಿಸಿ ಕಾರ್ಮಿಕರ ಸ್ಥಿತಿಗತಿ ಹಾಗೂ ಅವರ ಬೇಡಿಕೆಗಳ ಬಗ್ಗೆ ವಿವರಿಸಿದರು. ಅಂತಿಮವಾಗಿ ಆದ ಒಡಂಬಡಿಕೆಯ ಮುಖ್ಯಾಂಶ ಹೀಗಿದೆ. " 1) ದಿನಾಂಕ 01.01.2012ರಿಂದ ಜಾರಿಗೆ ತರಬೇಕಾದ ವೇತನ ಪರಿಷ್ಕರಣೆ-2012 ಸಂಬಂಧ ಈಗಾಗಲೇ ಸರ್ಕಾರಕ್ಕೆ ಕಳಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಸಹಮತ ಬಂದ ನಂತರ ಏಕಪಕ್ಷೀಯವಾಗಿ ಅನುಷ್ಠಾನಕ್ಕೆ ತರದೆ, ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಗಳ ಜಂಟಿಸಮಿತಿಯವರ ಗಮನಕ್ಕೆ ತಂದು ಚರ್ಚಿಸುವುದು. 2) ತದನಂತರ ರಾಜ್ಯದ - ಕಾರ್ಮಿಕ ಆಯುಕ್ತರು/ ಸಂಧಾನ ಅಧಿಕಾರಿರವರ ಸಮ್ಮುಖದಲ್ಲಿ ಕೈಗಾರಿಕಾ ವಿವಾದ ಕಾಯಿದೆಯ ಸೆಕ್ಷನ್ 12(3) ಅಡಿಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳುವುದು."

ಈ ಸಭೆಯಲ್ಲಿ ಸರ್ಕಾರದ ಪರವಾಗಿ ಭಾಗವಹಿಸಿದ್ದವರು ಯಾರೋ ಪಡಪೋಶಿ ಅಧಿಕಾರಿಗಳಲ್ಲ; ಕೆ.ಎಸ್‌ಆರ್‌ಟಿಸಿಯ ಎಂ.ಡಿ.ಯಾದ ಮಂಜುನಾಥ ಪ್ರಸಾದ್, ಬಿಎಂಟಿಸಿಯ ಎಂ.ಡಿ. ಕೆ.ಆರ್.ಶ್ರೀನಿವಾಸ್, ಈಶಾನ್ಯ ಸಾರಿಗೆಯ ಎಂ.ಡಿ. ಜಿ.ಎಸ್.ಶಿವಮೂರ್ತಿ, ವಾಯುವ್ಯ ಸಾರಿಗೆಯ ಎಂ.ಡಿ. ಹೇಮರಾಜು ಅಲ್ಲದೆ ಕಾನೂನು ಅಧಿಕಾರಿಗಳು, ನಿರ್ದೇಶಕರು ಸೇರಿ ಇಲಾಖೆಯ ಒಟ್ಟು 9 ಮಂದಿ ಉನ್ನತ ಅಧಿಕಾರಿಗಳೇ ಹಾಜರಿದ್ದರು. ಆದರೆ ನಂತರದ ದಿನಗಳಲ್ಲಿ ಬಣ್ಣ ಬದಲಿಸಿದ ಇಲಾಖೆ ಆ ಒಪ್ಪಂದವನ್ನು ಗಾಳಿಗೆ ತೂರಿಬಿಟ್ಟಿದೆ. ಕಾರ್ಮಿಕ ಇಲಾಖೆಯ ಆಯುಕ್ತರ ಸಮ್ಮುಖದಲ್ಲಿ ಮಾತುಕತೆ ಹಾಗೂ ಒಪ್ಪಂದ ಮಾಡಿಕೊಳ್ಳುವ ಬದಲಿಗೆ ಏಕಾಏಕಿ ಶೇಕಡ 10 ವೇತನ ಹೆಚ್ಚಳದ ಆದೇಶವನ್ನು ಹೊರಡಿಸಿದ್ದಾರೆ. ಆದರೆ ಶೇಕಡಾ 23ರಷ್ಟು ಏರಿಕೆ ಮಾಡಿರುವುದಾಗಿ ಸುಳ್ಳು ಪ್ರಚಾರದಲ್ಲಿ ತೊಡಗಿದ್ದಾರೆ. ಆದರೆ ಹಿಂದಿನ ಬಾಕಿಯನ್ನು ಹೊರತುಪಡಿಸಿದರೆ ಈಗ ವಾಸ್ತವದಲ್ಲಿ ಮಾಡಿರುವ ಹೆಚ್ಚಳ ಕೇವಲ 10% ಮಾತ್ರ.



ಕೆ.ಆರ್.ಶ್ರೀನಿವಾಸ್(ಬಿಎಂಟಿಸಿ)



ಮಂಜುನಾಥ್ ಪ್ರಸಾದ್ (ಕೆಎಸ್ಆರ್‌ಟಿಸಿ)

ವೇತನ ಹೆಚ್ಚಳದ ಜೊತೆಗೆ ಮತ್ತೊಂದು ಪ್ರಮುಖ ಅಂಶವೂ ಒಪ್ಪಂದದಲ್ಲಿ ಸೇರಿತ್ತು. ಸಂಸ್ಥೆಯ ಅಧಿಕಾರಿಗಳು ವಿನಾಕಾರಣ ವರ್ಗಾವಣೆ ಮಾಡಿದ್ದ ಸುಮಾರು 400 ಮಂದಿ ಕಾರ್ಮಿಕರನ್ನು ಮೊದಲಿನ ಸ್ಥಳಗಳಿಗೆ ನೇಮಿಸುವ ಹಾಗು ನೌಕರರ ಮೇಲಿನ ಸುಳ್ಳು ಪೊಲೀಸು ಕೇಸುಗಳನ್ನು ವಾಪಸ್ಸು ಪಡೆಯುವ ಬಗ್ಗೆಯೂ ಪ್ರಸ್ತಾಪಗಳಿದ್ದವು. ಆದರೆ ಅಶೋಕರ ಆಸ್ಥಾನದಲ್ಲಿ ಕೊಬ್ಬಿ ನಿಂತಿರುವ ಅಧಿಕಾರಿಗಳು ಹಿಂದಿನ ಅನ್ಯಾಯವನ್ನು ಸರಿಪಡಿಸುವ ಮಾತು ಹಾಗಿರಲಿ, ಈಗ ಮತ್ತಷ್ಟು ದಮನಕಾರಿ ನೀತಿಗಳನ್ನು ಜಾರಿಗೆ ತಂದಿದ್ದಾರೆ. ಕರಪತ್ರ ಹಂಚಿದ ಕಾರ್ಮಿಕರ ಮೇಲೂ ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ. ಬ್ರಿಟಿಷರ ನೀತಿಗಳಿಗಿಂತ ಇವರು ಯಾವ ರೀತಿಯಲ್ಲಿ ಭಿನ್ನ ಎಂಬುದನ್ನು ಕಾನೂನು ಪಂಡಿತರೇ ಪತ್ತೆಹಚ್ಚಬೇಕು.

ಹೀಗೆ ಸರ್ಕಾರದ ಪಂಚರಂಗಿ ಆಟಗಳಿಂದ ಬೇಸತ್ತ ಕಾರ್ಮಿಕರಿಗೆ ಉಳಿದಿರುವ ದಾರಿಯಾದರೂ ಏನು? ಕಾನೂನು ಕಾಯಿದೆಗಳ ಬಗ್ಗೆ ಬದ್ಧತೆಯಾಗಲಿ, ತಮ್ಮ ಸಂಸ್ಥೆಯಲ್ಲಿ ಹಗಲಿರುಳೂ ದುಡಿಯುವ ಕಾರ್ಮಿಕರ ಬಗ್ಗೆಯಾಗಲಿ ಕನಿಷ್ಠ ಜವಾಬ್ದಾರಿಯೂ ಇಲ್ಲದ ಈ ಸರ್ಕಾರಗಳನ್ನು ಎಚ್ಚರಿಸುವ ವಿಧಾನವಾದರೂ ಬೇರೆ ಏನಿದೆ? ಹೀಗಾಗಿ ಕಾರ್ಮಿಕರು ಅನಿವಾರ್ಯವಾಗಿ ಮುಷ್ಕರದ ಹಾದಿ ಹಿಡಿದಿದ್ದಾರೆ.

ಕೆಎಸ್‌ಆರ್‌ಟಿಸಿ ಸಿಬ್ಬಂದಿಯ ಮುಷ್ಕರ ಒಂದೇ ದಿನಕ್ಕೆ ಸಾರ್ವಜನಿಕರಿಗೆ ಸಾಕಷ್ಟು ಬಿಸಿ ಮುಟ್ಟಿಸಿದೆ. ಕೆಲಸಕ್ಕೆ ಹೋಗಬೇಕಾದ ಉದ್ಯೋಗಿಗಳು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಪರ ಊರುಗಳಿಂದ ಬಂದ ಪ್ರಯಾಣಿಕರು ಎಲ್ಲರೂ ಪರ್ಯಾಯ ಸಾರಿಗೆ ವ್ಯವಸ್ಥೆಯಿಲ್ಲದೆ ಪರದಾಡುತ್ತಿದ್ದಾರೆ. ಹೀಗೆ ಸಾರ್ವಜನಿಕರ ಪ್ರಧಾನ ಸಾರಿಗೆ ವ್ಯವಸ್ಥೆಯೇ ಇಲ್ಲದಂತಾಗಿರುವುದರಿಂದ ವ್ಯಾಪಾರ ವಹಿವಾಟು, ಕಚೇರಿ ಕೆಲಸ ಇತ್ಯಾದಿಗಳೆಲ್ಲಾ ಬಿಕೋ ಎನ್ನುತ್ತಿದ್ದು ಭಾರೀ ಆರ್ಥಿಕ ನಷ್ಟಕ್ಕೆ ಕಾರಣವಾಗುತ್ತಿದೆ. ಇನ್ನು ಆಸ್ಪತ್ರೆ ಸೇರಬೇಕಿದ್ದ ರೋಗಿಗಳ ಗೋಳನ್ನಂತೂ ಕೇಳುವವರೇ ಇಲ್ಲ.

ಹೀಗೆ ಸಾರ್ವಜನಿಕರು ಪರದಾಡುತ್ತಿದ್ದರೂ ಅದು ಸರ್ಕಾರದ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಿದಂತೆ ಕಾಣುತ್ತಿಲ್ಲ, ಯಾಕೆಂದರೆ ಇವರಿಗೆ ಸಾರ್ವಜನಿಕ ಹಿತದ ಬಗ್ಗೆ ಎಳ್ಳಷ್ಟಾದರೂ ಕಾಳಜಿ ಇದ್ದರೆ ತಾನೇ? ರಸ್ತೆಗಳೆಲ್ಲಾ ಬಿಕೋ ಎನ್ನುತ್ತಿದ್ದರೂ 70% ಬಸ್‌ಗಳು ಮಾಮೂಲಿಯಾಗಿ ಆಪರೇಟ್ ಆಗಿವೆ. ಯಾವುದೇ ಸಮಸ್ಯೆಯಾಗಿಲ್ಲ ಎಂಬಂಥ ಹುಸಿಸುಳ್ಳುಗಳನ್ನೇ ಅಶೋಕ ಹಾಗೂ ಆತನ ಅಧಿಕಾರಿಗಳು ನಾಚಿಕೆ ಇಲ್ಲದೆ ಹರಿಯಬಿಡುತ್ತಿದ್ದಾರೆ. ಇದರ ಜೊತೆಗೆ ಈ ಮುಷ್ಕರ ಮತ್ತೊಂದು ತಿರುವು ಪಡೆದುಕೊಳ್ಳುವ ಸಾಧ್ಯತೆಯೂ ಕಂಡುಬರುತ್ತಿದೆ. ಅಶೋಕ ಕೇವಲ ಸಾರಿಗೆ ಮಂತ್ರಿ ಮಾತ್ರವಲ್ಲ; ಗೃಹ ಮಂತ್ರಿಯೂ ಹೌದು. ಅಂದರೆ ಇಡೀ ಪೊಲೀಸ್ ವ್ಯವಸ್ಥೆ ಆತನ ಹಿಡಿತದಲ್ಲಿದೆ. ಆದ್ದರಿಂದ ಪೊಲೀಸ್ ಬಲದ ಮೂಲಕ ಮುಷ್ಕರ ಮುರಿಯುವ ಲೆಕ್ಕಾಚಾರ ಆತನಿಗಿರಬಹುದು. ಈಗಾಗಲೇ ಅಂಥಾ ಲಕ್ಷಣಗಳು ಗೋಚರಿಸುತ್ತಿವೆ. ಹಲವು ಕಾರ್ಮಿಕರನ್ನು ಸುಳ್ಳು ಆರೋಪಗಳಡಿ ಬಂಧಿಸಲಾಗಿದೆ. ಪೊ[illegible] ಅಧಿಕಾರಿಗಳು, ಡಿಪೋ ಮ್ಯಾನೇಜರ್‌ಗಳು ಜೊತೆ[illegible] ಕಂಡಕ್ಟರ್, ಡ್ರೈವರ್‌ಗಳನ್ನು ಭಯಭೀತಗೊಳಿಸುತ್ತಿ[illegible] ಸುದ್ದಿಗಳು ಅಲ್ಲಲ್ಲಿ ಕೇಳಿಬಂದಿದೆ.

ಇಲ್ಲಿ ಒಂದು ವಿಷಯವನ್ನು ಹೇಳಲೇಬೇಕು. [illegible] ಆದಾಯ ತರುವ ಪ್ರಮುಖ ಖಾತೆಗಳಿಗಾಗಿ ರಾಜಕಾರಣ[illegible] ಏನೆಲ್ಲ ಕಸರತ್ತು ನಡೆಸುತ್ತಾರೆಂಬುದನ್ನು ವಿ[illegible] ಹೇಳಬೇಕಾದ ಅಗತ್ಯವಿಲ್ಲ. ಅಂಥ ಪ್ರಮುಖ ಲಾಭದಾ[illegible] ಖಾತೆಗಳಲ್ಲಿ ಸಾರಿಗೆ ಖಾತೆಯೂ ಒಂ[illegible] ಕೆಎಸ್‌ಆರ್‌ಟಿಸಿಯಂಥ ಚಿನ್ನದ ಮೊಟ್ಟೆ ಇಡುವ ಕೋ[illegible] ಉಸ್ತುವಾರಿ ವಹಿಸಿಕೊಳ್ಳಲು ಅಧಿಕಾರಿಗಳೂ ಕೂಡ[illegible] ಮುಂದು ತಾ ಮುಂದು ಎಂದು ಮುಗಿಬೀಳು[illegible] ಮಾಮೂಲು. ಹಾಗೆ ಈ ಇಲಾಖೆಯನ್ನು ನೆಚ್ಚಿ [illegible] ಶೇ 95 ಅಧಿಕಾರಿಗಳು, ಸಚಿವರು ಚೆನ್ನಾಗಿ ಉ[illegible] ತೇಗಿ ದಷ್ಟಪುಷ್ಟವಾಗಿದ್ದಾರೆ. ಆದರೆ ಸಂಸ್ಥೆಗಾಗಿ, ಸಾರ್ವ[illegible] ಸೇವೆಗಾಗಿ ಹಗಲಿರುಳು ಬೆವರು ಹರಿಸುತ್ತಿರುವ ನೌ[illegible] ಸ್ಥಿತಿ ಮಾತ್ರ ಇಡೀ ಸರ್ಕಾರಿ ಇಲಾಖೆಗಳಲ್ಲೇ ಅ[illegible] ಹೀನಾಯ ಸ್ಥಿತಿಯಲ್ಲಿದೆ. ಕೆಲ ತಿಂಗಳ ಹಿಂದೆ ಶಾಸಕ-ಸ[illegible] ಸಂಬಳ ಸಾರಿಗೆಯನ್ನು 100 ರಿಂದ 150% ಏರಿಸಿಕೆ[illegible] ಇದೇ ಸರ್ಕಾರ ಕಾರ್ಮಿಕರ ಅನ್ನದ ತಟ್ಟೆಗೆ ಕೈಹಾಕಿರು[illegible] ನಾಚಿಕೆಗೇಡಿನ ಸಂಗತಿ.

ಕಾರ್ಮಿಕರೊಂದಿಗೆ ಕಾನೂನುಬದ್ಧ ವಿಧಾನ[illegible] ಮಾತುಕತೆ ನಡೆಸಿ ಅವರ ನ್ಯಾಯಬದ್ಧ ಬೇಡಿಕೆಗ[illegible] ಈಡೇರಿಸುವಂತೆ ಈ ಪಾಖಂಡಿಗಳಿಗೆ ತಿಳಿಸಿ ಹೇಳುವ[illegible] ಯಾರು ಎಂಬುದೇ ಅಸಲಿ ಪ್ರಶ್ನೆ.

• ದೊಡ್ಡಿಪಾಳ್ಯ ನರಸಿಂಹಮೂ[illegible]

ಕೆಎಸ್‌ಆರ್‌ಟಿಸಿ ನೌಕರರ ದಾರುಣ ಕತೆ

ಕಾಯಿಲೆ ಬಿದ್ದ ಸರ್ಕಾರಿ ನೌಕರನೊಬ್ಬ ರಜೆ ಮಂಜೂರು ಮಾಡಿಸಿಕೊಳ್ಳಬೇಕೆಂದರೆ ತನ್ನ ಮೇಲಧಿಕಾರಿಗಳಿಗೆ ಕಡ್ಡಾಯವಾಗಿ ಲಂಚ ಕೊಡಬೇಕಾಗಿದೆ ಅಂದರೆ ನೀವು ನಂಬುತ್ತೀರಾ? ರಾಜ್ಯ ರಸ್ತೆ ಸಾರಿಗೆ ಇಲಾಖೆಯಲ್ಲಿ ಅಂಥದ್ದೊಂದು ಪದ್ಧತಿಯಿದೆ. ಒಂದು ದಿನಕ್ಕೆ ಎಂಟು ಗಂಟೆಗಳ ಕೆಲಸದ ಅವಧಿಯೆಂಬ ಕಾನೂನು ಪ್ರಪಂಚದಾದ್ಯಂತ ಜಾರಿಯಲ್ಲಿದ್ದರೂ... ಕೆಎಸ್‌ಆರ್‌ಟಿಸಿಯ ನತದೃಷ್ಟ ನೌಕರರಿಗೆ ಆ ಕಾನೂನು ಅನ್ವಯವಾಗುತ್ತಿಲ್ಲ. ಅದಕ್ಕೇನಂತೆ ಓ.ಟಿ. ಹಣ ಕೊಡುತ್ತಾರಲ್ಲಾ ಬಿಡಿ, ಅಂತ ಯಾರಿಗಾದರೂ ಅನಿಸಬಹುದು. ಆದರೆ ಓ.ಟಿ. ಯೆಂಬ ಪರಿಕಲ್ಪನೆಯನ್ನೇ ಅನಧಿಕೃತಗೊಳಿಸಿರುವ ಇಲಾಖೆಯು ಕಾರ್ಮಿಕರಿಂದ 10 ರಿಂದ 12 ಗಂಟೆಗಳವರೆಗೂ ಬಿಟ್ಟಿ ದುಡಿಸುತ್ತಿದೆ.

ಇಷ್ಟು ಮಾತ್ರವಲ್ಲ, ನಾನಾ ಕುಂಟುನೆಪಗಳನ್ನು ಒಡ್ಡಿ ನೌಕರರನ್ನು ಭೂತಗಳಂತೆ ಕಾಡುತ್ತಿರುವ ಅಧಿಕಾರಿಗಳು ಮನಸೋಇಚ್ಛೆ ದಂಡ ವಿಧಿಸುವ ಹೀನ ಚಾಳಿಯೊಂದನ್ನು ಚಾಲ್ತಿಯಲ್ಲಿಟ್ಟಿದ್ದಾರೆ. ಈ ರೀತಿ ಒಂದು ತಿಂಗಳಿಗೆ ಎಷ್ಟು ಹಣವನ್ನು ವಸೂಲಿ ಮಾಡಿರಬಹುದು? ಬಹುಶಃ ಕೆಎಸ್‌ಆರ್‌ಟಿಸಿ ನೌಕರರು ಅನುಭವಿಸುತ್ತಿರುವ ಯಾತನೆಯನ್ನು ಅರ್ಥಮಾಡಿಕೊಳ್ಳಲು ದಂಡ ವಸೂಲಿಯ ಪ್ರಮಾಣವನ್ನು ಗಮನಿಸಿದರೆ ಸಾಕು. ಈ ಮೊತ್ತ ತಿಂಗಳಿಗೆ ಎರಡು ಕೋಟಿ ರೂಪಾಯಿಗಳು! ಮಾತ್ರವಲ್ಲದೆ ಉಸಿರೆತ್ತಿದರೆ ಸಸ್ಪೆಂಡ್, ಟ್ರಾನ್ಸ್‌ಫರ್, ಸಂಬಳ ಕಡಿತ ಮುಂತಾದ ಕ್ರಮಗಳ ಮೂಲಕ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ನೌಕರರಲ್ಲಿ ಭೀಭತ್ಸ ವಾತಾವರಣವನ್ನೇ ಸೃಷ್ಟಿಸಿದ್ದಾರೆ. ಈಗ ಮುಷ್ಕರಕ್ಕಿಳಿದಿರುವ ಕಾರ್ಮಿಕರು ಇಂಥಾ ಕಿರುಕುಳಗಳಿಂದ ತಮಗೆ ಮುಕ್ತಿ ಯಾವಾಗ ಸಿಗುತ್ತದೋ ಎಂಬ ನಿರೀಕ್ಷೆಯಲ್ಲಿದ್ದಾರೆ.

ಹಾಗೆ ನೋಡಿದರೆ ಗಣೆ ಕಾರ್ಮಿಕರನ್ನು ಬಿಟ್ಟರೆ ಅತಿಹೆಚ್ಚು ರಿಸ್ಕ್ ಇರುವ ಕೆಲಸವನ್ನು ಇವರು ನಿರ್ವಹಿಸುತ್ತಿದ್ದಾರೆ. ಸಂಸ್ಥೆಯಲ್ಲಿ 'ಟ್ರೈನೀ' ಅಂದರೆ ತರಬೇತಿಯಲ್ಲಿರುವವರು ಎಂಬ ಹೆಸರಿನಲ್ಲಿ ಸುಮಾರು 33,000 ನೌಕರರಿದ್ದು, ತಿಂಗಳಿಗೆ ಕೇವಲ 3000-4000 ರೂ.ಗಳ ಸ್ಟೈಫಂಡ್ ಹಣ ಕೊಟ್ಟು ಅವರನ್ನು ದುಡಿಸಲಾಗುತ್ತಿದೆ. ತರಬೇತಿಯ ಹೆಸರಿನಲ್ಲಿರುವ ಅವರಿಗೆ ಯಾವ ತರಬೇತಿಯನ್ನೂ ನೀಡುವುದಿಲ್ಲ; ಬದಲಿಗೆ ಕಾಯಂ ನೌಕರರು ಮಾಡುವ ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಿದ್ದಾರೆ. ಹೀಗೆ ಕೆಲವರು ಹತ್ತಾರು ವರ್ಷಗಳಿಂದ ಟ್ರೈನಿಗಳಾಗೇ ದುಡಿಯುತ್ತಿದ್ದಾರೆ. ಅವರನ್ನು ಕಾಯಂ ಮಾಡುವ ಯೋಚನೆಯೇ ಸರ್ಕಾರಕ್ಕೆ ಇದ್ದಂತಿಲ್ಲ. ಈಗಿನ ವೇತನ ಹೆಚ್ಚಳದ ಒಪ್ಪಂದವೂ ಅವರಿಗೆ ಅನ್ವಯವಾಗುವುದಿಲ್ಲ ಎಂದರೆ ಅವರ ದುಸ್ಥಿತಿಗೆ ಕೊನೆಯೆಂದು?

ಇನ್ನು ಮಹಿಳಾ ನೌಕರರ ಗೋಳನ್ನು ಕೇಳುವವರೇ ಇಲ್ಲ. ಮಹಿಳಾ ಉದ್ಯೋಗಿಗಳಿಗೆ ರಾತ್ರಿ ಪಾಳಿಯ ಕೆಲಸವನ್ನು ವಹಿಸುವಂತಿಲ್ಲ, ಜನರಲ್ ಶಿಫ್ಟ್ ಕೆಲಸ ಕೊಡಬೇಕೆಂಬ ಸರ್ಕಾರಿ ನಿಯಮಗಳು, ನ್ಯಾಯಾಲಯದ ಆದೇಶಗಳು ಇದ್ದರೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಪಾಲಿಗೆ ಅವೆಲ್ಲವೂ ಕಾಲಕಸಕ್ಕೆ ಸಮ. ಮಹಿಳೆಯರಿಗೆ ಪ್ರತ್ಯೇಕ ವಿಶ್ರಾಂತಿಗೃಹಗಳ ವ್ಯವಸ್ಥೆಯಿರಬೇಕೆಂಬ ನಿಯಮವಿದ್ದರೂ ಅಧಿಕಾರಿಗಳು ಬಹುಶಃ ಒಮ್ಮೆಯಾದರೂ ನೆನಪಿಸಿಕೊಂಡಂತೆ ಕಾಣುತ್ತಿಲ್ಲ.

ಇನ್ನು ತಮ್ಮ ದುರಾಡಳಿತವನ್ನು, ಭ್ರಷ್ಟಾಚಾರವನ್ನು ಪ್ರಶ್ನಿಸುವ ಧೈರ್ಯ ಮಾಡಿದವರಿಗೆ ಯಾವ ಯಾವ ರೀತಿ ಶಿಕ್ಷೆಗೆ ಒಳಪಡಿಸಬೇಕೆಂಬುದಕ್ಕೆ ಈ ಭ್ರಷ್ಟ ಅಧಿಕಾರಿಗಳ ಕೂಟ ಪ್ರತ್ಯೇಕ ಕಾನೂನು ಸಂಹಿತೆಯನ್ನೇ ಜಾರಿಯಲ್ಲಿಟ್ಟಿದ್ದಾರೆ. ಮನಸೋಇಚ್ಛೆ ದೂರದ ಊರುಗಳಿಗೆ ಎತ್ತಂಗಡಿ ಮಾಡುವುದರಿಂದ ಹಿಡಿದು ಸುಳ್ಳು ಕ್ರಿಮಿನಲ್ ಮೊಕದ್ದಮೆ ಹಾಕುವವರೆಗೂ ತಮ್ಮದೇ ಹಿಟ್ಲರ್ ಕಾನೂನುಗಳನ್ನು ಹೊಂದಿದ್ದಾರೆ. ಕ್ಷುಲ್ಲಕ ನೆಪಗಳನ್ನು ನೀಡಿ ಅಮಾನತು ಮಾಡಿದ, ಕೆಲಸದಿಂದ ವಜಾ ಮಾಡಿದ ಹತ್ತಾರು ದಾರುಣಕತೆಗಳು ಇಲ್ಲಿವೆ.

ಕಾರ್ಮಿಕರಲ್ಲಿ ಐಕ್ಯತೆ ನೆಲೆಸಲಿ

ಕಳೆದ ಹಲವಾರು ದಶಕಗಳಿಂದ ಕೆಎಸ್‌ಆರ್‌ಟಿಸಿಯಲ್ಲಿ ಅನಂತ್ ಸುಬ್ಬರಾವ್[illegible] ನಾಯಕತ್ವದ ಎಐಟಿಯುಸಿ ಕ್ರಿಯಾಶೀಲವಾಗಿದೆ. ಜೊತೆಗೆ ಕೆ.ಎಸ್.ಶರ್ಮಾ ನೇತೃ[illegible] ನೌಕರರ ಮಹಾಮಂಡಳ, ಐಎನ್‌ಟಿಯುಸಿ, ಸಿಐಟಿ[illegible] ಬಿಎಂಎಸ್, ಎಸ್‌ಟಿ-ಎಸ್‌ಟಿ ನೌಕರರ ಸಂಘ[illegible] ಮುಂತಾದ ಸಂಘಟನೆಗಳು ಕಾರ್ಯನಿರತವಾಗಿವೆ. [illegible] ಸಂಘಟನೆಗಳಿದ್ದಾಗ್ಯೂ ಕಾರ್ಮಿಕರ ಪರಿಸ್ಥಿತಿ ದಿನೇ[illegible] ಹೇಳೋರು ಕೇಳೋರು ಇಲ್ಲದಂತಾಗಿದ್ದು ಮಾತ್ರ ಚ[illegible] ದುರಂತ. ಸರ್ಕಾರಗಳು ನಡೆಸಿದ ದಬ್ಬಾಳಿಕೆ [illegible] ಪ್ರಮುಖ ಕಾರಣವೆಂದುಕೊಂಡರೂ ಈ ಹತ್ತು ಹ[illegible] ಸಂಘಟನೆಗಳಲ್ಲಿರುವ ಒಡಕು ಆಡಳಿತ ಮಂ[illegible] ಅನುಕೂಲವನ್ನೇ ಮಾಡಿದೆ. ಮೇಲಾಗಿ ಆಡಳಿತ[illegible] ಕಾರ್ಮಿಕರ ಐಕ್ಯತೆ ಮುರಿಯುವ ಒಡೆದು ಆ[illegible] ನೀತಿಯನ್ನೇ ಮುಂದುವರೆಸಿವೆ.




ಅನಂತ್ ಸುಬ್ಬರಾವ್



ಕೆ.ಎಸ್.ಶರ್ಮಾ

ಇಂಥ ಸಂದಿಗ್ಧ ಸನ್ನಿವೇಶದಲ್ಲೇ ಹಲವ[illegible] ಸಂಘಟನೆಗಳು ಒಂದೇ ವೇದಿಕೆಗೆ ಬಂದು ಹೋರ[illegible] ಸಜ್ಜಾಗಿರುವುದು ಕಾರ್ಮಿಕರಲ್ಲಿ ಹೊಸ ಹುರು[illegible] ಮೂಡಿಸಿದೆ. ಆದರೆ ಕೆಲವು ಸಂಘಟನೆ[illegible] ಕುಂಟುನೆಪಗಳನ್ನು ನೀಡಿ ಆಡಳಿತ ಮಂಡಳಿಯ ರಾಗ[illegible] ಹಾಡುತ್ತಾ, ಮುಷ್ಕರದಿಂದ ದೂರ ಉಳಿಯುವು[illegible] ಹೇಳಿವೆ. ಕಾರ್ಮಿಕರ ಹಿತಕಾಯದೆ ಸುಡುಗ[illegible] ಸಿದ್ಧಾಂತಗಳನ್ನು ಪಠಿಸುವುದರಿಂದ ಯಾರಿಗೂ ಲಾಭ[illegible] ಎಂಬುದನ್ನು ಇವರು ಅರಿಯುವಂಥಾದರೆ ಒಳ್ಳೆಯದು. ಕಾರಣಗಳೇನೇ ಇರ[illegible] ಉಳಿದ ಸಂಘಟನೆಗಳೂ ಸಹಾ ಕಾರ್ಮಿಕರ ಹಿತರಕ್ಷಣೆಗಾಗಿ ಒಗ್ಗೂಡಲಿ, ನೊ[illegible] ಕಾರ್ಮಿಕರಿಗೆ ನ್ಯಾಯ ಸಿಗಲಿ ಎಂಬುದಷ್ಟೇ ನಮ್ಮ ಕಳಕಳಿ.

ಇನ್ನೊಂದು ಎನ್‌ಕೌಂಟರ್? ಬಂಡೆ ಮಂಜನ ಬೇಟೆ ಶುರು!



...ಸೀನನ ಎನ್‌ಕೌಂಟರ್. ಅದಾಗಿ ನಾಲ್ಕೇ ...ರಹಳ್ಳಿಯ ರೈತ ಶಿವಣ್ಣನ ಬಂದೂಕಿಗೆ ಬಲಿಯಾದ ...ದ ಸಿದ್ಧರಾಜು ಮತ್ತು ಕಾಮಾಕ್ಷಿಪಾಳ್ಯದ ಕುಮಾರನ ...ವಾಗಿ ಒಂದಂತೂ ಸಾಬೀತಾಗಿದೆ. ನೆಲಮಂಗಲದ ...ಗೆ ಮೇಜರ್ ಸರ್ಜರಿ ಮಾಡುವಲ್ಲಿ ಸರ್ಕಾರ ...ಜ್ಜೆಯನ್ನೇ ಇಟ್ಟಿದೆ.

...ನರಹಂತಕ ಸೀನನನ್ನು ಬೆಂಗಳೂರು ಗ್ರಾಮಾಂತರ ...ಸರು ಎನ್‌ಕೌಂಟರ್ ಮಾಡಿ ನಿಕಾಲಿ ಮಾಡಿದ್ದು ...ಗೆ ಮಹತ್ಸಾಧನೆಯಾದರೆ, ಬೆನ್ನಲ್ಲೇ ವಡ್ಡರಹಳ್ಳಿ ...ಗುಂಡೇಟಿಗೆ ಬಲಿಯಾದ ಕುಷ್ಟೆಮಾಳದ ಸಿದ್ಧರಾಜು ...ಗಲದ ಮತ್ತೊಬ್ಬ ಪೀಡಕ ಬೆತ್ತನಗೆರೆ ಶಂಕ್ರನ ...ಬಂಟ. ಸೀನನ ಅಕ್ಕನ ಗಂಡ ಹ್ಯಾಡಾಳು ...ಪ್ಪನ ಕೊಲೆ, ಆನಂತರ ವಡೇರಹಳ್ಳಿ ಜಯರಾಮನ ...ರಣಗಳಲ್ಲಿ ಸಕ್ರಿಯವಾಗಿ ಕೈಜೋಡಿಸಿದ್ದ ಸಿದ್ಧರಾಜು ...ಲೆಕ್ಕಾಚಾರವೇ ಬೇರೆ. ನಡೆದದ್ದೇ ಬೇರೆ.

...ಗೂ ಬೆತ್ತನಗೆರೆ ಸೀನನನ್ನು ಪೊಲೀಸರೇ ...ವ್ವಾರಾದ್ದರಿಂದ ಸಹಜವಾಗೇ ಶಂಕ್ರನಿಗೆ ನೆಲಮಂಗಲ ...ಪಟ್ಟ ಬಂದಂತಾಯ್ತು. ಇದೇ ಬಿಸಿಯಲ್ಲಿ ಶಂಕ್ರನ ...ನೆಲಮಂಗಲದ ಸುತ್ತಮುತ್ತಲ ಫಾರ್ಮ್ ಹೌಸ್ ...ಕರು, ಡಾಬಾಗಳು, ಲಾರಿ ಅಡ್ಡೆಗಳಿಂದ ಒಂದು ...ದುಡ್ಡೆತ್ತುವುದು ಶಂಕ್ರನ ಉದ್ದೇಶವಾಗಿತ್ತು. ಅತ್ತ ...ಜೈಲಲ್ಲಿದ್ದುಕೊಂಡೆ ಸಿದ್ಧರಾಜುಗೆ ಫೋನ್ ಮಾಡಿ ...ದು ಗಾಡಿಗಳ ತುಂಬಾ ಹುಡುಗರನ್ನು ರೆಡಿ ...ವಂತೆ ಹೇಳಿದ್ದಾನೆ. ಸಿದ್ಧರಾಜು ಕಾಮಾಕ್ಷಿಪಾಳ್ಯದ ...ಮಾತ್ರವಲ್ಲದೆ ಹ್ಯಾಡಾಳು ಕೃಷ್ಣ ನರಸಾಪುರದ ...ಇತ್ಯಾದಿ ಸರಿಸುಮಾರು 30 ಮಂದಿಯ ಭಯಾನಕ ...ಸೀನನ ಎನ್‌ಕೌಂಟರ್ ನೆಪವಾಗಿಟ್ಟುಕೊಂಡು ...ಗೆ ನಿಂತಿದೆ.

ಪೈಕಿ ನರಸಾಪುರದ ಗೋಪಿ ಅಲಿಯಾಸ್ ...ಪಾಲ್ ದಲಿತ ಜಾಗೃತಿ ಸಮಿತಿ ಅರ್ಥಾತ್ ...ಎಂಬ ರೋಲ್‌ಕಾಲ್ ದಲಿತ ಸಂಘಟನೆಯ ...ಕ್ಷ ತೆರೆಮರೆಯಲ್ಲಿ ಶಂಕರನ ಗ್ಯಾಂಗ್‌ವಾರ್‌ನಲ್ಲಿ ...ದ್ದೇ ಮೇಲುನೋಟಕ್ಕೆ ದಲಿತ ನಾಯಕನ ...ಹಾಕಿದ್ದ ಗೋಪಿಯ ವಸೂಲಿ ಪಡೆಗೆ ವಡ್ಡರ ಹಳ್ಳಿಯ ...ಎಂಬ ಸಾಮಾನ್ಯ ರೈತನೇ ಮುಳುವಾಗುತ್ತಾನೆಂಬ ...ಮಾದರೂ ಎಲ್ಲಿತ್ತು?

...ಡ್ಡರಹಳ್ಳಿಯ ಶಿವಣ್ಣ ಮೂಲತಃ ಚಿತ್ರದುರ್ಗದವನು. ...ಆರು ವರ್ಷದ ಹಿಂದೆ ಕುದೂರು ಪೊಲೀಸ್ ...ವ್ಯಾಪ್ತಿಯ ವಡ್ಡರಹಳ್ಳಿಗೆ ಬಂದು ಅಡಿಕೆ, ತೆಂಗು, ...ಸಾಕಣಿಕೆ ಮಾಡಿಯೇ ಯಶಸ್ವಿ ರೈತ ಎನಿಸಿಕೊಂಡಿದ್ದ. ...ಕಲು ಬುಲೆರೋ ಕಾರು, ಜೊತೆಗೆ ಮಾರುತಿ ವ್ಯಾನು ...ಯನ್ನೆಲ್ಲ ಗಮನಿಸಿದ ಮರಾರಿ ಸ್ವಾಮಿ ಎಂಬ ...ಹಳ್ಳಿಯ ಕಿಡಿಗೇಡಿಯೊಬ್ಬ ಜೈಲಲ್ಲಿದ್ದ ಶಂಕ್ರನಿಗೆ ...ನಿಂದ ಹಫ್ತಾ ವಸೂಲಿ ಮಾಡುವಂತೆ ಹಾಕಿಕೊಟ್ಟಿದ್ದ. ...ಸೀನ ಎನ್‌ಕೌಂಟರ್ ಆದ ಮೂರನೇ ದಿನಕ್ಕೇ ಸಿದ್ಧರಾಜು ಮತ್ತು ಗ್ಯಾಂಗ್ ಶಿವಣ್ಣನ ತೋಟಕ್ಕೆ ನುಗ್ಗಿ ಐದು ಲಕ್ಷದ ಡಿಮ್ಯಾಂಡಿಟ್ಟಿತ್ತು. ಹಿಂದೆ ಒಂದೆರಡು ಬಾರಿ ಪುಡಿಕಾಸನ್ನು ಶಂಕ್ರನ ತಂಡಕ್ಕೆ ಕೊಟ್ಟು ಸಾಗಹಾಕಿದ್ದ ಶಿವಣ್ಣ ಈ ಪಾಟಿ ಮೊತ್ತ ಕೇಳಿದ್ದೇ ಬಿಲ್‌ಕುಲ್ ಆಗೋಲ್ಲ ಎಂದೇ ಸಿದ್ಧರಾಜುನ ಗ್ಯಾಂಗನ್ನು ಸಾಗಹಾಕಿದ್ದ. ಬಾಯಿ ಮಾತಿಗೆ ಜಗ್ಗದೆ ಕಾಸನ್ನೂ ಬಿಚ್ಚದೆ ಮೊಂಡಾಟಕ್ಕಿಳಿದ ಶಿವಣ್ಣನಿಗೆ ಸರಿಯಾದ ಪಾಠ ಕಲಿಸುವ ಪ್ಲಾನ್ ಮಾಡಿಯೇ ಶಂಕ್ರನ ಗ್ಯಾಂಗ್ ಸೆಪ್ಟೆಂಬರ್ 9ರ ಭಾನುವಾರ ರಾತ್ರಿ ವಡ್ಡರಹಳ್ಳಿಯ ತೋಟಕ್ಕೆ ನುಗ್ಗಿದೆ. ಆದರೆ ನಡೆದದ್ದೇ ಬೇರೆ. ಮಗ ಸುಬ್ರಹ್ಮಣ್ಯ ಮತ್ತು ಶಿವಣ್ಣ ಸೇರಿಕೊಂಡು ನಾಲ್ಕು ಗಾಡಿಗಳಲ್ಲಿ ದಾಳಿಯಿಟ್ಟಿದ್ದ ಇಡೀ ಶಂಕ್ರನ ಪಡೆಯನ್ನೇ ಚೆಂಡಾಡಿಬಿಟ್ಟರು. ಸಿದ್ಧರಾಜು ಮತ್ತು ಕುಮಾರ್ ಸ್ಥಳದಲ್ಲೇ ಹೆಣವಾದರೆ ಸುರೇಶ್ ಎಂಬ ಮತ್ತೊಬ್ಬನಿಗೆ ಗುಂಡು ಬಿದ್ದು ಆಸ್ಪತ್ರೆ ಪಾಲಾಗಿದ್ದ.

ಇದು ನೆಲಮಂಗಲದ ರಕ್ತಪಿಪಾಸುಗಳ ಅಟ್ಟಹಾಸಕ್ಕೆ ಕಾಲವೇ ನಿರ್ಧರಿಸಿದ ಶಾಸ್ತಿಯಾಗಿತ್ತು. ಸೀನನ ಎನ್‌ಕೌಂಟರ್ ಮತ್ತು ಅದಕ್ಕೆ ಪ್ರತಿಯಾಗಿ ನಡೆದ ಶಂಕ್ರನ ಬಂಟರ ಶೂಟೌಟ್ ಮೇಲುನೋಟಕ್ಕೆ ಕಾಕತಾಳೀಯ ಘಟನೆಗಳಾಗಿ ಕಂಡರೂ ಈ ಎರಡೂ ಪ್ರಕರಣಗಳ ಹಿಂದಿದ್ದದ್ದು ಅಡಿಷನಲ್ ಎಸ್ಪಿ ನಾಗರಾಜ್!

ಬೆಂಗಳೂರು ಗ್ರಾಮಾಂತರ ಎಸ್ಪಿ ಪ್ರಕಾಶ್‌ರಂಥ ಅಧಿಕಾರಿಯ ಬೆಂಬಲವಿದ್ದುದರಿಂದಲೇ ಅಡಿಷನಲ್ ಎಸ್ಪಿ ಎನ್. ನಾಗರಾಜ್‌ಗೆ ನೆಲಮಂಗಲಕ್ಕೊಂದು ಪರಿಹಾರ ಹುಡುಕಲೇಬೇಕೆಂಬ ಛಲ ಹುಟ್ಟಿದ್ದು. ಬೇರೆಲ್ಲ ಪೊಲೀಸ್ ಅಧಿಕಾರಿಗಳ ಕಾರ್ಯಾಚರಣೆಯೇ ಒಂದು ರೀತಿಯಾದರೆ ನಾಗರಾಜ್‌ರದ್ದು ಕೊಂಚ ವ್ಯತಿರಿಕ್ತ ಶೈಲಿ. ಬೆತ್ತನಗೆರೆ ಸೀನನಿಗಾಗಿ ವಿವಿಧ ಪೊಲೀಸ್ ತಂಡಗಳು ದೂರದ ಕೇರಳ, ಶಿವಮೊಗ್ಗ, ಚಿಕ್ಕಮಗಳೂರು ಎಂದೆಲ್ಲ ನಿದ್ದೆಗೆಟ್ಟು ಹುಡುಕಾಡುತ್ತಿದ್ದರೆ ನಾಗರಾಜ್ ಇನ್ನೆಂಥದೋ ವಾಸನೆ ಹಿಡಿದವರಂತೆ ಸುಂಕದಕಟ್ಟೆಯ ಪಟಾಕಿ ಹನುಮಂತನೆಂಬ ಹಳೇ ಕೇಡಿಯೊಬ್ಬನನ್ನು ಎಳೆತಂದರು.

ಈತ ಹ್ಯಾಡಾಳು ದೇವಿಯ ಹತ್ತಿರದ ಸಂಬಂಧಿ. ಅದರರ್ಥ ಬೆಮೆಲ್ ಹತ್ಯೆಯ ಪ್ರಮುಖ ಆರೋಪಿ ಹ್ಯಾಡಾಳು ಹರ್ಷನ ಜೊತೆಗೆ ಆತ್ಮೀಯತೆಯಿರಲೇಬೇಕೆಂಬ ನಾಗರಾಜ್ ನಿರೀಕ್ಷೆ ನಿಜವಾಗಿತ್ತು. ನಾಗರಾಜ್‌ರ ಕೈಚಳಕಕ್ಕೇ ಪ್ಯಾಂಟಿನಲ್ಲಿ ಉಚ್ಚೆಹೊಯ್ದುಕೊಂಡ ಪಟಾಕಿ ಹನುಮಂತನಿಗೆ ತಾನು ಬಚಾವಾಗಬೇಕೆಂದರೆ ಸೀನನ ಸೀಕ್ರೆಟ್ಟನ್ನು ಬಾಯಿ ಬಿಡಲೇಬೇಕಾಯ್ತು. ತಾವರೆಕೆರೆ ಸಮೀಪದ ಸಿಂಡಿಕೇಟ್ ಕಾಲೋನಿಯ ಒಂಟಿ ಮನೆಯಲ್ಲಿ ಅವಿತು ಕೂತಿದ್ದ ಸೀನನಿಗೆ ಎಲ್ಲ ವ್ಯವಸ್ಥೆಗೆ ಮಾಡುತ್ತಿದ್ದದ್ದೇ ಈತ.

ಹನುಮಂತ ಕೊಟ್ಟ ಕ್ಲೂ ಹಿಡಿದೇ ಕಾರ್ಯಾಚರಣೆ ಗಿಳಿದ ಎಎಸ್ಪಿ ನಾಗರಾಜ್ ಸತತ ಮೂರು ರಾತ್ರಿ ಮತ್ತು ಮೂರು ಹಗಲುಗಳ ಕಾಲ ಹೊಂಚು ಹಾಕಿಯೇ ಸೀನನನ್ನು ನಿಕಾಲಿ ಮಾಡಿಬಿಟ್ಟರು. ಆದರೆ ಸೀನನನ್ನು ಮುಗಿಸಿದ ಮಾತ್ರಕ್ಕೇ ನೆಲಮಂಗಲ ಸರಿಹೋಗುವುದಿಲ್ಲ ಎಂಬುದು ಪೊಲೀಸರಿಗೆ ಚೆನ್ನಾಗಿ ಗೊತ್ತು. ಸೀನನಷ್ಟೇ ಅನಾಹುತಕಾರಿ ಶಂಕ್ರ. ಆತ ನಿಕಾಲಿಯಾಗದೇ ಸೀನನ ಎನ್‌ಕೌಂಟರ್‌ನ ಉದ್ದೇಶ ಈಡೇರುವುದಿಲ್ಲ. ಹಾಗೊಮ್ಮೆ ಶಂಕ್ರ ಮತ್ತು ಸೀನ ತೊಲಗಿದರೆಂದರೂ ಬಂಡೆಮಂಜು ಅವರಷ್ಟೇ ಅಪಾಯಕಾರಿ. ಈ ಮೂವರನ್ನು ನೆಲಮಂಗಲದಿಂದ ಗುಡಿಸಿ ಹಾಕದೆ ರಕ್ತಪಾತಕ್ಕೆ ಕೊನೆಯೆಂಬುದಿಲ್ಲ ಎಂಬುದು ಪೊಲೀಸರಿಗೆ ಚೆನ್ನಾಗಿ ಗೊತ್ತು.

ಹಾಗಂಥ ಶಂಕ್ರ ಪೊಲೀಸರಿಗೆ ಸಿಗಬೇಕಲ್ಲ. ಆತ ಸದ್ಯ ಬೆಳಗಾವಿ ಜೈಲಲ್ಲಿ ಸೇಫಾಗಿದ್ದಾನೆ. ಆತನನ್ನು ಮುಂದ್ಯಾವತ್ತಾದರೂ ವಿಚಾರಿಸಿಕೊಳ್ಳಬಹುದು. ಆದರೆ ಬಂಡೆ ಮಂಜನನ್ನು ಈಗಲ್ಲದೆ ಮತ್ತೆಂದೂ ಹೊಸಕಲಾಗದು!

ಹಾಗೆಂದು ನಿರ್ಧರಿಸಿದ್ದೇ ಗ್ರಾಮಾಂತರ ಪೊಲೀಸರು ಮಂಜನ ಬೇಟೆಗೆ ಯಾವ ಪರಿ ಬಲೆಬೀಸಿದರೆಂದರೆ ಇಡೀ ನೆಲಮಂಗಲದಲ್ಲಿ ಒಬ್ಬೇ ಒಬ್ಬ ಪುಡಿ ರೌಡಿಯೂ ಮನೆ ಬಿಟ್ಟು ಹೊರಬರದಂತಾಯ್ತು. ಒಂದೆಡೆ ಸಿಸಿಬಿ ಪೊಲೀಸರು, ಇನ್ನೊಂದೆಡೆ ಗ್ರಾಮಾಂತರದ ನಾಲ್ಕು ಪೊಲೀಸ್ ತಂಡಗಳು ಜೊತೆಗೆ ಅಡಿಷನಲ್ ಎಸ್ಪಿ ನಾಗರಾಜ್‌ರ ಪ್ರತ್ಯೇಕ ಪಡೆ. ಯಾರ್‍ಯಾರು ಬಿನ್ನಮಂಗಲ ಕೃಷ್ಣಪ್ಪರ ಹತ್ಯೆಗೆ ನೆರವಾಗಿದ್ದರೋ ಅವರೆಲ್ಲ ಒಬ್ಬೊಬ್ಬರಾಗಿ ಬಂದು ಪೊಲೀಸರೆದುರು ಕೈಕಟ್ಟಿ ನಿಂತರೆ ಒಬ್ಬ ಮಾತ್ರ ತನಗೇನೂ ಸಂಬಂಧವಿಲ್ಲ ಎಂಬಂತಿದ್ದು ಬಿಟ್ಟ. ಆತ ಯಂಟಗಾನಹಳ್ಳಿಯ ಪಟೇಲ. ಆ ಕಾಲ ದಿಂದಲೂ ಬೆತ್ತನಗೆರೆ ಸೀನನಿಗೆ ಸಕಲ ಸರಂಜಾಮುಗಳನ್ನು ಒದಗಿಸುತ್ತಲೇ ಬಂದಿದ್ದ. ಒಂದು ಮೂಲದ ಪ್ರಕಾರ ಬೆಮೆಲ್ ಹತ್ಯೆಗೆ ಈತನ ಕ್ವಾಲೀಸ್ ಗಾಡಿ ಕೂಡ ಬಳಕೆಯಾಗಿತ್ತು. ಸದ್ಯ ಬಂಡೆ ಮಂಜನನ್ನು ಈತನೇ ಬಚ್ಚಿಟ್ಟಿರ ಬಹುದೆಂಬ ಸಣ್ಣ ಗುಮಾನಿಯೊಂದು ಪೊಲೀಸರ ತಲೆ ಹೊಕ್ಕಿದೆ.

ಈ ಮಧ್ಯೆ ಕೆಲ ಟೀವಿ ಕ್ರೈಮುಕೋರರನ್ನು ಸಂಪರ್ಕಿಸಿದ ಬಂಡೆ ಮಂಜ ಇನ್ನೆರಡು ದಿನಗಳೊಳಗಾಗಿ ತಾನು ಸರೆಂಡಾ ಗುತ್ತೇನೆಂಬ ಪುಕಾರನ್ನೂ ತೇಲಿಬಿಟ್ಟಿದ್ದಾನೆ. ಅದು ಪೊಲೀಸರ ಗಮನವನ್ನು ಬೇರೆಡೆಗೆ ಸೆಳೆಯುವ ಉಪಾಯವಾ? ಹ್ಯಾಡಾಳು ಹರ್ಷನನ್ನು ತನ್ನ ಜೊತೆಗಿಟ್ಟುಕೊಂಡೇ ಮಂಜ ದಿನಕ್ಕೊಂದು ಜಾಗ ಬದಲಿಸುತ್ತಿದ್ದಾನಾ? ಆತನನ್ನು ಜೆಡಿಎಸ್‌ನ ಎಮ್ಮೆಲ್ಸಿಯೊಬ್ಬರು ಸರೆಂಡರ್ ಮಾಡಿಸಲು ಯತ್ನಿಸುತ್ತಿದ್ದಾರಾ? ಅಥವಾ ಈಗಾಗಲೇ ಮಂಜನನ್ನು ಸೆರೆಹಿಡಿದ ಪೊಲೀಸರು ಅದನ್ನು ರಹಸ್ಯವಾಗಿಟ್ಟು ಆತನನ್ನು ಎನ್‌ಕೌಂಟರ್ ಮಾಡಬೇಕೆ ಬೇಡವೆ ಎಂಬ ಗೊಂದಲ ದಲ್ಲಿರಬಹುದೆ?

ಇಂಥ ಅನೇಕ ಪ್ರಶ್ನೆಗಳಿಗೆ ಉತ್ತರ ಸಿಕ್ಕಲು ಇನ್ನೆರಡು ದಿನ ಹಿಡಿಯಬಹುದು. ಬಹುಶಃ ಗೃಹಮಂತ್ರಿ ಅಶೋಕ್ ಗಟ್ಟಿ ನಿರ್ಧಾರವೊಂದಕ್ಕೆ ಬಂದೇ ಸೀನನ ಎನ್‌ಕೌಂಟರ್‌ಗೆ ಸಮ್ಮತಿಸಿದ್ದಾರೆ. ಇಲ್ಲದಿದ್ದರೆ ಪೊಲೀಸರಿಗೆ ಆ ಮಟ್ಟದ ಧೈರ್ಯವೆಲ್ಲಿತ್ತು? ಇಂಥದೊಂದು ದೃಢ ನಿರ್ಧಾರ ದಿಂದಾಗಿಯೇ ವಡ್ಡರಹಳ್ಳಿಯ ಶಿವಣ್ಣನಿಗೆ ಪೊಲೀಸರು ಧೈರ್ಯ ಕೊಟ್ಟರು. ಇತ್ತ ಬೆತ್ತನಗೆರೆ ಶಂಕ್ರನಿಗೂ ಬಿಸಿ ಮುಟ್ಟಿದೆ. ಅತ್ತ ಸೀನನೂ ನಿಕಾಲಿಯಾಗಿದ್ದಾನೆ. ಸದ್ಯ ಉಳಿದಿರುವುದು ಶಂಕ್ರ ಮತ್ತು ಬಂಡೆ ಮಂಜ ಮಾತ್ರ.

ಸದ್ಯಕ್ಕಂತೂ ಬಂಡೆ ಮಂಜನಿಗೊಂದು ಗತಿ ಕಾಣಿಸಲು ಪೊಲೀಸರು ತುದಿಗಾಲಲ್ಲಿ ನಿಂತಿದ್ದಾರೆ. ಅಥವಾ ಶಂಕ್ರನನ್ನು ನಿವಾರಿಸದೇ ಮಂಜನನ್ನು ತೊಲಗಿಸುವುದು ಬೇಡ ಎಂಬ ತಾಳ್ಮೆಯನ್ನೂ ವಹಿಸಬಹುದು. ಆದರೆ ಮಂಜ ಸುಲಭಕ್ಕೆ ಸಿಗಬೇಕಲ್ಲ. ಆತ ಸೀನನಿಗಿಂತಲೂ ತಲೆಗಾರ ಮತ್ತು ಪಳಗಿದ ಕಲೆಗಾರ. ಟೀವಿ ವರದಿಗಾರನೊಬ್ಬನ ಮೂಲಕ ಪೊಲೀಸರಿಗೆ ಶರಣಾಗುವ ಆತನ ಗೇಮ್‌ಪ್ಲಾನ್ ಫಲಿಸುತ್ತಾ? ಅಥವಾ ಸೀನನಿಗಾದ ಗತಿಯೇ ಆತನಿಗೂ ಕಾದಿದೆಯಾ?

ಉತ್ತರಕ್ಕೆ ಮೂರ್‍ನಾಲ್ಕು ದಿನ ಕಾಯಬೇಕಾಗ ಬಹುದೇನೋ. ಅಡಿಷನಲ್ ಎಸ್ಪಿ ನಾಗರಾಜ್‌ರ ಓಡಾಟ ಮತ್ತು ಅನಗತ್ಯವ ಮೌನದ ಹಿಂದೆ ಇನ್ನೆಂಥದೋ ಎನ್‌ಕೌಂಟರ್ ಉದ್ದೇಶವಿದೆಯೇ?

• ರಾ. ಸೋ.

ಕ್ರೀಡೆ ಹೆಸರಲ್ಲಿ ಕಾಮತ್‌ನ ಕರಾಮತ್!



ಕಾಮತ್

...ಬೆಂಗಳೂರಿನ ಬಿಬಿಎಂಪಿ ಅಂಗಳದಲ್ಲಿ ಬೇನಾಮಿ ...ತ್ತು ಶುರುವಿಟ್ಟುಕೊಂಡಿರುವ ಕಾಮತ್ ಎಂಬಾತ ...ಗ್ಗಿ ಕವಾಯಿ ಕಾಣುತ್ತಿದ್ದಾನೆ. ತಾನೊಬ್ಬ ...ಸಿಯಮ್ ತರಬೇತುದಾರ, ಪುಕ್ಕಟೆ ಮಕ್ಕಳಿಗೆ ತರಬೇತಿ ...ತ್ತೇನೆ ಎಂದೆಲ್ಲ ಅಂಗಲಾಚಿ ಬಿಬಿಎಂಪಿಗೆ ಸೇರಿದ ...ಂಗಣದ ರೂಮಿನ ಕೀಲಿಕೈ ಪಡೆದ ಈತ ಅದೀಗ ...ದ ಜಾಗವೆಂಬಷ್ಟರಮಟ್ಟಿಗೆ ಕೊಬ್ಬಿ ಹೋಗಿರುವುದು ...ಸಿದ್ಧ ಪಟ್ಟಿಗೆ ತರಬೇತಿಯನ್ನೂ ನೀಡದೆ ವಸೂಲಿ ...ಗಿಳಿದಿದ್ದಾನೆ. ಕೇಳಲುಹೋದ ಅಧಿಕಾರಿಗಳಿಂದ ...ದು ಖುದ್ದು ಕಾರ್ಪೋರೇಟರ್‌ವರೆಗೆ ಎಲ್ಲರಿಗೂ ಕ್ಯಾರೆ ...ದೆ ಮೆರೆಯುತ್ತಿರುವುದು ಸೋಜಿಗವೇ ಸರಿ. ಅಷ್ಟಕ್ಕೂ ...ಗೆ ಭಾರೀ ಪೊಲಿಟಿಕಲ್ ಸಪೋರ್ಟ್ ಇದೆಯೆಂಬ ...ದೆ ಬಡುವ ಈತನ ಬೆಂಬಲಕ್ಕೆ ನರಪಿಳ್ಳೆಯೂ ಇಲ್ಲ. ...ರೂ ಈತನನ್ನು ಹೊರಹಾಕುವ ತಾಕತ್ತು ...ಕಾರಿಗಳಿಗಾಗಲಿ, ಕಾರ್ಪೋರೇಟರ್‌ಗಳಿಗಾಗಲಿ ...ದೆಸ್ಸಿಲ್ಲದಂತೂ ಸತ್ಯ.

...ಬಿಬಿಎಂಪಿ ವ್ಯಾಪ್ತಿಯ ಜಯನಗರದಲ್ಲಿ ...ನಿರ್ಮಾಣವಾಗುತ್ತಿರುವ ಎರಡನೇ ಅತಿದೊಡ್ಡ ಸುಸಜ್ಜಿತ ...ಕ್ರೀಡಾಂಗಣವಾದ ಕಿತ್ತೂರು ರಾಣಿ ಚೆನ್ನಮ್ಮ ಆಟದ ...ಮೈದಾನವು ಹೊಸ ರೂಪವನ್ನು ಪಡೆದುಕೊಳ್ಳುತ್ತಿದೆ. ...ಹಾಕಿ, ಥ್ರೋ ಬಾಲ್, ಕಬಡ್ಡಿ, ಕ್ರಿಕೆಟ್, ಅಥ್ಲೆಟಿಕ್ಸ್ ...ಗಳಿಗೆ ಕ್ರೀಡಾಂಗಣವು ವ್ಯವಸ್ಥಿತ ರೀತಿಯಲ್ಲಿ ನಿರ್ಮಾಣವಾಗುತ್ತಿದೆ. ಶೇ. 90ರ ಕಾಮಗಾರಿಯು ಪೂರ್ಣಗೊಂಡಿದ್ದು, ಹೊರಾಂಗಣ ಕ್ರೀಡಾಂಗಣದ ವ್ಯವಸ್ಥೆಯಲ್ಲಿಯೇ ಕ್ರೀಡಾಪಟುಗಳಿಗೆ ತಂಗುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ. ಈಜುಕೊಳ, ಮಳೆನೀರು ಕೊಯ್ಲು ಸೇರಿದಂತೆ ಇದರ ಸುತ್ತಮುತ್ತ ಉತ್ತಮ ಪರಿಸರವೂ ನಿರ್ಮಾಣವಾಗಿದ್ದು, ಒಟ್ಟಿನಲ್ಲಿ ಅಂತರರಾಜ್ಯ ಮಟ್ಟದ ಕ್ರೀಡೆಗಳನ್ನು ನಡೆಸುವಷ್ಟು ಮೇಲ್ದರ್ಜೆಗೇರಿಸುವ ಪ್ರಯತ್ನಗಳು ಭರದಿಂದ ಸಾಗುತ್ತಿವೆ.

ಇದೇ ಕ್ರೀಡಾಂಗಣದ ಕಟ್ಟಡದಲ್ಲಿ ಮಕ್ಕಳು ಮತ್ತು ವಯೋವೃದ್ಧರಿಗೆ ಯೋಗಾಸನ, ಜಿಮ್ನಾಷಿಯಮ್ ತರಬೇತಿ ನೀಡಲು ವಿಶೇಷವಾಗಿ ಒಂದು ರೂಮನ್ನೂ ನಿರ್ಮಿಸಲಾಗಿದೆ. ಈ ಕಾಮತ್ ಸದ್ಯ ವಕ್ಕರಿಸಿರುವುದು ಅದೇ ರೂಮಿಗೆ. ಆರಂಭದಲ್ಲಿ ಬಿಬಿಎಂಪಿ ಸಂಪರ್ಕಿಸಿದ್ದ ಈತ ಕ್ರೀಡಾಂಗಣದಲ್ಲಿ ಕ್ರೀಡೆಗಳನ್ನು ಉಚಿತವಾಗಿ ಕಲಿಸುತ್ತೇನೆಂದು ಕ್ರೀಡಾಂಗಣದಲ್ಲಿರುವ ರೂಮಿನ ಕೀಲಿ ಕೈ ಪಡೆದಿದ್ದ. ಆರಂಭದಲ್ಲಿ ತರಬೇತಿ ನೀಡುವಂತೆ ನಾಟಕ ಮಾಡಿದ ಪರಿಣಾಮವಾಗಿ ಒಂದಷ್ಟು ವಿದ್ಯಾರ್ಥಿಗಳೂ ಬಂದು ಸೇರಿಕೊಂಡಿದ್ದರು. ಪಾಲಿಕೆಯವರೂ ಈತನನ್ನು ನಂಬಿ ಸುಮ್ಮನಾಗಿದ್ದರು.

ಆದರೆ ಕೆಲವೇ ದಿನಗಳಲ್ಲಿ ಆತನ ನಿಜಬಣ್ಣ ಬಯಲಾಗಿತ್ತು, ಅಸಲಿಗೆ ಕಾಸು ಮಾಡುವುದಷ್ಟೇ ಇವನ ಉದ್ದೇಶವಾಗಿತ್ತು, ಹಾಗಾಗಿ ಕಟ್ಟಡ ಗಿಟ್ಟಿಸಿಕೊಳ್ಳಲು ಉಚಿತ ತರಬೇತಿಯೆಂಬ ಡ್ರಾಮಾ ಆಡಿದ್ದ. ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ನಾಮಕಾವಸ್ಥೆಗಾಗಿ ಜಿಮ್ನಾಷಿಯಂ ಹಾಲನ್ನು ತೆರೆಯುತ್ತಾನಾದರೂ ಶ್ರಮವಹಿಸಿ ಕಲಿಸಿಕೊಟ್ಟದ್ದನ್ನು ಕಂಡವರೇ ಇಲ್ಲ. ಅಸಲಿಗೆ ಆತನೊಬ್ಬ ಕ್ರೀಡಾತರಬೇತುದಾರ ಎನ್ನುವುದಕ್ಕೆ ಯಾವ ಪುರಾವೆಯೂ ಇಲ್ಲ. ತರಬೇತಿ ನೀಡುವ ಕುರಿತು ಅವನಿಗೆ ಎಳ್ಳಷ್ಟೂ ಜ್ಞಾನವಿಲ್ಲವೆನ್ನುವುದು ಅವನ ಬಳಿ ಸೇರಿದ ವಿದ್ಯಾರ್ಥಿಗಳಿಗೆ ತಕ್ಷಣವೇ ಗೊತ್ತಾಗಿಹೋಗಿತ್ತು. ಹಾಗಂತೆ ಇವನು ನೀಡುವ ತರಬೇತಿಯ ಕ್ಲಾಸುಗಳಿಗೆ ಗೈರುಹಾಜರಾದರೆ ವಿದ್ಯಾರ್ಥಿಗಳಿಂದ ದಿನವೊಂದಕ್ಕೆ 25 ರೂ.ಗಳು ದಂಡ ವಸೂಲಿ ಮಾಡುತ್ತಾನೆ. ಹೇಗಿದೆ ನೋಡಿ ಇವನ ಉಚಿತ ತರಬೇತಿಯ ಕಸರತ್ತು.



ನಾಗರಾಜ್


ಇಷ್ಟಕ್ಕೂ ಇವನು ನೀಡುತ್ತಿರುವ ತರಬೇತಿಯು ಅವೈಜ್ಞಾನಿಕವಾಗಿದ್ದು ಇವನಿಗೆ ಆ ಕ್ರೀಡೆಗಳ ಬಗ್ಗೆ ಎಳ್ಳಷ್ಟು ಅರಿವಿಲ್ಲ. ಸುಖಾಸುಮ್ಮನೆ ಕ್ರೀಡಾಪಟುಗಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾನೆ. ಅಂದಹಾಗೆ ಪಕ್ಕಾ ಬ್ರಹ್ಮಚಾರಿಯಂತೆ ಪೋಸು ನೀಡುವ ಇವನು ಹಲವಾರು ಕಡೆ ಕೆಟ್ಟ ಹೆಸರಿನ ಲೇಬಲ್ಲನ್ನೂ ಅಂಟಿಸಿಕೊಂಡು ನಾಚಿಕೆಯಿಲ್ಲದೆ ನಟೋರಿಯಸ್ ಆಟಗಳನ್ನೂ ಆಡುತ್ತಿದ್ದಾನೆ.

ಈತ ಬಿಬಿಎಂಪಿ ಜಾಗಕ್ಕೆ ಜಾಂಡ ಹೊಡೆದು ಈಗಾಗಲೇ ಹಲವು ವರ್ಷಗಳೇ ಉರುಳಿವೆ. ದಂಡದ ಹೆಸರಲ್ಲಿ ದುಡ್ಡು ಮಾಡಿಕೊಂಡಿರುವ ಈತ ಈಗ ನಿಧಾನಕ್ಕೆ ಜಾಗವನ್ನೇ ತನ್ನದು ಮಾಡಿಕೊಳ್ಳಲು ಹೊಂಚು ಹಾಕಿರುವಂತಿದೆ. ಈತನ ಬಂಡವಾಳ ಬಯಲಾಗುತ್ತಿದ್ದಂತೆಯೇ ಕಟ್ಟಡವನ್ನು ಖಾಲಿ ಮಾಡಿ ಹೊರನಡೆಯುವಂತೆ ಬಿಬಿಎಂಪಿ ನೋಟಿಸ್ ನೀಡಿತ್ತು. ಅದಕ್ಕೆಲ್ಲ ಈತ ಕಿಮ್ಮತ್ತಿನ ಬೆಲೆ ಕೊಡುತ್ತಿಲ್ಲ. ಯಾರಿಗೂ ಕೇರ್ ಮಾಡದೆ ತನ್ನ ದಂಧೆಯನ್ನು ಮುಂದುವರೆಸಿಕೊಂಡೇ ಬರುತ್ತಿದ್ದಾನೆ. ಪರಿಸ್ಥಿತಿ ಈಗ ಯಾವ ಮಟ್ಟಕ್ಕೆ ಹೋಗಿ ತಲುಪಿದೆಯೆಂದರೆ ಖುದ್ದು ಪಾಲಿಕೆಯೇ ಅವನ ಮುಂದೆ ಮಂಡಿಯೂರಿ ಜಾಗ ಖಾಲಿ ಮಾಡಯ್ಯ ಎಂದು ಬೇಡಿಕೊಳ್ಳುವಂತಾಗಿದೆ. ಈತ ಅದಕ್ಕೂ ಜಗ್ಗುವ ಜಾಯಮಾನದವನಲ್ಲ.

ಇವನು ತರಬೇತಿ ನೀಡುತ್ತೇನೆಂದು ಕಬ್ಜಾ ಮಾಡಿಕೊಂಡಿರುವ ರೂಮಿನ ಪಕ್ಕದಲ್ಲೇ ಬಿಬಿಎಂಪಿ ಸದಸ್ಯರ ಕಚೇರಿಯೂ ಇದೆ. ಅವ್ಯಾವುದರ ಭಯವೂ ಈತನಿಗೆ ಇದ್ದಂತಿಲ್ಲ.

ಒಂದೆರಡು ಬಾರಿ ಈ ಭಾಗದ ಕಾರ್ಪೋರೇಟರ್ ಎನ್. ನಾಗರಾಜು ಕೂಡಾ ಜಾಗ ಖಾಲಿ ಮಾಡಿ ಕೀಲಿಕೈ ವಾಪಸ್ಸು ಮಾಡುವಂತೆ ಮನವಿ, ಧಮಕಿ, ನೋಟಿಸ್, ಎಚ್ಚರಿಕೆ ಎಲ್ಲವನ್ನೂ ನೀಡಿದ್ದಾರೆ. ಆದರೂ ಈತನನ್ನು ಹೊರಹಾಕುವಲ್ಲಿ ಯಾವ ಅಸ್ತ್ರಗಳೂ ವರ್ಕ್‌ಔಟ್ ಆಗಿಲ್ಲ. ಆದಷ್ಟು ಬೇಗ ಈತನನ್ನು ಹೊರಹಾಕದಿದ್ದರೆ ನಕಲಿ ದಾಖಲೆ ಸೃಷ್ಟಿಸಿ ಜಾಗ ತನ್ನದೇ ಎಂದು ವಾದಕ್ಕಿಳಿಯುವ ಸಂಭವವೂ ಇದೆ. ಸರ್ಕಾರಿ ಜಾಗಕ್ಕೆ ಜನ ಹೇಗೆಲ್ಲ ಬೇಲಿ ಸುತ್ತಿಕೊಳ್ಳಬಹುದೆನ್ನುವುದಕ್ಕೆ ಈ ಕಾಮತ್ ಹೊಸ ನಾಂದಿ ಬರೆಯುವ ಸಾಧ್ಯತೆ ನಿಚ್ಚಳವಾಗಿದೆ. ಬಿಬಿಎಂಪಿ ಈಗಲಾದರೂ ಕಠಿಣ ನಿರ್ಧಾರ ತೆಗೆದುಕೊಂಡು ಮುಂದಾಗಿ ಕ್ರೀಡೆಯ ಹೆಸರಲ್ಲಿ ಬೇನಾಮಿ ಆಟಕ್ಕಿಳಿದಿರುವ ಈ ಬೋಗಸ್ ದ್ರೋಣಾಚಾರ್ಯನಿಂದ 2000 ಚದರಡಿಯ ಜಾಗಕ್ಕೆ ವಿಮುಕ್ತಿ ಕೊಡಿಸಬೇಕಿದೆ. ಇಲ್ಲದಿದ್ದರೆ ಆತ ಪಾಲಿಕೆಯನ್ನೇ ಅಲ್ಲಿಂದ ಓಡಿಸುವ ಸಾಧ್ಯತೆಯಿದೆ. ಈ ಬಗ್ಗೆ ಅನುಮಾನವೇ ಇಲ್ಲ!

• ವರದಿಗಾರ



ಸುಸಜ್ಜಿತ ಜಯನಗರ ಸ್ಟೇಡಿಯಂ


ಸದಾಶಿವ ಆಯೋಗದ ವರದಿ ಒಳಿತೋ? ಕೆಡುಕೋ?

ನ್ಯಾ. ಸದಾಶಿವ ಆಯೋಗದ ಶಿಫಾರಸ್ಸುಗಳ ಸಾಧಕ ಬಾಧಕಗಳ
ಕುರಿತ ಚರ್ಚೆಯನ್ನು 'ಲಂಕೇಶ್' ಮುಂದುವರೆಸಿದೆ.
ಅನಿಸಿಕೆಗಳನ್ನು ಲಿಖಿತ ರೂಪದಲ್ಲಷ್ಟರೆ ಅಂಚೆ/ಕೊರಿಯರ್ [illegible]
6604536 ಅಥವಾ Email: glankesh@gmail.com ಕಳುಹಿಸಿ.

ಸಂವಿಧಾನದ ಅನುಚ್ಛೇದ 341(1) ಪ್ರಕಾರ ರಾಷ್ಟ್ರಪತಿಯು ರಾಜ್ಯಪಾಲರ ಸಮ್ಮತಿಯೊಂದಿಗೆ ಪರಿಶಿಷ್ಟ ಜಾತಿಗಳನ್ನು ಮೂಲವಂಶಗಳನ್ನು ಅಥವಾ ಪಂಗಡಗಳನ್ನು ಅಥವಾ ಜಾತಿ ಅಥವಾ ತಂಡದೊಂದಿಗೆ ಗುಂಪುಗಳನ್ನು ಅಧಿಸೂಚನೆಯ ಮೂಲಕ ಉಲ್ಲೇಖಿಸಬಹುದು ಎಂದು ಹೇಳುತ್ತದೆ. ಅದರಂತೆ, 341 (2) ರ ಪ್ರಕಾರ ಅನುಸೂಚಿತ ಜಾತಿಗಳ ಪಟ್ಟಿಯಲ್ಲಿ ಜಾತಿಗಳ ಹೆಸರುಗಳನ್ನು ಸೇರಿಸಬಹುದು ಅಥವಾ ತೆಗೆದುಹಾಕಬಹುದು ಇದರಿಂದಾಗಿ ಪ್ರಬಲವಾದ ಜಾತಿಗಳು ಅವುಗಳ ಪ್ರಗತಿದಾಯಕವಾದ ಏಳ್ಗೆಯ ಅನುಗುಣವಾಗಿ ತೆಗೆದುಹಾಕಬಹುದು ಹಾಗೂ ಅವುಗಳ ಜಾಗೆಯಲ್ಲಿ ಬಲಹೀನ ಮತ್ತು ಆರ್ಥಿಕ, ಸಾಮಾಜಿಕ ಹಿನ್ನೆಲೆಯಿಲ್ಲದ ಜಾತಿಯ ಜನರ ಏಳ್ಗೆ ಮತ್ತು ಉನ್ನತಿಗಾಗಿ ಕ್ರಮ ಕೈಗೊಳ್ಳಲು ಸರಕಾರದ ಕರ್ತವ್ಯವಾಗಿದೆ ಎಂದು ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ಯಾವ ಜನಾಂಗ ಅಥವಾ ಜಾತಿಯ ಜನರನ್ನು ಅನುಸೂಚಿತ ಜಾತಿಯ ಜನರನ್ನಾಗಿ ಪರಿಗಣಿಸಬೇಕೆಂದು ಅಧಿಕಾರವನ್ನು ರಾಷ್ಟ್ರಪತಿಗೆ ನೀಡಲಾಗಿದ್ದು ಅದು ಅಧಿಸೂಚನೆ ಮೂಲಕ ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರುವುದು ಅಲ್ಲದೆ, ಈ ವಿಷಯಕ್ಕೆ ರಾಷ್ಟ್ರಪತಿಯ ಆಜ್ಞೆಯು ಅಂತಿಮವೆಂದು ಹೇಳುತ್ತದೆ.

ಹೀಗಿರುವಾಗ ದೇಶದಲ್ಲಿ ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ವರ್ಗೀಕರಣ ನಡದೇಯಿಲ್ಲವೊ ಎಂಬ ವಿಷಯ ನಮ್ಮಲ್ಲಿ ಕಾಡುತ್ತಿದೆ. 1979 ರಲ್ಲಿ ಪಂಜಾಬ ಮತ್ತು ಹರಿಯಾಣ ಸರಕಾರವು ಈ ಒಳಮೀಸಲಾತಿಯನ್ನು ಜಾರಿಗೆ ತಂದಿರುವದು, ಅಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ನಡೆಯುತ್ತಿರುವ ಒಳಮೀಸಲಾತಿಗಳ ಗಲಾಟೆ ಪಠ ಮತ್ತು ವಿರೋಧಗಳು ನಡೆದಿರುವುದಿಲ್ಲ, ಎಲ್ಲರೂ ಒಟ್ಟುಗೂಡಿ ಮೀಸಲಾತಿಯ ಸವಿಯನ್ನು ಉಪಯೋಗಿಸುತ್ತಿದ್ದಾರೆ. 1994-95ರಲ್ಲಿ ಆಂಧ್ರ ಪ್ರದೇಶದಲ್ಲಿ ಶ್ರೀ ಮಂದಾ ಕೃಷ್ಣ ಮಾದಿಗ ಅವರ ನೇತೃತ್ವದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ಸಂಘಟನೆಯು ರಾಜ್ಯವ್ಯಾಪಿ ಪಸರಿಸಿಕೊಂಡು ಹಲವಾರು ತೆರನಾದ ಹೋರಾಟದ ಫಲವಾಗಿ, ಶ್ರೀ ಚಂದ್ರಬಾಬು ನಾಯ್ಡುರವರ ಮುಖ್ಯಮಂತ್ರಿಗಳು ಇದ್ದ ಸಂದರ್ಭದಲ್ಲಿ ರಾಜ್ಯ ವಿಧಾನಸಭೆಯಲ್ಲಿ ಒಳಮೀಸಲಾತಿಯ ವಿಷಯವು ಪಾಸಾಗಿ, ಆದೇಶ ಹೊರಬಿದ್ದು, ಶೈಕ್ಷಣಿಕ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿಗೆ ಆರ್ಥಿಕ, ಸಾಮಾಜಿಕ ಹಿನ್ನೆಲೆಯಿಂದ ಬಳಲುತ್ತಿದ್ದ ಮಾದಿಗ ಮತ್ತು ಅದರ ಉಪಜಾತಿಗಳಿಗೆ ಶೇಕಡಾ 8 ರಷ್ಟನ್ನು ಪಡೆದುಕೊಳ್ಳುವಲ್ಲಿ ಸಫಲವಾಯಿತು.

ಸಂವಿಧಾನವು 1950 ರಲ್ಲಿ ಜಾರಿಗೊಂಡ ಮೇಲೆ, ಪರಿಶಿಷ್ಟ ಜಾತಿಯವರಿಗೆ ಶೇಕಡಾ 15 ರ ಮೀಸಲಾತಿಯನ್ನು ಕಲ್ಪಿಸಲಾಯಿತು. 1975 ರವರೆಗೆ ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಕೆಲವೇ ಕೆಲವು ಜಾತಿಗಳು ಇದ್ದವು. ಇಡೀ ಭರತ ಖಂಡದಲ್ಲಿ ಕೆಲವೊಂದು ರಾಜ್ಯಸರಕಾರಗಳು ಮೀಸಲಾತಿಯ ಅನುಷ್ಠಾನದಲ್ಲಿ ವೈಫಲ್ಯವನ್ನು ಸೂಚಿಸಿದವು. ಕೇಂದ್ರ ಸರಕಾರದ ಸೇವೆಗಳಲ್ಲಿ ಪರಿಶಿಷ್ಟ ಜಾತಿಯವರು ಹೊಂದಿರುವ ಮೀಸಲು ಪ್ರಮಾಣ ಕ್ಲಾಸ್ -1 ರಲ್ಲಿ ಪ್ರಮಾಣ 1 ರಿಂದ 6% ಮಾತ್ರ. ಕ್ಲಾಸ್-2 ರಲ್ಲಿ ಪ್ರತಿಶತ ಪ್ರಮಾಣ 10.4% ಕ್ಲಾಸ್-3 ರಲ್ಲಿ ಪ್ರಮಾಣ ಕೇವಲ 14% ಸಂವಿಧಾನ ಜಾರಿಯಾಗಿ 34 ವರ್ಷಗಳು ಕಳೆದ ತರುವಾಯ ಕ್ಲಾಸ್-1 ರ ಹುದ್ದೆಗಳಲ್ಲಿ ಕೇವಲ 6% ಮೀಸಲಾತಿಯನ್ನು ಪಡೆದುಕೊಂಡಂತಾಗಿದೆ. ಹೀಗಿರುವಾಗ ನಿಗದಿಪಡಿಸಿದ ಮೀಸಲಾತಿಯನ್ನು ತೆಗೆದುಕೊಳ್ಳುವಲ್ಲಿ ಅಭ್ಯರ್ಥಿಗಳಿಲ್ಲದ್ದಕ್ಕೆ ಪರಿಶಿಷ್ಟ ಜಾತಿಗಳಲ್ಲಿ ಹಲವಾರು ಸ್ಪೃಶ್ಯ ಜಾತಿಗಳು ಬಹುತೇಕ ಶೇಕಡಾ 13 ರಷ್ಟು ಲಾಭವನ್ನು ಪಡೆದುಕೊಂಡು, ಉದ್ಯೋಗ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಶೇಕಡಾ 90ರಷ್ಟು ಭಾಗವನ್ನು ಉಪಯೋಗಿಸುತ್ತಿದ್ದಾರೆ.



ಕರ್ನಾಟಕ ರಾಜ್ಯದಲ್ಲಿ ದಿವಂಗತ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 1972 ರ ಅವಧಿಯಲ್ಲಿ ಸಾಮಾಜಿಕವಾಗಿ ಹಿಂದುಳಿದ ಜಾತಿ/ವರ್ಗಗಳ ಸಮೀಕ್ಷೆಯನ್ನು ಮಾಡಲು ಎಲ್.ಜಿ.ಹಾವನೂರು ಇವರ ನೇತೃತ್ವದ ಸಮಿತಿಯನ್ನು ನೇಮಿಸಲಾಯಿತು. ಇವರು ಸರಕಾರಕ್ಕೆ 1975 ರಲ್ಲಿ ವರದಿ ಸಲ್ಲಿಸಿದರು. ವರದಿಯಲ್ಲಿ ಹಿಂದುಳಿದ ಜಾತಿ/ವರ್ಗಗಳ ಬಗ್ಗೆ ಅಷ್ಟೇ ಅಲ್ಲದೇ, ಪರಿಶಿಷ್ಟ ಜಾತಿಗಳಲ್ಲಿ ಸ್ಪೃಶ್ಯ ಜಾತಿಗಳನ್ನು ಸೇರ್ಪಡಿಸಲು ಸಲಹೆ ನೀಡಿದ್ದಲ್ಲದೆ ಅದರ ಅನುಷ್ಠಾನದ ಬಗ್ಗೆ ಒತ್ತಿ ಹೇಳಿತು. ಮುಂದುವರೆದು, ಮತಾಂತರಗೊಂಡ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ದಲಿತರಿಗೆ ಅವರ ಎರಡನೇಯ ತಲೆಮಾರಿನವರೆಗೆ ಮೀಸಲಾತಿಯನ್ನು ಕಲ್ಪಿಸಬೇಕೆಂದು ವರದಿಯಲ್ಲಿ ಹೇಳಲಾಯಿತು. ಅದರಂತೆ ಸರಕಾರದ ಆದೇಶಗಳು ಕೂಡಾ ಹೊರಬಿದ್ದವು. 1979 ರಲ್ಲಿ ಉಚ್ಛ ನ್ಯಾಯಾಲಯವು ಸರಕಾರದ ಆದೇಶಗಳನ್ನು ಎತ್ತಿಹಿಡಿದು ಮತಾಂತರಗೊಂಡ ದಲಿತ ಮುಸ್ಲಿಂ ಮತ್ತು ದಲಿತ ಕ್ರಿಶ್ಚಿಯನ್ ಜಾತಿಗಳನ್ನು ತೆಗೆಯಲಾಯಿತು.

ಮುಂದುವರೆದು, 1976ರ ಎಲ್.ಜಿ. ಹಾವನೂರ ವರದಿಯಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಲ್ಲಿ ಮಾದಿಗ ಮತ್ತು ಇತರೆ ಉಪಜಾತಿಗಳು ಶೇಕಡಾ 57.3, ಹೊಲೆಯ ಮತ್ತು ಇತರೆ ಉಪಜಾತಿಗಳು ಶೇಕಡಾ 26.3% ಹಾಗೂ ಇತರೆ ಪರಿಶಿಷ್ಟ ಜಾತಿ ಶೇಕಡಾ 16.4 (ಬೋವಿ, ಕೊರಚ, ಲಂಬಾಣಿ ಇತ್ಯಾದಿ) ಇರುತ್ತಾರೆ. ಕೇವಲ ಹಾವನೂರ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದಿದ್ದಾರೆ, ಶೇಕಡಾ 15ರ ಮೀಸಲು ಪ್ರಮಾಣದಲ್ಲಿ ಮಾದಿಗ ಮತ್ತು ಅದರ ಉಪಜಾತಿಗಳಿಗೆ ಶೇಕಡಾ 8.5% ರಷ್ಟು ಸಿಗುತ್ತದೆ. ಆದರೆ, ಈ ಜಾತಿಯವರಿಗೆ ಇಲ್ಲಿಯವರೆಗೆ ಸಿಕ್ಕಿರುವ ಪಾಲು ಕೇವಲ 1.5% ಮಾತ್ರ.

ಆಂಧ್ರಪ್ರದೇಶ ರಾಜ್ಯದಲ್ಲಿ ಹೋರಾಟದ ಬಿರುಗಾಳಿಯ ಜ್ವಾಲೆಯು ಕರ್ನಾಟಕದಲ್ಲಿ ಪ್ರಸರಿಸಿಕೊಂಡು, ಮಾದಿಗ ಸಮುದಾಯದ ನೇತೃತ್ವದಲ್ಲಿ ಕರ್ನಾಟಕ ಮಾದಿಗ ದಂಡೋರ, ಕರ್ನಾಟಕ ಮಾದಿಗ ಮೀಸಲಾತಿ ಹೋರಾಟ ಸಮಿತಿ ರಚನೆಗೊಂಡು 1995-96 ರ ಸುಮಾರಿನಿಂದ ತೀವ್ರತರವಾದ ಹೋರಾಟ ಹಮ್ಮಿಕೊಂಡಿದ್ದವು. ರಾಜ್ಯದ ಮುಖ್ಯಮಂತ್ರಿಗಳು, ರಾಜಕೀಯ ಪಕ್ಷಗಳು ಈ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದವು. ಕೊನೆಗೆ ರಾಜ್ಯ ಸರಕಾರವು ಎಚ್ಚೆತ್ತುಕೊಂಡು 2006 ರಲ್ಲಿ ನಿವೃತ್ತ ನ್ಯಾಯಮೂರ್ತಿ ಸದಾಶಿವ ಆಯೋಗವನ್ನು ಪರಿಶಿಷ್ಟ ಜಾತಿಗಳ ಶೇಕಡಾ 15 ರ ಮೀಸಲಾತಿ ಪ್ರಮಾಣದಲ್ಲಿ ಇಲ್ಲಿಯವರೆಗೆ ಹಂಚಿಕೆಯಾದ ಪ್ರಮಾಣ, ಸಾಮಾಜಿಕ, ಶೈಕ್ಷಣಿಕ, ಉದ್ಯೋಗ, ರಾಜಕೀಯ ಕ್ಷೇತ್ರದಲ್ಲಿ ಯಾವ ಯಾವ ಜನಾಂಗಕ್ಕೆ ದೊರಕಿದ ಪ್ರಮಾಣವನ್ನು ವೈಜ್ಞಾನಿಕವಾದ ಸಮೀಕ್ಷೆಗೆ ಒಪ್ಪಿತು. ಕಳೆದ 7 ವರ್ಷಗಳವರೆಗೆ ಸುದೀರ್ಘವಾಗಿ ಸಮೀಕ್ಷಿಸಿ ಮನೆಮನೆಯ ಸರ್ವೆಮಾಡಿ, 195 ಪ್ರಶ್ನಾವಳಿಗಳನ್ನು ಕೇಳಿ ಬರಹ ರೂಪದಲ್ಲಿ 96 ಲಕ್ಷ ಪರಿಶಿಷ್ಟ ಜಾತಿ ಜನರನ್ನು ಸಮೀಕ್ಷಿಸಿದ್ದಾರೆ. ಇವರಲ್ಲಿ 6 ಲಕ್ಷ ಜನರು ತಮ್ಮ ಗುರುತನ್ನು ಯಾವ ಉಪಜಾತಿಯಲ್ಲಿ ಸೇರಿಸಬೇಕೆಂದು ಸ್ಪಷ್ಟವಾಗಿ ಹೇಳಿರುವದಿಲ್ಲ, ಒಟ್ಟಾರೆಯಾಗಿ ಶೇಕಡಾ 98 ರಷ್ಟು ಪರಿಶಿಷ್ಟ ಜಾತಿ ಜನರ ಸರ್ವೆ ಕೆಲಸವು ನಡೆದು ತನ್ನ ವರದಿಯನ್ನು ರಾಜ್ಯ ಸರಕಾರಕ್ಕೆ ಜೂನ್ ರಂದು ಸಲ್ಲಿಸಲಾಯಿತು. ಈ ವರದಿಯು ವೈಜ್ಞಾನಿಕವಾದುದ್ದಲ್ಲದೆ, "ಇನ್ನೂ ಮೀಸಲಾತಿಯ ಬಾ ತಟ್ಟದೆ ಇರುವ ಉಪಜಾತಿಗಳ ಬಗ್ಗೆ ಬೆಳಕನ್ನು ಚ



ವರದಿಯ ಅನುಸಾರವಾಗಿ 101 ಪರಿಶಿಷ್ಟಜಾ ಉಪಜಾತಿಗಳಲ್ಲಿ 4 ವರ್ಗಗಳನ್ನು ಮಾಡಿ ಎಡಗೈ ಮಾದಿಗ ಹಾಗೂ ಅದರ ಉಪಜಾತಿಗಳಿಗೆ ಶೇಕ ರಷ್ಟು, ಬಲಗೈ ಪಂಗಡ ಹೊಲೆಯ ಹಾಗೂ ಉಪಜಾತಿಗಳಿಗೆ ಶೇಕಡಾ 5 ರಷ್ಟು, ಇತರೆ ಉಪಜಾತಿ ಶೇಕಡಾ 1 ರಷ್ಟು ಮತ್ತು ಹಾವನೂರ ವರದಿಯ ಮ ಸೇರ್ಪಡೆಗೊಂಡ ಸ್ಪೃಶ್ಯ ಜಾತಿಗಳಿಗೆ ಶೇಕಡಾ 3 ಪ್ರಮಾಣ ನಿಗದಿಪಡಿಸಿದ್ದಾರೆ. ಮುಂದುವರೆದು, ವರದಿಯನ್ನು ಜಾರಿಗೊಳಿಸಲು/ತಿದ್ದುಪಡಿ ಪಾರ್ಲಿಮೆಂಟನಲ್ಲಿ ಸದರಿ ವಿಷಯವನ್ನು ತರಬೇ ರಾಜ್ಯ ಸರಕಾರವು ಈ ದಿಶೆಯಲ್ಲಿ ಕೇಂದ್ರ ಸರ ಮನವಿ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಮುಖ್ಯಮಂತ್ರಿಗಳಾದ ಸದಾನಂದ ಗೌಡರು ಪರಿ ಒಳಮೀಸಲಾತಿಯ ಅನುಷ್ಠಾನವನ್ನು ಅನುಚ್ಛೇದ ರ ತಿದ್ದುಪಡಿಯು ಪಾರ್ಲಿಮೆಂಟಿನಲ್ಲಿ ಪಾಸಾಗಬೇ ಆ ಸಂದರ್ಭದಲ್ಲಿ ಹೇಳಿದ್ದಾರೆ.

ಆಂಧ್ರ ಸರಕಾರವು ಅನುಷ್ಠಾನಗೊಳಿಸಿದ ಒಳ ಲಾತಿ ಆದೇಶಗಳ ವಿರುದ್ಧ ಅಲ್ಲಿಯ ಕೆಲವು ಸಂಘಟ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾ ದವು. ಸರ್ವೋಚ್ಛ ನ್ಯಾಯಾಲಯವು ಆದೇಶ ಶೇಕಡಾ 15 ರ ಮೀಸಲಾತಿಯಲ್ಲಿ ವರ್ಗೀಕರಣ ಬೇಕೆಂದರೆ ಆದು ಪಾರ್ಲಿಮೆಂಟಿಗೆ ಮಾತ್ರ ಇ ಎಂದು ಆಂಧ್ರ ಸರಕಾರವು ಜಾರಿಗೆ ಮಾಡಿದ ಒಳಮೀ ಆದೇಶವನ್ನು ರದ್ದುಗೊಳಿಸಿತು. ಭಯ್ಯಾಲಾಲ ವಿ ಹರಿಕಿಶನ್ ಸಿಂಗ ಎ.ಆಯ್.ಆರ್. 1965 ಎ 1557 ರಲ್ಲಿ ದೋಹಾರ ಜಾತಿಗೆ ಸೇರಿದವನಲ್ಲ ಎಂಬ ಆಕ್ಷೇಪಿಸಲಾಗಿತ್ತು. ಆದರೆ ಸರ್ವೋಚ್ಛ ನ್ಯಾಯಾಲ ಆಕ್ಷೇಪಣೆಯನ್ನು ತಳ್ಳಿಹಾಕುತ್ತಾ, ರಾಷ್ಟ್ರಪತಿಯು ಬ ಸೂಚನೆಯ ಮೂಲಕ ಸೂಚಿಸಲಾದ ಚಮ್ಮಾರ ವ. ಅಥವಾ ಮೋಚಿ ಇವು ಪರಿಶಿಷ್ಟ ಜಾತಿಯ ಉಪ ಎಂದು ತಿಳಿಸಲಾಗಿದೆ. ರಾಷ್ಟ್ರಪತಿಯ ಆಜ್ಞೆಯು ಅಂ ವಾದದ್ದು ಎಂದು ಹೇಳುತ್ತದೆ.

ಈ ದಿಶೆಯಲ್ಲಿ ನ್ಯಾಯಮೂರ್ತಿ ಸದಾಶಿವ ವರದಿ ವೈಜ್ಞಾನಿಕವಾಗಿದ್ದು ಕೂಡಲೇ ರಾಜ್ಯ ಸರಕಾರವು ವರದಿ ಯಥಾವತ್ತಾಗಿ ಒಪ್ಪಿಕೊಂಡು ಕೇಂದ್ರ ಸರಕಾ ಪಾರ್ಲಿಮೆಂಟನಲ್ಲಿ ಸಂವಿಧಾನ ಅನುಚ್ಛೇದ 3 ತಿದ್ದುಪಡಿಗಾಗಿ ಕಳುಹಿಸಬೇಕೆಂದು ಅದರಂತೆ ಈ ಸ ಪ್ರಕಾರ ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಶೇ 22.5 ಇರುತ್ತಾರೆಂಬ ಅಂಶವನ್ನು ಕೂಡಾ ನೀಡಿ ಈ ವಿಷಯವನ್ನು ಅತ್ಯಂತ ಗಂಭೀರವೆಂದು ಪರಿ ಶೇಕಡಾ 15 ಮೀಸಲಾತಿಯ ಪ್ರಮಾಣವನ್ನು 22.5 ಗೆ ಹೆಚ್ಚಿಸಬೇಕೆಂದು ಹಾಗೂ ಜಾರಿಗೊಳಿಸಬೇಕೆಂದು ಸರಕಾರಕ್ಕೆ ವಿನಂತಿಸಲಾಗಿದೆ.

• ಡಾ.ಹನುಮಂತಪ್ಪಯಂಕಪ್ಪ ಈರಾ

ಅವಳುಂಟು ಅವಳ ರೆಕ್ಕೆಯುಂಟು

• ಡಾ.ಕೆ. ಪರೀಘಾ

ಬಾನಂಗಳದಲಿ ಹಾರುವ ಹಕ್ಕಿಗೆ
ಇದೆ ಆದರದೇ ರೆಕ್ಕೆ, ಪುಕ್ಕ, ಕೊಕ್ಕು
ಸ್ವಚ್ಛಂದ ಆಗಸದಲಿ ಗಡಿಗಳಿಲ್ಲದ ಲೋಕ
ನಿರ್ಬಂಧಗಳಾಚೆ ತಂಬೆಲರ ತಾಣ.


ಕಟ್ಟುಕಟ್ಟಳೆ ಲಕ್ಷ್ಮಣರೇಖೆಗಳಾಚೆ
ಬಚ್ಚಿಟ್ಟ ಬೇಗುದಿಗಳ ಗಾಳಿಗೆ ತೂರಿ
ಹಗುರವಾಗುತ್ತಿದ್ದಾಳೆ ಅವಳು
ಇಷ್ಟಿಷ್ಟೇ ಗೋಡೆಗಳ ಲಂಘಿಸುತ್ತಿದ್ದಾಳೆ.

ಕಟ್ಟಿದ ಹುತ್ತದಲಿ ಹಾವಿನ ಸಹವಾಸ,
ಸಾಕಿನ್ನು ಮನೆವಾಸ, ವನವಾಸ,
ಭೂಮಿಸುತರ ಸಹವಾಸವೂ ಸಾಕು.
ರಾಮರಾಜ್ಯದಲ್ಲಿ ಅಚ್ಚೊಲಗೆ ಸಾಕು.

ದುಷ್ಯಂತನ ಪ್ರೇಮದುಂಗುರದಲಿ
ನಂಬಿಕೆಯಿಟ್ಟು ನಿರಾಶಳಾಗಿದ್ದು ಸಾಕು,
ಶಾಪಿತ ಅಹಲ್ಯೆ ಕಲ್ಲಾಗುವುದು ಸಾಕು,
ಸೀರೆ ಸೆಳೆಯುವ ಅಪಮಾನ ಸಾಕು ಸಾಕು.

ಬಿರುಮುಡಿಯ ಎತ್ತಿ ಕಟ್ಟದ ದ್ರೌಪದಿ
ಕಟ್ಟಳೆಗಳ ಮೆಟ್ಟಿ ನಿಂತಿದ್ದಾಳೆ ನೋಡು,
ಲಕ್ಷ್ಮಣ ರೇಖೆಗಳ ದಾಟಿ ಬಂದಿದ್ದಾಳೆ
ಆಕಾಶದಂಗಳಕೆ ಲಗ್ಗೆಯಿಟ್ಟದ್ದಾಳೆ.

ಎಲ್ಲ ನಿರ್ಬಂಧಗಳ ಕಿತ್ತೊಗೆದು
ಸೂರ್ಯ ಶಿಕಾರಿಗೆ ಹೊರಟಿದ್ದಾಳೆ
ಸ್ವಚ್ಛಂದ ಆಗಸದಲ್ಲಿ ಹಾರುತ್ತಿದ್ದಾಳೆ
ಮಾನವತೆಯ ಮೇರುಶಿಖರ ಏರುತ್ತಿದ್ದಾಳೆ,
ಏಕೆಂದರೆ ಅವಳುಂಟು ಅವಳ ರೆಕ್ಕೆಯುಂಟು.




...ವಾಳಜ್ಜಿ ಮತ್ತು ಆದಮಜ್ಜನ ರಂಗಪ್ರವೇಶ

...ಂಗಳೂರಿನ ಉತ್ಸಾಹಿ ಯುವರಂಗಪ್ರತಿಭೆಗಳು ...ದು ಇತ್ತೀಚೆಗೆ ಕಟ್ಟಿದ ಜರ್ನಿ ಥಿಯೇಟರ್ ಗ್ರೂಪ್ ...ಣ(ಜರ್ನಿ)ದ ಮೊದಲ ನಡೆಯನ್ನು 'ಇವಾಳಜ್ಜಿಯೂ ...ನೂ' ಎಂಬ ಪ್ರಖರ ಸ್ತ್ರೀವಾದಿ ಚಿಂತನೆಯ ನಾಟಕದ ... ಯಶಸ್ವಿಯಾಗಿ ದಾಖಲಿಸಿದೆ. ಸುಮಾರು ಒಂದು ... ನಾಟಕಕ್ಕೆ ಗಟ್ಟಿ ಕತೆಯೊಂದರ ಬಲವಿಲ್ಲದಿದ್ದಾಗ್ಯೂ ...ತಿಪಾದಿಸಹೊರಟ ಸ್ತ್ರೀ ಸಮಾನತೆ ಮತ್ತು ಮಹಿಳಾ ...ರ ಚಿಂತನೆಯನ್ನು ಅತ್ಯಪೂರ್ವ ಶೈಲಿಯ ಸಂಭಾಷಣೆ ... ಶ್ರೇಷ್ಠ ಗುಣಮಟ್ಟದ ಅಭಿನಯದ ಮೂಲಕ ...ಂಗಪ್ರತಿಭೆಗಳಾದ ಮಂಜುಳಾ ಸುಬ್ರಹ್ಮಣ್ಯ ಮತ್ತು ವಿದ್ದು ... ಸಮರ್ಥವಾಗಿ ಮಂಡಿಸಿದರು.

...ಂ, ಕ್ರೈಸ್ತ ಮತ್ತು ಯಹೂದಿ ಧರ್ಮಗಳ ನಂಬಿಕೆಯ ... ಆದಂ ಮತ್ತು ಆದಿಮಾತೆ ಈವ್ (ಹವ್ವಾ)ರ ಹೆಸರನ್ನೇ ...ಯಾಗಿಟ್ಟ ಈ ನಾಟಕವನ್ನು ವೀಕ್ಷಿಸಲು ತೆರಳುವ ಮುನ್ನ ...ತನ್ನ ಮನದಲ್ಲಿ ಇದೊಂದು ಆಧುನಿಕತೆಯ ಸ್ಪರ್ಶದ ...ಕ ನಾಟಕವೆಂದೇ ಬಗೆದಿರುತ್ತಾನೆ. ನಾಟಕ ಪ್ರಾರಂಭವಾಗಿ ...ಮುಗಿಯುವವರೆಗೂ ಈ ನಾಟಕದ ಕಥೆ ಮತ್ತು ಥೀಮ್ ಏನಿರಬಹುದೆಂದು ...ಗೆ ಹೊಳೆಯುವುದೇ ಇಲ್ಲ. ಆದರೂ ಕೂಡಾ ಮಂಜುಳಾ ಸುಬ್ರಹ್ಮಣ್ಯ ...ವಿದ್ದು ಉಚ್ಚಿಲ್ ತಮ್ಮ ಅತ್ಯಪೂರ್ವ ಶೈಲಿಯ ಸಂಭಾಷಣೆಯ ... ಪ್ರಾರಂಭದಿಂದಲೇ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ.

...ದೊಂದು ಸ್ತ್ರೀವಾದಿ ಚಿಂತನೆಯ ನಾಟಕವಾದರೂ ಈ ನಾಟಕದ ...ಯೂ ಬಹಳ ಅರ್ಥಗರ್ಭಿತ. ಭೂಮಿಯಲ್ಲಿ ಆದಿಪಿತ ಆದಂ ಮತ್ತು ...ತೆ ಈವ್ ಮೊಟ್ಟಮೊದಲಾಗಿ ಬದುಕು ಕಟ್ಟುವಂತೆಯೇ ಮನುಷ್ಯನ ...ಯೂ ಇಲ್ಲದ ದ್ವೀಪದಲ್ಲಿ ಅವರೀರ್ವರ ಹೊರತಾಗಿ ಬೇರೆ ಮಾನವ ...ಯುವುದಿಲ್ಲ. ಈ ನಿಟ್ಟಿನಲ್ಲಿ 'ಇವಾಳಜ್ಜಿಯೂ ಆದಮಜ್ಜನೂ' ಶೀರ್ಷಿಕೆ ... ಸೂಕ್ತವಾಗಿಯೇ ಇದೆ.



ಹೆಣ್ಣಿನ ಒಡಲಾಳದ ಬೇಗುದಿಯನ್ನು ಮನಮುಟ್ಟುವಂತೆ ಅಭಿನಯಿಸಿ ಮಂಜುಳಾ ತನ್ನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಆದರೆ ಮನುಷ್ಯ ಸಂಕುಲದ ಬೆಳವಣಿಗೆಯಲ್ಲಿ ಸ್ತ್ರೀ ಕುಲದ ಅಗತ್ಯ ಮತ್ತು ಮಹತ್ವದ ಕುರಿತಂತೆ ನಡೆಯುವ ಸಂಭಾಷಣೆಯಲ್ಲಿ ಸ್ತ್ರೀ ಪಾತ್ರಧಾರಿಯ ಧ್ವನಿಯಲ್ಲಿ ಅಗತ್ಯಕ್ಕಿಂತ ತುಸು ಹೆಚ್ಚಿನ ಏರಿಳಿತವಿತ್ತು. ಒಂಟಿ ಮಹಿಳೆಯ ಬದುಕನ್ನು ಎದುರಿಸುವ ರೀತಿಯನ್ನು ನಟಿ ಸಮರ್ಥವಾಗಿ ಅಭಿವ್ಯಕ್ತಿಸಿ ತನ್ನ ಪ್ರತಿಪಾದನೆಗೆ ಹೆಚ್ಚಿನ ತೂಕ ನೀಡಿದ್ದಾರೆ. ಇಲ್ಲಿ ಗಂಡಿನ ಪಲಾಯನವಾದ ಮತ್ತು ಹೆಣ್ಣಿನ ಸ್ಥಾಯಿಭಾವದ ಕುರಿತ ಅಭಿವ್ಯಕ್ತಿಯೂ ಸುಂದರವಾಗಿ ಮೂಡಿಬಂದಿದೆ. ನಿರ್ಜನ ದ್ವೀಪದಲ್ಲಿ ಒಂಟಿಯಾಗಿ ಬದುಕು ಸಾಗಿಸುವ ಹೆಣ್ಣು ತನಗೊಂದು ಸಂಗಾತಿ ಸಿಕ್ಕಾಗ ಅಲ್ಲೇ ಮನುಕುಲದ ಬೆಳವಣಿಗೆಯ ಕುರಿತಂತೆ ಯೋಚಿಸುವುದು ಹೆಣ್ಣಿನ ಸ್ಥಾಯಿಭಾವವಾದರೆ, ಮನುಷ್ಯವಾಸವಿಲ್ಲದ ದ್ವೀಪದಿಂದ ಒಮ್ಮೆ ಪಾರಾಗಿಹೋಗುವುದು ಹೇಗೆಂಬ ಗಂಡಿನ ಚಿಂತೆಯೇ ಇಲ್ಲಿ ಕಾಣಸಿಗುವ ಪಲಾಯನ ವಾದ.

ಸ್ತ್ರೀ ಸಮಾನತೆಯ ಕುರಿತ ಸಂಭಾಷಣೆಯಲ್ಲಿ ಕಟುವಾಗಿಯೇ ಮಾತನಾಡುವ ನಟಿ ಅದರ ಮಧ್ಯೆಯೂ ಸ್ತ್ರೀ ಸಹಜವಾದ ವಾತ್ಸಲ್ಯವನ್ನು ಅಭಿವ್ಯಕ್ತಿಸುವಲ್ಲಿ ಯಶ ಕಂಡಿದ್ದಾರೆ. ಸಂಸಾರದ ಬಂಧನದಲ್ಲಿ ಕೂಡುವ ಕುರಿತಂತೆ ಗಂಡಿನ ತವಕವೂ, ತಾಯ್ತನಕ್ಕೆ ತುಡಿಯುವ ಹೆಣ್ಣಿನ ಅಭಿಲಾಷೆಯೂ ಇಲ್ಲಿ ವಿಭಿನ್ನ ರೀತಿಯಲ್ಲಿ ಕಾಣಸಿಗುತ್ತದೆ.

ಒಂಟಿ ಹೆಣ್ಣು ಮುಂದೆ ತನಗೆ ಹುಟ್ಟಲಿರುವ ಮಗು ಹೆಣ್ಣಾಗಲಿ ಎಂದು ಆಶಿಸುವ ಮೂಲಕ ಸ್ತ್ರೀ ಅಬಲೆಯಲ್ಲ ಎನ್ನುವ ತನ್ನ ವಾದವನ್ನು ಮತ್ತೆ ಪುಷ್ಠೀಕರಿಸುತ್ತಾಳೆ. ಇದು ಸ್ತ್ರೀ ಕುಲದ ಅಸ್ತಿತ್ವ ಮತ್ತು ಅಸ್ಮಿತೆಯ ಪ್ರಬಲ ಪ್ರತಿಪಾದನೆಯೂ ಹೌದು.

ಅತ್ಯಂತ ಸರಳ ವೇಷಭೂಷಣ ಮತ್ತು ಸರಳ ರಂಗಸಜ್ಜಿಕೆಯ ಮೂಲಕ ಕಡಿಮೆ ಖರ್ಚಿನಲ್ಲಿ ರಂಗಪ್ರದರ್ಶನ ಏರ್ಪಡಿಸಿದ ವಿದ್ದು ಉಚ್ಚಿಲ್‌ರ ಕ್ರಿಯಾಶೀಲತೆ ನಾಟಕದುದ್ದಕ್ಕೂ ಗಮನ ಸೆಳೆಯುತ್ತದೆ.

ನಾಟಕದ ಪ್ರಾರಂಭದಲ್ಲಿ ಹೆಣ್ಣು ತನ್ನನ್ನು ಗಂಡೆಂದೂ, ಗಂಡು ತನ್ನ ಹೆಣ್ಣೆಂದೂ ಘೋಷಿಸುವುದು ಮತ್ತು ಅಂತಹ ವೇಷಧಾರಿಕೆಯ ಔಚಿತ್ಯವಂತೂ ಪ್ರಶ್ನಾರ್ಹ.

ಒಂದು ರಂಗಕಲೆಯು ಪರಿಣಾಮಕಾರಿಯಾಗಬೇಕಾದರೆ ಸಭಾಭವನದ ಆಯ್ಕೆಯ ಕುರಿತಂತೆಯೂ ರಂಗತಂಡ ಯೋಚಿಸುವುದು ಅತೀ ಅಗತ್ಯ. ಮಂಗಳೂರು ಸಂತ ಅಲೋಶಿಯಸ್ ಕಾಲೇಜಿನ ಮುಖ್ಯ ಸಭಾಭವನ ನಾಟಕಕ್ಕೆ ತಕ್ಕುದಾಗಿಲ್ಲ. ಹಿಂದಿನ ಸಾಲಿನ ಪ್ರೇಕ್ಷಕ ಕತ್ತು ಉದ್ದ ಮಾಡಿಯೇ ಕೂರಬೇಕಾಗಿತ್ತು. ಕೆಲವೊಂದು ಇತಿಮಿತಿಗಳಿದ್ದಾಗಿಯೂ ಯುವರಂಗಪ್ರತಿಭೆಗಳ ಸಮ್ಮಿಲನದ ಈ ನಾಟಕವನ್ನು ಒಂದು ಉತ್ತಮ ನಾಟಕವೆನ್ನಲಡ್ಡಿಯಿಲ್ಲ.

● ಇಸ್ಮತ್ ಫಜೀರ್

ಅಂತಿಂತಹ ಮೌಲಾನಾ ಇವರಲ್ಲ



ಮೌಲಾನಾ ಹಸ್ರತ್ ಮೊಹಾನಿ

...ಾಂಧಿ ಸ್ವಾತಂತ್ರ್ಯ ಹೋರಾಟದ ನಾಯಕತ್ವ ...ಕೊಂಡ ಮೇಲೆ ಕಾಂಗ್ರೆಸ್‌ನೊಳಗೂ ಹೊರಗೂ ... ವಿರೋಧಿಗಳನ್ನು ಮುಖಾಮುಖಿಯಾಗತೊಡಗಿದ್ದರು. ...ಮ್ಮದ್ ಅಲಿ ಜಿನ್ನಾ ಅವರನ್ನು ಕೋಮು ...ರ್ದದ ಹರಿಕಾರ ಎಂದು ಸರೋಜಿನಿ ನಾಯ್ಡು ...ದ್ದರು. ಆದರೆ ಮೌಲಾನಾ ಮೊಹಮ್ಮದ್‌ಅಲಿ ಹಾಗೂ ...ನಾ ಶೌಕತ್‌ಅಲಿ ಹುಟ್ಟುಹಾಕಿದ್ದ ಖಿಲಾಫತ್ ...ೋಲನವನ್ನು ಗಾಂಧಿ ಬೆಂಬಲಿಸಿದಾಗ ಈ ...ಮ್ಮದ್‌ಅಲಿ ಜಿನ್ನಾ, "ರಾಜಕೀಯದಲ್ಲಿ ಮುಲ್ಲಾ ...ವಿಗಳದೇನು ಕೆಲಸ?" ಎಂದು ಗುಡುಗಿದ್ದರು. ...ಾನಾ ಅಬ್ದುಲ್ ಕಲಂ ಆಜಾದ್‌ರನ್ನು ಕಾಂಗ್ರೆಸ್‌ನ ... ಬಾಯ್' ಎಂದು ಲೇವಡಿ ಮಾಡಿದ್ದರು.

...ಹೌದು, ಇಂದು ಸಹ ಮುಲ್ಲಾ ಮೌಲವಿಗಳು ಇಸ್ಲಾಂ ... ಮುಸಲ್ಮಾನರನ್ನು ಹೊಲಬುಗೆಡಿಸಿದವರೆಂದೇ ಜನ ...ಸುವುದುಂಟು. ಆದರೆ ಇದು ಅರ್ಧ ಸತ್ಯ. ಸ್ವಾತಂತ್ರ್ಯ ...ರ್ವ ಭಾರತದಲ್ಲಿ ಮುಸಲ್ಮಾನರಿಗೆ ಸಮರ್ಥ ನಾಯಕತ್ವ ... ಮಾರ್ಗದರ್ಶನ ಮಾಡಿದ ಅನೇಕ ಮೌಲವಿಗಳಾಗಿ ...ಗಿದ್ದಾರೆ. ಮೊದಲ ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ...ರಿಗೆ ಸಿಂಹಸ್ವಪ್ನವಾಗಿದ್ದ ಮೌಲವಿ ಅಹಮುದುಲ್ಲಾರನ್ನು ...ರ್ಕ್ ಅಂಥವರೇ ಮುಕ್ತಕಂಠದಿಂದ ಪ್ರಶಂಸಿಸಿದ್ದರು. ... ಮೌಲವಿಗಳ ಸಾಲಿನಲ್ಲಿ ಬರುವ ಮೌಲಾನಾ ಹಸ್ರತ್ ...ಾನಿ ಅಲ್ಲಾಹ್‌ನನ್ನುಳಿದು ಇನ್ನಾರಿಗೂ ಹೆದರದ ...ವಾಗಿದ್ದರು.

...ಮೌಲಾನಾರಿಗೆ ಮಕ್ಕಾ ಅಷ್ಟೇ ಅಲ್ಲ ಮಥುರಾ ಹಾಗೂ ...ಶ್ಯ ಕೂಡ ಮಹತ್ವದ್ದಾಗಿದ್ದವು. ನಾನೊಬ್ಬ 'ಸೂಫಿ ...ಮಿನ್' ಎಂತಲೂ 'ಸಮತಾವಾದಿ ಮುಸ್ಲಿಂ' ಎಂದೂ ...ರು ಹೇಳಿಕೊಳ್ಳುತ್ತಿದ್ದರು. ಹಜ್ ಯಾತ್ರೆ ...ಡುತ್ತಿದ್ದಂತೆಯೆ ಅವರು ಕೃಷ್ಣ ಜನ್ಮಾಷ್ಟಮಿಯಂದು ...ರಾಕ್ಕೂ ಹೋಗಿಬರುತ್ತಿದ್ದರು. ಅವರು ಭಾರತೀಯ ...ನಿಸ್ಟ್ ಪಕ್ಷ ಕಟ್ಟಿದವರಲ್ಲಿ ಪ್ರಮುಖರು.

...ಂತಹ ಅಪರೂಪದ ಮೌಲವಿ ಹುಟ್ಟಿದ್ದು ಉತ್ತರ ...ಶದ ಉನ್ನಾವ್ ಜಿಲ್ಲೆಯ ಮೊಹಾನ್‌ನ ಸುಸಂಸ್ಕೃತ ...ಮೀನುದಾರರ ಮನೆತನದಲ್ಲಿ. ಮುಸಲ್ಮಾನ ಸಮುದಾಯದ ...ಷ್ಯ ಉಜ್ವಲವಾಗಬೇಕಾದರೆ ಉರ್ದು ಹಾಗೂ ಇಂಗ್ಲಿಷ್ ... ಅನಿವಾರ್ಯವೆಂದು ಸರ್ ಸೈಯದ್ ಅಹಮದ್ ...ರು ಅಲಿಗಢ್ ಆಂದೋಲನ ಹುಟ್ಟುಹಾಕಿದ್ದರು. ...ಗಢದಲ್ಲಿ ಆಂಗ್ಲೋ ಓರಿಯೆಂಟಲ್ ಕಾಲೇಜನ್ನು ...ಪಿಸಿದ್ದರು (ಅದು ಮುಂದೆ ಅಲಿಗಢ್ ವಿಶ್ವ ...ವಿದ್ಯಾಲಯವಾಯಿತು). ಅಲಿಗಢ್ ಕಾಲೇಜಿನಲ್ಲಿ ಪ್ರವೇಶ ...ಯಲು ಬಂದ ದಿನವನ್ನು ಹಸ್ರತ್ ಮರೆಯಲಿಲ್ಲ. ...ದು ಅವರನ್ನು ಬರಮಾಡಿಕೊಂಡ ವಿದ್ಯಾರ್ಥಿ ವೃಂದಕ್ಕೂ ... ಮರೆಯಲಾಗದ ದಿನ.

... ಕಾಲೇಜಿನಲ್ಲಿ ಓದಲು ಬರುತ್ತಿದ್ದವರು ಆಗರ್ಭ ...ಮಂತರ ಮಕ್ಕಳೇ ಆಗಿದ್ದರು. ಮದುಮಗನಂತೆ ...ಗೊಂಡು ಬಂದಿದ್ದ ಹಸ್ರತ್ ಅವರಿಗೆ ಹಳ್ಳಿಯ ಗಮಾರನಂತೆ ಕಂಡಿರಬೇಕು. ಆ ಶೋಕಿಲಾಲ್‌ಗಳು 'ಬರಬೇಕು ಖಾಲಾ ಜಾನ್ (ಆಂಟಿ)' ಎಂದು ಹಸ್ರತ್‌ರನ್ನು ಕರೆಯತೊಡಗಿದರು. ಮುಂದೆ ಈ ಹಳ್ಳಿಯ ಗಮಾರ ಕಾಲೇಜಿನ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಯೆನಿಸಿಕೊಂಡರು. ಅಧ್ಯಾಪಕರು ಅವರಲ್ಲಿನ ಕವಿಯನ್ನು ಗುರುತಿಸಿದರು. ಕವನ ಬರೆಯಲು ಪ್ರೇರೇಪಿಸಿದರು. ಹಸ್ರತ್ ಬರೆದ ಗಜಲ್‌ಗಳು ತುಂಬ ಜನಪ್ರಿಯವಾಗತೊಡಗಿದವು. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳೆಲ್ಲ ಇನ್ನೂ ಗಡದ್ದಾಗಿ ನಿದ್ರೆ ಮಾಡುತ್ತಿದ್ದಾಗ ಎಲ್ಲಿಂದಲೋ ಕೊಳಲ ನಾದ ಕೇಳಿಬರುತ್ತಿತ್ತು. ಕೊಳಲನೂದುವ ಈ ಕೃಷ್ಣ ಯಾರಪ್ಪಾ ಎಂದು ಅವರಿಗೆಲ್ಲ ಅಚ್ಚರಿ. ಅದು ಹಸ್ರತ್ ಎನ್ನುವುದು ಗೊತ್ತಾಗುತ್ತಲೇ ಅವರನ್ನು ಇನೂ ಹೆಚ್ಚು ಗೌರವಿಸತೊಡಗಿದರು.

ನಂತರ ಅದೇ ಹಸ್ರತ್ ಅಲಿಗಢ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಇನ್ನೂ ಹೆಚ್ಚು ಪ್ರಸಿದ್ಧರಾದರು. ಅವರು 'ಉರ್ದು-ಎ-ಮುಅಲ್ಲಾ' ಪತ್ರಿಕೆ ಆರಂಭಿಸಿದರು. ಹಸ್ರತ್ ಮಹಾನ್ ರಾಷ್ಟ್ರೀಯವಾದಿ ಆಗಿದ್ದರು. ಅವರೆಂದೂ ತಮ್ಮ ಆದರ್ಶಗಳೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಅವರು ಲೋಕಮಾನ್ಯ ತಿಲಕರ ಕಟ್ಟಾ ಅನುಯಾಯಿ ಆಗಿದ್ದರು.

ತಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡ ಒಂದು ಲೇಖನ ಬ್ರಿಟಿಷ್ ಸರಕಾರವನ್ನು ಕೆರಳಿಸಿತ್ತು. ಸಂಪಾದಕರಾಗಿ ಅವರು ಲೇಖನ ಬರೆದವನ ಬಗ್ಗೆ ಮಾಹಿತಿ ನೀಡಲಿಲ್ಲ. ಅದಕ್ಕೆ ಬದಲಾಗಿ ಬಂಧನಕ್ಕೊಳಗಾದರು. ಸೆರೆಮನೆಯಲ್ಲಿ ಅವರು ನಿತ್ಯವೂ ಒಂದು ಮಣ ಗೋಧಿ ಬೀಸಬೇಕಾಗಿತ್ತು. ಸೆರೆಮನೆಯಲ್ಲಿ ಕೈದಿಗಳ ಮೇಲೆ ಎಸಗಲಾಗುತ್ತಿದ್ದ ದೌರ್ಜನ್ಯದ ವಿರುದ್ಧ ಹಸ್ರತ್ ಪ್ರತಿಭಟಿಸಿದರು.

ಸೆರೆಮನೆಯಿಂದ ಹೊರಬಂದ ಮೇಲೆ ಹಸ್ರತ್ ಸೆರೆವಾಸದ ಅನುಭವಗಳನ್ನು ದಾಖಲಿಸಿದರು. ಅವರ 'ಜಿಂದಾಂ ನಾಮಾ'ವನ್ನು ಲಾಲಾ ಲಜಪತ್‌ರಾಯ್ ಇಂಗ್ಲಿಷಿಗೆ ಅನುವಾದಿಸಿದರು. ಅದರ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಎಚ್ಚೆತ್ತುಕೊಂಡಿತು. ಸೆರೆಮನೆ ಸುಧಾರಣೆಗೆ ಮುಂದಾಯಿತು. ಮೌಲಾನಾ ಹಸ್ರತ್ ಮೊಹಾನಿಯವರ ಮೂರು ಖಯಾಲಿಗಳೆಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗುವುದು, ಗಜಲ್ ಬರೆಯುವುದು ಹಾಗೂ ಪ್ರೀತಿಸುವುದು. ಹೌದು, ಉರ್ದು ಭಾಷಿಕ ಕವಿಯಾಗಿರುತ್ತಾನೆ. ಕವಿಯಾದವನು ಗಜಲ್ ಬರೆಯುತ್ತಾನೆ. ಗಜಲ್ ಬರೆಯುವವನು ಪ್ರೀತಿಸುತ್ತಾನೆ ಎನ್ನುವುದು ಅಂದಿನ ಅಲಿಗಢದಲ್ಲಿ ಸಾಮಾನ್ಯವೆನಿಸಿತ್ತು.

ಮೌಲಾನಾ ಎಂದರೆ ಪ್ರೀತಿಸಬಾರದೆ? ಪ್ರೀತಿಸಿದ ಮೇಲೆ ಗಜಲ್ ಬರೆಯಬಾರದೆ? ಮೌಲಾನಾ ಹಸ್ರತ್ ಮೊಹಾನಿ ತಮ್ಮ ಮಡದಿ ನಿಶಾತ್ ಉನ್ನೀಸಾರನ್ನು ತುಂಬ ಪ್ರೀತಿಸುತ್ತಿದ್ದರು. ಮೌಲಾನಾರ ಕಾವ್ಯ ನಮ್ಮ ಕೆ.ಎಸ್. ನರಸಿಂಹಸ್ವಾಮಿ ಅವರನ್ನು ನೆನಪಿಸುತ್ತದೆ. ನರಸಿಂಹಸ್ವಾಮಿ ಅವರ 'ಮೈಸೂರು ಮಲ್ಲಿಗೆ'ಯಂತೆಯೇ ಹಸ್ರತ್ ಮೊಹಾನಿಯವರ



ಬೇಗಂ ನಿಶಾತ್‌ಉನ್ನೀಸಾ

'ಚುಪ್ಕೆ ಚುಪ್ಕೆ ರಾತ್ ದಿನ್ ಆಂಸೂ
ಬಹಾನಾ ಯಾದ್ ಹೈ
ಹಮ್‌ಕೊ ಅಬ್ ಆಶಿಕಿ ಕಾ ವೋ ಜಮಾನಾ ಯಾದ್ ಹೈ'
(ನೆನಪಿದೆ ನೀನು ಕದ್ದುಮುಚ್ಚಿ ಕಣ್ಣೀರ ಸುರಿಸಿದ್ದು
ನೆನಪಿದೆ ನನಗಿನ್ನೂ ಆ ಪ್ರೀತಿ ಪ್ರೇಮದ ದಿನಗಳು)
ಗಜಲ್ ಪ್ರೀತಿ ಪ್ರೇಮದ ಗುಂಗು ಹಿಡಿಸುತ್ತದೆ

ಪ್ರಸಿದ್ಧ ಗಜಲ್ ಗಾಯಕ ಗುಲಾಂ ಅಲಿ ಈ ಗಜಲ್‌ಅನ್ನು ಅಮರಗೊಳಿಸಿದ್ದಾರೆ. ಆ ಮೌಲಾನಾರ ಮಡದಿ ಬೇಗಂ ನಿಶಾತ್‌ಉನ್ನೀಸಾ ತುಂಬ ಸುಶಿಕ್ಷಿತರಾಗಿದ್ದರು. ಮೌಲಾನಾ ಜೈಲಿಗೆ ಹೋಗುವ ಪ್ರಸಂಗ ಬಂದಾಗ ಅವರು ಎದೆಗುಂದಲಿಲ್ಲ. ಅವರ ಅನುಪಸ್ಥಿತಿಯಲ್ಲಿ ನಿಶಾತ್ ಪತ್ರಿಕೆಯ ಸಂಪಾದಕಿಯಾಗಿ ಕೆಲಸ ನಿರ್ವಹಿಸಿದರು. ಹೀಗೆ ಭಾರತದ ಮೊದಲ ಮುಸ್ಲಿಂ ಯುವತಿಯೊಬ್ಬರು ಸಂಪಾದಕಿ ಎನಿಸಿಕೊಂಡ ನಿಶಾತ್ ತಮ್ಮ ಪತ್ರಿಕೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋದರು. ತಮ್ಮ ಪತಿಯ ವಿರುದ್ಧ ಹೂಡಲಾಗಿದ್ದ ಮೊಕದ್ದಮೆಗಳಿಂದಾಗಿ ಕೋರ್ಟ್‌ಗಳಿಗೂ ಅಲೆದರು.


ತಮ್ಮ ಪತಿಯಂತೆಯೆ ನಿಶಾತ್‌ಉನ್ನೀಸಾ ಸಹ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯೆಯಾದರು. ಒಬ್ಬ ಮುಸ್ಲಿಂ ಮಹಿಳೆ ಹೀಗೆ ಕಾಂಗ್ರೆಸ್‌ನ ಮೊದಲ ಸದಸ್ಯೆಯೆನಿಸಿಕೊಂಡರು. ಹಾಗೆ ನೋಡಿದರೆ ಮೌಲಾನಾ ಹಸ್ರತ್ ರಾಜಕೀಯ ಕ್ಷೇತ್ರಕ್ಕೆ ಧುಮುಕಿದ್ದು ಮುಸ್ಲಿಂಲೀಗ್ ಮೂಲಕ. ಆದರೆ ಲೀಗ್ ಜಮೀನುದಾರರ ಪಕ್ಷವೆನ್ನುವುದು ಮನಗಂಡರು. ಮುಸ್ಲಿಂ ಸಮುದಾಯದ ಜನಸಾಮಾನ್ಯರ ಹಿತ ಆ ಪಕ್ಷಕ್ಕೆ ಮುಖ್ಯವಾಗಲಾರದೆಂದು ಲೀಗ್‌ಗೆ ಅಲ್‌ವಿದಾ ಹೇಳಿದ್ದರು.

ನಂತರ ಲೋಕಮಾನ್ಯರ ನಿಧನಾನಂತರ ಹಸ್ರತ್ ಕಾಂಗ್ರೆಸ್‌ನಿಂದ ಹೊರಬರುವುದರ ಬಗ್ಗೆ ಯೋಚಿಸತೊಡಗಿದರು. ಒಮ್ಮೆ ಕಾಂಗ್ರೆಸ್ ಅಧಿವೇಶನ ನಡೆದಾಗ ನಿಶಾತ್‌ಉನ್ನೀಸಾ ರೈತರು ಮತ್ತು ಕಾರ್ಮಿಕರ ಮೆರವಣಿಗೆ ನೇತೃತ್ವ ವಹಿಸಿಕೊಂಡು ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗುತ್ತ ಪೆಂಡಾಲ್‌ನೊಳಗೆ ನುಗ್ಗಬೇಕೆಂದಿದ್ದರು. ಅಷ್ಟರಲ್ಲಿ ಜವಾಹರಲಾಲ್ ನೆಹರು ಸೇವಾದಳದ ಕಾರ್ಯಕರ್ತರಿಗೆ ಸನ್ನೆ ಮಾಡಿದರು. ಬ್ರಿಟಿಷ್ ಸರ್ಕಾರದ ಪೊಲೀಸರಂತೆ ಅವರು ಲಾಠಿ ಚಾರ್ಜ್ ಮಾಡಿ ರೈತರು ಮತ್ತು ಕಾರ್ಮಿಕರನ್ನು ಚದುರಿಸಲೆತ್ನಿಸಿದರು. ಆಗ ಕೆರಳಿ ಕೆಂಡವಾದ ನಿಶಾತ್ 'ಸರ್ವಾಧಿಕಾರಿ ನೆಹರುಗೆ ಧಿಕ್ಕಾರ' ಎಂದು ಕೂಗಿದ್ದು ನೆಹರು ಅವರ ವಿವೇಕವನ್ನು ಜಾಗೃತಗೊಳಿಸಿತೇನೋ. ತಕ್ಷಣ ಅವರು ನಿಶಾತ್‌ರಿಗೆ ಕ್ಷಮೆ ಕೋರಿದರು.

ಇನ್ನು ಶೋಷಿತರ ವಿಮೋಚನೆ ಕಾಂಗ್ರೆಸ್‌ನಿಂದ ಸಾಧ್ಯವಿಲ್ಲವೆಂದು ಹಸ್ರತ್ ಮೊಹಾನಿ ಅವರಿಗೆ ಖಾತ್ರಿಯಾಗಿದ್ದರಿಂದ ಕಮ್ಯುನಿಸ್ಟ್ ಪಕ್ಷ ಕಟ್ಟುವುದಕ್ಕೆ ಮೊಹಾನಿ ತಮ್ಮನ್ನು ಸಮರ್ಪಿಸಿಕೊಂಡರು. ಮುಂದೆ ಎಲ್ಲೇ 'ಇನ್‌ಕ್ವಿಲಾಬ್ ಜಿಂದಾಬಾದ್' ಘೋಷಣೆ ಕೇಳಿ ಬಂದರೂ ಅಲ್ಲಿ ಹಸ್ರತ್ ಇದ್ದೇ ಇರುತ್ತಿದ್ದರು. ಸಂವಿಧಾನ ರಚನಾ ಸಭೆಯ ಸದಸ್ಯರಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಹಸ್ರತ್ ಎಂದೂ ಸರ್ಕಾರದ ಸಂಭಾವನೆ ಸ್ವೀಕರಿಸಲಿಲ್ಲ. ಆ ಸಂದರ್ಭದಲ್ಲೇ ಅವರು ಬಿ.ಆರ್.ಅಂಬೇಡ್ಕರ್‌ರಿಗೆ ಹತ್ತಿರವಾದದ್ದು ತುಂಬ ಸಹಜವಾಗಿತ್ತು. ಹೌದು. 'ಮುಸಿಮರಿಗೆ ಈಗ ಒಬ್ಬ ಅಂಬೇಡ್ಕರ್ ಬೇಕು' ಎನ್ನುವ ಡಾ.ಅಸ್ಗರ್‌ಅಲಿ ಎಂಜಿನಿಯರ್‌ರ ಮಾತು ಸುಳ್ಳಲ್ಲ.

● ಹಸನ್ ನಯೀಂ ಸುರಕೋಡ

ಹುಲಿಗಳ ಖಾಸಗಿ ಕೋಣೆಯಲ್ಲಿ...



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಮುಂದಿನ ಅರ್ಧ ಗಂಟೆಯ ಚಾರಣ ಬಹಳ ತ್ರಾಸದಾಯಕವಾಗಿತ್ತು, ಚಳಿಯನ್ನು ತಡೆಯಲು ಮತ್ತು ಬಟ್ಟೆಯನ್ನು ಒಣಗಿಸಿಕೊಳ್ಳಲು ಬೆಂಕಿ ಹಾಕಿಕೊಳ್ಳಬೇಕಿತ್ತು, ಆದರೆ ನಾವಿದ್ದ ಪರಿಸ್ಥಿತಿಯಲ್ಲಿ ಅದು ಸಾಧ್ಯವಿರಲಿಲ್ಲ. ನಾವು ಆಗ ಯುವಕರಾಗಿದ್ದೆವು ಮತ್ತು ಸಾಹಸಗಳಿಗೆ ಮನಸ್ಸು ಕೊಟ್ಟವರಾದ್ದರಿಂದ ದೈಹಿಕ ತೊಂದರೆಗಳನ್ನು ಸಹಿಸುವ ಮಾನಸಿಕ ದೃಢತೆ ಹೊಂದಿದ್ದೆವು. ಆನೆಗಳು ಮಾತ್ರ ನಮಗೆ ಚಾರಣದ ಖುಷಿ ಕೊಟ್ಟದ್ದು ನಾವು ಇನ್ನೂ ಹೆಚ್ಚಿನದಕ್ಕಾಗಿ ತಹತಹಿಸುತ್ತಿದ್ದೆವು.

ಕಾಡಿನ ದಟ್ಟತೆ ಕಡಿಮೆಯಾಗುತ್ತಾ ಬಂದಿದ್ದರಿಂದ ನಕ್ಷತ್ರಭರಿತ ಶುಭ್ರ ಆಕಾಶ ಗೋಚರಿಸತೊಡಗಿತು. ನಮ್ಮ ಎಡಬಲದಲ್ಲಿದ್ದ ಎರಡೂ ಗುಡ್ಡಗಳೂ ಸ್ವಲ್ಪ ದೂರದಲ್ಲಿ ಸೇರುವಂತೆ ಕಾಣುತ್ತಿದ್ದುದರಿಂದ ಕಣಿವೆ ಚಿಕ್ಕದಾಗುತ್ತಾ ಹೋಗುತ್ತಿತ್ತು.

ಆಗಲೇ ಕೇಳಿತ್ತು ಭಯಾನಕ ಕೂಗು, "ಆಯುಘ್... ಆ..ಯು..ಘ್ ವ್ರೂ...ಗ್". ಇಡೀ ಕಾಡಿಗೆ ಪ್ರತಿಧ್ವನಿಸುತ್ತಿದ್ದ ಆ ಕೂಗು ಹುಲಿಯದಾಗಿತ್ತು, ಅದು ನಮ್ಮ ಎಡಭಾಗದಲ್ಲಿ ಹತ್ತಿರದಲ್ಲೇ ಇತ್ತು. ಪೂರ್ವದಿಕ್ಕಿನಿಂದ ಬಂದ ಅದು ಹಳ್ಳವನ್ನು ಹಾಯ್ದು ಹೋಗುವುದರಲ್ಲಿದ್ದುದರಿಂದ ನಾವು ಟಾರ್ಚ್‌ನ್ನು ಆರಿಸಿ ಅದನ್ನು ಎದುರಾಗಲು ಸರಸರನೆ ಮುನ್ನಡೆದೆವು.

ಹುಲಿ ಪದೇಪದೇ ಕೂಗಿ ಗದ್ದಲವೆಬ್ಬಿಸುತ್ತಿತ್ತು. ಆಗ ನನಗೆ ತಕ್ಷಣ ಹೊಳೆದದ್ದು–ಇದು ಫೆಬ್ರವರಿ ತಿಂಗಳು, ಅಂದರೆ ಹುಲಿಗಳು ಬೆದೆಗೆ ಬರುವ ಕಾಲ. ಇದೊಂದು ಹೆಣ್ಣು ಹುಲಿಯಾಗಿದ್ದು ತನ್ನ ಸಂಗಾತಿಗಾಗಿ ಸಂದೇಶ ರವಾನಿಸುತ್ತಿತ್ತು. ನಿಃಶಸ್ತ್ರನಾಗಿ ಹುಲಿಯನ್ನು ವೀಕ್ಷಿಸಲು ಇದು ಸಕಾಲವಲ್ಲ. ಹಾಗೆ ನೋಡಿದರೆ ಹುಲಿಗಳು ಮಾನವನಿಗೆ ಅಂತಹ ಅಪಾಯಕಾರಿಯೇನಲ್ಲ. ಆದರೆ ನರಭಕ್ಷಕಗಳು ಮತ್ತು ಗಾಯಗೊಂಡ ಅಥವಾ ಬೆದೆಗೆ ಬಂದ ಹುಲಿಗಳ ಬಗೆಗೆ ಎಚ್ಚರ ವಹಿಸಲೇಬೇಕು.

ಹೆಣ್ಣು ಹುಲಿ ತನ್ನ ಆಹ್ವಾನದ ಕರೆಯನ್ನು ನೀಡುತ್ತಲೇ ಇತ್ತು, ಅದು ಹಳ್ಳದ ಎಡಬದಿಯಲ್ಲಿ ಅಂದರೆ ನಾವಿದ್ದ ಕಡೆಯೇ ನಮ್ಮಿಂದ ಸ್ವಲ್ಪ ದೂರದಲ್ಲಿತ್ತು. ಹುಲಿಗಳು ಮಧ್ಯಾಹ್ನದ ಉರಿಬಿಸಿಲಿನಲ್ಲಿ ನೀರಿನಲ್ಲಿ ಬಿದ್ದುಕೊಂಡಿರಲು ಇಷ್ಟಪಡುತ್ತವಾದರೂ ಸದ್ಯಕ್ಕೆ ತುಂಬಿಹರಿಯುತ್ತಿದ್ದ ಹಳ್ಳವನ್ನು ದಾಟುವ ಮನಸ್ಸು ಮಾಡಲಾರದು ಎಂದುಕೊಂಡೆ.

ಅಷ್ಟರಲ್ಲೇ ಮತ್ತೊಮ್ಮೆ ದೊಡ್ಡದಾದ ಹುಲಿಯ ಕೂಗು ಕೇಳಿಸಿತು. ಇದೊಂದು ಗಂಡು ಹುಲಿಯದು ಎಂದು ನಾನು ಸುಲಭವಾಗಿ ಗುರುತಿಸಿದೆ. ಈ ಕೂಗಿಗೆ ಉದ್ರೇಕದ ಮರುಕೂಗಿನಿಂದ ಹೆಣ್ಣು ಹುಲಿ ಉತ್ತರಿಸಿತು.

ನಾವು ಕತ್ತಲಿನಲ್ಲಿದ್ದರೂ ಟಾರ್ಚ್ ಹಾಕುವಂತಿರಲಿಲ್ಲ, ಇದರಿಂದ ಹುಲಿಗಳು ಪ್ರತಿಭಟಿಸುವ ಅಥವಾ ದೂರಹೋಗುವ ಸಾಧ್ಯತೆ ಇತ್ತು. ಹಳ್ಳದ ಭೋರ್ಗರೆತದಲ್ಲಿ ನಮ್ಮ ಹೆಜ್ಜೆಯ ಸದ್ದು ಕೇಳುತ್ತಿರಲಿಲ್ಲವಾದ್ದರಿಂದ ನಿಧಾನವಾಗಿ ಒಂದು ದೊಡ್ಡ ಮರದ ಮರೆಗೆ ಬಂದು ನಿಂತೆವು. ಹುಲಿಗಳು ವಾಸನೆ ಹಿಡಿಯುವುದರಲ್ಲಿ ದುರ್ಬಲವಾದ್ದರಿಂದ ನಮಗೆ ಅಂತಹ ಭಯವೇನೂ ಇರಲಿಲ್ಲ. ಆದರೂ ಗಂಡು ಹುಲಿ ಹಳ್ಳವನ್ನು ದಾಟಿ ನಮ್ಮ ಕಡೆ ಬಂದರೆ ನಾವು ಅವುಗಳಿಗೆ ಸಿಕ್ಕಿಬೀಳದಂತೆ ಎಚ್ಚರ ವಹಿಸಬೇಕಿತ್ತು.

ಆಗ ಹೆಣ್ಣು ಹುಲಿ ಮತ್ತೆ ಕೂಗು ಹಾಕಿತು. ಈ ಬಾರಿಯ ಕೂಗು ಪ್ರೀತಿಯ ಉಲಿತದಂತೆ ಮೃದುವಾಗಿತ್ತು, ಇದೇ ಕೂಗನ್ನು ಮತ್ತೆ ಮತ್ತೆ ಮುಂದುವರೆಸಿದ ಹೆಣ್ಣು ಹುಲಿ ಹಳ್ಳವನ್ನು ದಾಟುವ ಇಂಗಿತ ನೀಡಲಿಲ್ಲ. ಯಾವ ಗಂಡು ಜಾತಿ ತಾನೆ ಹೆಣ್ಣಿನ ಇಂತಹ ಪ್ರೇಮದ ಆಹ್ವಾನವನ್ನು ತಿರಸ್ಕರಿಸಬಲ್ಲದು?

ಗಂಡು ಈ ಬಾರಿ ಮತ್ತೊಮ್ಮೆ ಘರ್ಜಿಸಿ ಸುತ್ತಲೂ ಇರಬಹುದಾಗಿದ್ದ ಇತರ ಗಂಡುಗಳಿಗೆ ಈ ಹೆಣ್ಣಿನ ಮೇಲೆ ತನ್ನ ಅಧಿಕಾರದ ಸೂಚನೆ ನೀಡಿತು. ಹಾಗೆ ನಿಧಾನವಾಗಿ ಹಳ್ಳದ ನೀರನ್ನು ಹಾದು ನಮ್ಮ ಕಡೆ ಬಂದಿತು.

ಇಲ್ಲಿಯವರೆಗೆ ಮರೆಯಲ್ಲೇ ಇದ್ದ ಹೆಣ್ಣು ಗಂಡನ್ನು ಎದುರುಗೊಳ್ಳಲು ಗುಟುರು ಹಾಕುತ್ತಾ ಮುಂದೆ ಬಂದು ಮುಂಗಾಲುಗಳನ್ನು ಎತ್ತಿ ಗಂಡಿನ ಕುತ್ತಿಗೆಗೆ ಏಟು ಹಾಕಿತು. ಇದು ಹುಲಿಗಳು ಮಿಲನದ ಮೊದಲು ನಡೆಸುವ ಉನ್ಮತ್ತ ಕಚ್ಚಾಟಕ್ಕೆ ನಾಂದಿಯಾಗಿತ್ತು. ಇಂತಹ ಕಚ್ಚಾಟದಲ್ಲಿ ಒಬ್ಬರನ್ನೊಬ್ಬರು ಘಾಸಿಗೊಳಿಸುವ ಉದ್ದೇಶವಿರದಿದ್ದರೂ, ಉದ್ರೇಕದಲ್ಲಿ ಕೆಲವೊಮ್ಮೆ ಗಾಯಗಳಾಗಿ ಹೆಣ್ಣು ಕೆರಳಬಹುದು. ಗಂಡು ಸಾಕಷ್ಟು ಸಮಯ ನೋವನ್ನು ಸಹಿಸಿಕೊಂಡು, ಹಿಂಸೆ ಅತಿರೇಕಕ್ಕೆ ಹೋಗುತ್ತದೆ ಅನ್ನಿಸಿದಾಗ ಮಿಲನ ಮಹೋತ್ಸವವನ್ನು ಆಚರಿಸುತ್ತದೆ. ಪದೇಪದೇ ನಡೆಯುವ ಮಿಲನದ ಸಮಯದಲ್ಲಿ ಗಂಡು ಹೆಣ್ಣುಗಳೆರಡೂ ಪರಚುವಿಕೆ ಮತ್ತು ಕಚ್ಚುವಿಕೆಯಿಂದ ರಕ್ತ ಸುರಿಸಬಹುದು. ಇವೆಲ್ಲವೂ ಅವುಗಳ ಬಂಧನವನ್ನು ಗಟ್ಟಿಗೊಳಿಸಿ ಮುಂದೆ ಮರಿಗಳು ಹುಟ್ಟುವವರೆಗೂ ಅವುಗಳನ್ನು ಒಟ್ಟಾಗಿರಿಸುತ್ತದೆ. ಮರಿ ಹುಟ್ಟುವ ಸಮಯದಲ್ಲಿ ಹುಟ್ಟಿದ ಮರಿಗಳನ್ನು ಗಂಡು ತಿಂದುಹಾಕಿಬಿಡಬಹುದೆಂಬ ಭಯದಿಂದ, ಹೆಣ್ಣು ಕೆಲಕಾಲ ದೂರಹೋಗುತ್ತದೆ. ನಂತರ ಮತ್ತೆ ಒಂದುಗೂಡುವ ಗಂಡುಹೆಣ್ಣುಗಳು ಮಕ್ಕಳೊಡನೆ ಸುಮಾರು ಒಂದು ವರ್ಷ ಒಟ್ಟಾಗಿ ಬದುಕುತ್ತವೆ. ಒಟ್ಟು ಸುಮಾರು ಎರಡು ವರ್ಷ ಜೊತೆಗಿರುವ ಅವು ನಂತರ ಹೊಸ ಸಂಗಾತಿಗಳನ್ನು ಹುಡುಕಿ ಹೊರಡುತ್ತವೆ. ಕೆಲವೊಮ್ಮೆ ಮರಿಗಳು ತಾಯಿಯೊಡನೆ ಇನ್ನೂ ಕೆಲವು ತಿಂಗಳು ಇರಬಹುದು.

ಮತ್ತೊಬ್ಬ ಮಜನೂನ ಆಗಮನ

ಹುಲಿಗಳ ಪ್ರೇಮಸಂಗಮ ನಮ್ಮೆದುರು ಅನಾವರಣಗೊಳ್ಳುತ್ತಿತ್ತು. ನಾವು ಅವುಗಳಿಗೆ ಕೆಲವೇ ಗಜಗಳ ದೂರದಲ್ಲಿದ್ದುದರಿಂದ ಅಲ್ಲಿಂದ ಅಲುಗಾಡುವಂತಿರಲಿಲ್ಲ. ನಾವು ಮಾಡುವ ಸ್ವಲ್ಪವೇ ಸದ್ದಿನಿಂದ ತಮ್ಮ ಪ್ರಣಯಭಂಗವಾಗಿದ್ದರೂ ಹುಲಿಗಳು ನಮ್ಮನ್ನು ಉಳಿಸುತ್ತಿರಲಿಲ್ಲ. ಆದ್ದರಿಂದ ನಾವು ಅಡಗಿಕೊಂಡಿದ್ದ ಮರದಡಿಯಲ್ಲೇ ಕುಳಿತು ಹುಲಿಗಳು ಬೇರೆ ದಿಕ್ಕಿನಲ್ಲಿ ಹೋಗಬಹುದೆಂದು ಆಶಿಸುವುದನ್ನಷ್ಟೇ ಸದ್ಯಕ್ಕೆ ನಾವು ಮಾಡಬಹುದಾಗಿದ್ದಿತು.

ಮುಂದಿನ ಒಂದು ತಾಸು ಅವುಗಳ ಪ್ರಣಯ ಕೇಳಿಗೆ ನಾವು ಸಾಕ್ಷಿಯಾದೆವು. ಪ್ರಣಯದ ಉತ್ತುಂಗದಲ್ಲಿ ಗಂಡು ಹೆಣ್ಣಿನ ಕುತ್ತಿಗೆಯನ್ನು ಕಚ್ಚಿ ಹಿಡಿಯುತ್ತಿತ್ತು, ಕೆಲವೊಮ್ಮೆ ಇಡೀ ದೃಶ್ಯ ರಣರಂಗದಂತೆ ಕಾಣುತ್ತಿತ್ತು. ಉರುಳಾಡುತ್ತಾ ಅವು ನಮಗೆ ಕೇವಲ ಹತ್ತು ಗಜದಷ್ಟು ಹತ್ತಿರವೂ ಬಂದಿದ್ದವು. ನಮ್ಮ ಗುರುತನ್ನು ಅವು ಹಿಡಿಯಬಹುದೆಂಬ ಭಯದಲ್ಲಿ ಕೆಲವೊಮ್ಮೆ ನಾವು ಓಡಲು ಸಿದ್ಧರಾಗಿದ್ದರೂ, ಅದು ಇನ್ನೂ ಅಪಾಯಕಾರಿಯಾಗಬಹುದಾಗಿದ್ದರಿಂದ ಸುಮ್ಮನೆ ಕುಳಿತೇ ಇದ್ದೆವು. ಮತ್ತೆ ಮತ್ತೆ ನಡೆದ ಪ್ರಣಯದಿಂದ ದಣಿದ ಹುಲಿಗಳು ವಿರಮಿಸಿದವು. ಮರದಡಿ ಕಲ್ಲಾಗಿ ಕುಳಿತಿದ್ದ ನಮಗೆ ಅವು ಅಲ್ಲಿಂದ ಹೊರಡುವುದೇ ಇಲ್ಲವೇನೋ ಎನ್ನಿಸತೊಡಗಿತ್ತು.



ಆ ರುದ್ರ ಮೌನವನ್ನು ಬೇಧಿಸಿದ್ದು ಆಚೆ ದಡದಿಂದ ಕೇಳಿದ ಮತ್ತೊಂದು ಹುಲಿಯ ಕೂಗು. ಅದು ಇನ್ನೊಂದು ಗಂಡು ಹುಲಿಯಾಗಿದ್ದು ಇಲ್ಲಿ ನಡೆಯುತ್ತಿದ್ದ ಪ್ರಣಯದ ಸದ್ದಿನಿಂದ ಆಕರ್ಷಿತವಾಗಿ, ತನಗೂ ಅವಕಾಶ ಸಿಗಬಹುದೇ ಎಂದು ಅರಸಿ ಬಂದಿತ್ತು! ಕೆರಳಿದ ಮೊದಲನೆಯ ಗಂಡು ಎದ್ದು ನಿಂತು ಹೊಸ ಗಂಡಿಗೆ ದಮಕಿಯ ಗುಟುರು ಹಾಕಿತು. ಹೆಣ್ಣು ಹುಲಿ ಮಾತ್ರ ತನಗಾಗಿ ಕಾದಾಡುವ ಗಂಡುಗಳಿಬ್ಬರ ಹೋರಾಟವನ್ನು ಸವಿಯಲು ಸುಖವಾಗಿ ಆಸೀನಗೊಂಡಿತು!

ಹೊಸ ಗಂಡು ಮತ್ತೆ ಮತ್ತೆ ಹೂಂಕರಿಸುತ್ತಾ ಎದುರಿನ ದಡದಲ್ಲಿ ಪ್ರತ್ಯಕ್ಷವಾಯಿತು. ತನಗಾಗಿ ಹೊಡೆದಾಡಲು ಸಿದ್ಧವಾಗಿರುವ ಗಂಡು ಹುಲಿಗಳನ್ನು ಕಂಡು, ಹೆಣ್ಣು ಹುಲಿಯು ಬಿನ್ನಾಣವನ್ನು ತೋರಿದ್ದಕ್ಕೆ ಕೆರಳಿದ ಹಳೆಯ ಗಂಡು ತಾನೂ ಹೂಂಕರಿಸುತ್ತಾ ಹಳ್ಳವನ್ನು ದಾಟಿ ಯುದ್ಧ ಸನ್ನದ್ಧವಾಯಿತು. ಬಗ್ಗಿ ಕುಳಿತು ಹೊಸ ಗಂಡಿನತ್ತ ಜಿಗಿದೇ ಬಿಟ್ಟಿತು.

ಅರೇ ಇದೇನಿದು, ಇಲ್ಲಿಯವರೆಗೆ ಆಕರ್ಷಕ ಹೆಣ್ಣಿಗಾಗಿ ಹೋರಾಡುವ ಛಲ ತೋರಿದ್ದ ಹೊಸ ಗಂಡಿಗೆ ಅದೇನಾಯಿತೋ, ಜೀವಭಯದಿಂದ ರಣರಂಗಕ್ಕೆ ಬೆನ್ನು ಹಾಕಿ ಓಡಿಯೇಬಿಟ್ಟಿತು! ಹಳೆಯ ಗಂಡು ಜಯಭೇರಿಯನ್ನು ಬಾರಿಸುತ್ತಾ ಅದನ್ನು ಬೆನ್ನಟ್ಟಿತು. ಇದನ್ನೆಲ್ಲಾ ಹಳ್ಳದ ಈಚೆಯ ದಡದಿಂದ ನೋಡುತ್ತಿದ್ದ ಹೆಣ್ಣು ಹುಲಿ, ಯುದ್ಧ ನಡೆಯದುದಕ್ಕೆ ಬೇಸರಗೊಂಡರೂ, ತನ್ನ ಮೊದಲ ಪ್ರೇಮಿಯನ್ನು ಕಳೆದುಕೊಳ್ಳುವ ಭಯದಲ್ಲಿ ಆ ಎರಡು ಗಂಡು ಹುಲಿಗಳು ಓಡಿದ ದಿಕ್ಕಿನಲ್ಲಿಯೇ ತಾನೂ ಓಡಿಹೋಯಿತು.

ಇದೇ ಅವಕಾಶಕ್ಕೆ ಕಾದಿದ್ದ ನಾವು ಪ್ರೇಮಿಗಳ ಜಗಳವನ್ನು ಅವರಿಗೇ ಪರಿಹರಿಸಿಕೊಳ್ಳಲು ಬಿಟ್ಟು, ಹುಲಿಗಳ ವಲಯದಿಂದ ದೂರ ಓಡಿದೆವು. ಮತ್ತೆ ಹುಲಿಗಳ ಗಮನ ಇತ್ತ ಬಾರದಿರಲೆಂದು ಅರ್ಧ ಮೈಲು ಓಡುವವರೆಗೆ ಟಾರ್ಚನ್ನು ಹಾಕಿಕೊಳ್ಳದೆ ಏಳುತ್ತ ಬೀಳುತ್ತ ಸಾಗಿದೆವು.

ಭೈರ ಪೂಜಾರಿ

ನಾವು ಚಾರಣವನ್ನು ಮುಂದುವರೆಸಿ ಹಳ್ಳವನ್ನು ದಾಟಿ, ನಾನು ಹಿಂದೆ ನರಭಕ್ಷಕ ಹುಲಿಯೊಂದನ್ನು ಕೊಂದ ಕೆಂಪೆಕೆರೈ ಎನ್ನುವ ಹಳ್ಳಿಯನ್ನು ತಲುಪಿದೆವು. ಇಲ್ಲಿ ವಾಸವಾಗಿದ್ದ ಭೈರ ಪೂಜಾರಿ ಎನ್ನುವ ನನ್ನ ಹಳೆಯ ಪರಿಚ[illegible] ಎಬ್ಬಿಸಿದೆ. ನನ್ನ ಬೇಟೆಯ ಬರಹಗಳನ್ನು ಓದಿದವರಿಗೆ ಇವನು ಪರಿ[illegible] ಭೈರ ಮತ್ತು ಅವನ ಜಾತಿಯ ಸಾಕಷ್ಟು ಜನ ಶ್ರೀಮಂತ ಜಮೀನುದಾ[illegible] ಹಸು ಮೇಯಿಸುವ ಕೆಲಸ ಮಾಡುತ್ತಿದ್ದರು. ಈ ಜಮೀನುದಾರರು ಹಸುವೊ[illegible] ನಾಲ್ಕಾಣೆಯಂತೆ ತೆರಿಗೆಯನ್ನು ಸರ್ಕಾರಕ್ಕೆ ಕಟ್ಟಿ, ರಕ್ಷಿತ ಅರಣ್ಯದಲ್ಲಿ ದನಕರು[illegible] ಮಳೆಗಾಲದ ಐದು ತಿಂಗಳು ಮೇಯಿಸುವ ಪರವಾನಗಿ ಪಡೆಯುತ್ತಿ[illegible] ಐವತ್ತು ಹಸುಗಳಿಗೆ ಅಧಿಕೃತ ಪರವಾನಗಿ ಪಡೆದು, ಫಾರೆಸ್ಟ್ ಗಾ[illegible] ಐದು ರೂಪಾಯಿ ಲಂಚ ಕೊಟ್ಟು ಇನ್ನೂರು ಹಸುಗಳನ್ನು ಮೇಯಿಸುತ್ತಿ[illegible] ಇದರಿಂದಾಗಿ ಫಾರೆಸ್ಟ್ ಗಾರ್ಡ್‌ಗೆ ತನ್ನ ಸಂಬಳಕ್ಕಿಂತ ಹೆಚ್ಚಿನ ಲಂ[illegible] ಸಿಗುತ್ತಿತ್ತು. ಅವನು ಪರವಾನಗಿ ಇಲ್ಲದ ಜಾಗಗಳಲ್ಲೂ ಮೇಯಿಸಲು ಅ[illegible] ನೀಡಿ, ಜಿಂಕೆ ಮತ್ತಿತರ ಸಸ್ಯಾಹಾರಿ ಪ್ರಾಣಿಗಳಗೆ ಆಹಾ[illegible] ಕೊರತೆಯುಂಟಾಗುವಂತೆ ಮಾಡುತ್ತಿದ್ದನು. ಅದೂ ಅಲ್ಲದೆ ಈ ಜಿಂಕೆ[illegible] ದನಕರುಗಳಿಗೆ ಬರುವ "ಕಾಲುಬಾಯಿ" ರೋಗವನ್ನು ಅಂಟಿಸಿಕೊ[illegible] ಸಾಯುತ್ತಿದ್ದವು. ಆದರೆ ಮಾಂಸಾಹಾರಿ ಪ್ರಾಣಿಗಳು ಕಾಡಿನಲ್ಲಿ ಮೇಯ[illegible] ಬರುವ ಈ ಜಾನುವಾರುಗಳನ್ನು ತಿಂದು ಸಂತೋಷದಿಂದಿದ್ದವು. ವ[illegible] ಹದ್ದುಗಳಂತಹ ಹೆಣವನ್ನು ತಿನ್ನುವ ಪ್ರಾಣಿಗಳಿಗೆ ಯಾವಾಗಲೂ ಭೋ[illegible] ಕೊರತೆ ಇರುತ್ತಿರಲಿಲ್ಲ.

ಇವರೆಲ್ಲಾ ಕಾಡಿನ ಸ್ವಲ್ಪ ಜಾಗವನ್ನು ಸ್ವಚ್ಛ ಮಾಡಿ ಸುತ್ತಲೂ [illegible] ಅಡಿ ಎತ್ತರದ ಮುಳ್ಳಿನ ಬೇಲಿಯನ್ನು ಮಾಡಿಕೊಳ್ಳುತ್ತಿದ್ದರು. ಇದು [illegible] ಸಮಯದಲ್ಲಿ ದನಕರುಗಳನ್ನು ವನ್ಯಮೃಗಗಳಿಂದ ರಕ್ಷಿಸುತ್ತಿತ್ತು. ಆಫ್ರಿ[illegible] ಕಾಡಿನಲ್ಲಿರುವ ಸಿಂಹಗಳಂತೆ ಗುಂಪಿನಲ್ಲಿ ಬೇಟೆಯಾಡಿ ಮುಳ್ಳಿನ ಬೇಲಿಯ[illegible] ಹಾರಿ ತಮ್ಮ ಬೇಟೆಯನ್ನು ಎತ್ತಿಕೊಂಡು ಹೋಗುವ ಪ್ರಾಣಿಗಳು ಇಲ್ಲಿ[illegible] ಇಲ್ಲಿನ ಹುಲಿ, ಚಿರತೆಗಳೆಲ್ಲಾ ಮುಳ್ಳಿನ ಬೇಲಿ ಹಾರಿ ಬರುತ್ತಿಲ್ಲವಾದುದ[illegible] ಈ "ಪಟ್ಟಿ"ಗಳಲ್ಲಿ ದನಕರುಗಳು ಸುರಕ್ಷಿತವಾಗಿರುತ್ತಿದ್ದವು. ಇಡೀ ಕೆಂಪ[illegible] ಹಳ್ಳಿ ಈ ಪಟ್ಟಿಗಳ ಒಂದು ಸಮೂಹವಾಗಿತ್ತು.

ಕೆಲವು ಕಾಲದ ಹಿಂದೆ ಸರ್ಕಾರ ಭಯಂಕರ ರಾಸಾಯನಿಕ ವಿಷವೊಂ[illegible] ಬೆಳೆಗಳ ಕ್ರಿಮಿನಾಶಕವೆಂದು ರೈತಾಪಿ ಜನಗಳಿಗೆ ಮುಫತ್ತಾಗಿ ಕೊಡತೊಡ[illegible] ಯಾವನೋ ಒಬ್ಬ ರೈತ ಇದನ್ನು ಬರೀ ಕ್ರಿಮಿನಾಶಕವಾಗಿಯಲ್ಲದೆ [illegible] ಹಸುಕರುಗಳನ್ನು ಬೇಟೆಯಾಡುವ ಹುಲಿ ಚಿರತೆಗಳನ್ನೂ ಕೊಲ್ಲುವ[illegible] ಬಳಸಬಹುದೆಂದು ಕಂಡುಹಿಡಿದ. (ಇನ್ನೂ ಕೆಲವರು ಇದನ್ನು ಬೇಡದ [illegible] ಮಾವಂದಿರ ಅಥವಾ ಪ್ರೇಮ, ಆಸ್ತಿ ವ್ಯವಹಾರಗಳಲ್ಲಿ ಅಡ್ಡಬರುವವರ ಕೊಲೆ[illegible] ಉಪಯೋಗಿಸತೊಡಗಿದರು.) ಬೇಟೆಯಾಡಿ ಮತ್ತೊಮ್ಮೆ ತಿನ್ನಲು ಅಡಗಿ[illegible] ಪ್ರಾಣಿಗಳ ಶವಕ್ಕೆ ಈ ವಿಷಕಾರಕ ಕೀಟನಾಶಕವನ್ನು ಬೆರೆಸಿ ಹುಲಿ ಚಿರ[illegible] ಸಂತತಿಯನ್ನೇ ನಾಶದ ಅಂಚಿಗೆ ತಂದು ನಿಲ್ಲಿಸಲಾಯಿತು. ಇದರ ಜೊ[illegible] ಇಂತಹ ಹೆಣಗಳನ್ನೇ ಆಹಾರವಾಗಿಸಿಕೊಳ್ಳುವ ನರಿ, ಹದ್ದು ಹಯೀನಾಗ[illegible] ದೊಡ್ಡ ಸಂಖ್ಯೆಯಲ್ಲಿ ನಾಶವಾದವು.

ಆ ನಡುರಾತ್ರಿಯಲ್ಲಿಯೂ ಭೈರ ನನ್ನ ಆಗಮನದಿಂದ ಖುಷಿಯ[illegible] ನೆಲಕ್ಕೆ ಹಣೆಯಿಟ್ಟು ಸಾಂಪ್ರದಾಯಿಕ ರೀತಿಯಲ್ಲಿ ಅವನು ನಮಗೆ ನಮಸ್ಕರಿ[illegible] ನಂತರ, ಕುಳಿತುಕೊಂಡು ನಮ್ಮ ಕಥೆಯನ್ನೆಲ್ಲಾ ಹೇಳಿದನು. ನಾವು ಯಾವ[illegible] ಆಯುಧಗಳಿಲ್ಲದೆ ಚಾರಣಕ್ಕೆ ಹೊರಟ ಬಗ್ಗೆ ಭೈರ ಆಶ್ಚರ್ಯಗೊಂಡ. ಆ[illegible] ಪ್ರಕಾರ ನಾವು ನಮ್ಮನ್ನು ಬಹಳ ಅಪಾಯಕ್ಕೊಡ್ಡಿಕೊಂಡಿದ್ದೆವು ಯಾಕೆಂದರೆ[illegible] ಕಾಡಿನಲ್ಲಿ ಒಂದು 'ರೌಡಿ' ಆನೆ ಅಡ್ಡಾಡುತಿತ್ತು. ಕೆಂಪೆಕೆರೈನವರನ್ನು ಇಲ್ಲಿಯ[illegible] ಅದು ಕೊಲ್ಲದಿದ್ದುದಕ್ಕೆ ಪ್ರಮುಖ ಕಾರಣ ಕಾಡಿನಲ್ಲಿ ಚುರುಕಾಗಿ ಓಡ[illegible] ಅವರ ಶಕ್ತಿ, ನಮಗೆ ಆ ಚುರುಕುತನ ಇಲ್ಲದ್ದರಿಂದ ನಾವು ಆನೆಗೆ ಸು[illegible] ಬಲಿಗಳಾಗಬಹುದೆಂದು ಭೈರ ಹೇಳಿದ. ಆದ್ದರಿಂದ ನಮ್ಮ ಮುಂದಿನ ಚಾರ[illegible] ಬೆಳಗಾಗುವವರೆಗೆ ಕಾಯಬೇಕೆಂದು ಸೂಚಿಸಿದ.

ನಾನು ಬಂದೂಕು ತರದಿದ್ದುದು ಭೈರನಿಗೆ ಇನ್ನೊಂದು ಕಾರಣಕ್ಕಾಗಿ[illegible] ಬೇಸರ ಮೂಡಿಸಿತ್ತು. ಜಿಂಕೆಗಳ ಮಾಂಸದಲ್ಲಿ ತನ್ನ ಪ್ರಾಣವನ್ನೇ ಇಟ್ಟಿದ್ದ [illegible] ಪ್ರತೀ ಬಾರಿಯೂ ಅದನ್ನು ಬೇಟೆಯಾಡುವಂತೆ ನನ್ನನ್ನು ಬೇಡಿಕೊಳ್ಳ[illegible] ಆದರೆ ನಾನು ತಿರಸ್ಕರಿಸುತ್ತಿದ್ದೆ ಯಾಕೆಂದರೆ ಈ ರೀತಿ ಬರೀ ಮಾ[illegible] ಆಸೆಗಾಗಿ ವನ್ಯಮೃಗಗಳನ್ನು ಕೊಲ್ಲುವುದು ನನಗೆ ಒಪ್ಪಿಗೆಯಾಗುತ್ತಿರಲಿಲ್ಲ. ಛಲಬಿ[illegible] ಭೈರ ಪ್ರತೀ ಬಾರಿಯೂ ತನ್ನ ಬೇಡಿಕೆ ಮುಂದಿಡುತ್ತಿದ್ದ. ಈ ಬಾರಿ[illegible] ಅದೇ ಆಸೆಯಲ್ಲಿದ್ದ ಅವನಿಗೆ ನಿರಾಸೆಯೇ ಕಾದಿತ್ತು.

ನನ್ನ ಟೀ ಕುಡಿಯುವ ಆಸೆಯನ್ನು ಗುರುತಿಸಿದ ಭೈರ ಟೀ ತಯಾರಿ[illegible] ವ್ಯವಸ್ಥೆ ಮಾಡಿದ. ನಮ್ಮ ಹುಲಿ ಭೇಟಿಯ ಕಥೆ ಕೇಳಿದ ಆತ ಈಗ[illegible] ಕಾಡಿನಲ್ಲಿ ಉಳಿದಿರುವುದು ಅದೇ ಮೂರು ಹುಲಿಗಳು ಮಾತ್ರ ಎ[illegible] ಹೇಳಿದ. ಅವು ಆಗಾಗ ದನಕರುಗಳನ್ನು ಬೇಟೆಯಾಡುತ್ತಿದ್ದರೂ ಮಾನ[illegible] ತಂಟೆಗೆ ಬಂದಿರಲಿಲ್ಲ.

(ಮುಂದುವರೆಯುವುದು)

ರಗಾಲ ನೋಡಕ್ಕೆ ಇಪ್ಪತ್ತು ಇನೋವ ಬಂದಿದ್ವಂತೆ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ೀರ ಯಾವುದೊ ಅಪರೂಪದ ಕೌತುಕ ನೋಡಿ ುಖಿ ಮಾಡಿಕೊಂಡು ದಾಪುಗಾಲಾಕುತ್ತಾ ಬಂದು, ಾರೆ ಮ್ಯಾಲೆ ಹೈ ಪೀಡಲ್ಲಿ (ಸ್ಪೀಡ್) ಒಂದಿಪ್ಪತ್ತು ತ್ತು ಕಾರೋದೊ ಕಣೆ ಜುಮ್ಮಿ. ಕಾರು ಅಂದ್ರೆ ಕಾರಲ್ಲ, ಒಂದೊಂದು ಕಾರು ಲಾರಿ ಉದ್ದ ಎಂದ.

ಂಥ ಕಾರು ಇಲ್ಯಾಕೆ ಬಂದಿದ್ವೊ? ನಿಜವೇನೊ" ಎಂದಳು ಜುಮ್ಮಿ.

ಾನೆ ನನ್ನ ಕಣ್ಣಾರ ನೋಡಿದೆ ಕಂಡ್ಳೆ. ಈ ಕಡೆ ದ್ದರೆ ಬಾರೆ ಮ್ಯಾಲೆ ಹ್ವಂಟವು ಆ ಕಡೆ ಹದ್ದಳ್ಳಿ ೋಗಗಂಟಾ ನೋಡಿದೆ. ಎಲ್ಲೂ ನಿಲ್ಲಲಿಲ್ಲ" ಎಂದ

ಾವು ಮಿನಿಷ್ಟ್ರ ಕಾರು ಕಣೊ" ಎಂದ ಉಗ್ರಿ.

ಟೊಂತರ ಮಿನಿಟ್ರು ಇಲ್ಯಾಕೆ ಬಂದುರ್ಲ?" ಎಂದ ಾವ.

ರೋಡಲ್ಲಿ ಯಾವುದೊ ಆಪ್‌ಸೆಂಟಾಗಿ (ಆಕ್ಸಿಡೆಂಟ್) ಂದಾಗಿತ್ತೇನೊ. ಅದ್ಕೆ ಇಲ್ಯಾಸಿ ಹೋಗಿರಬೇಕು" ಸೀರ ಊಹಿಸಿದ.

. ಬರಗಾಲ ನೋಡಿಕಂಡೋಗಕ್ಕೆ ಮಿನಿಷ್ಟ್ರು ದ್ರು ಕಣೊ" ಎಂದ ಉಗ್ರಿ.

ದ್ಯಾವ ಮಿನಿಟ್ರಪ್ಪಾ?"

ಶೋಕನೂ, ಯೋಗೇಶ್ವರನೂ ಬತ್ತರೆ ಅಂತ ಗಳು ಮಾತಾಡಿಕತ್ತಾಯಿದ್ರು. ಅವುರು ಇಲ್ಯಾಸಿ ರಬೇಕು."

ಅಂಗೆ ಡಕಾತಿಗಳು ಹೋದಂಗೆ ಹೋದ್ರೆ ು ಯಂಗೆ ಗೊತ್ತಾದತ್ತೆ? ಕಾರಿಂದ ಇಳೀಬೇಕು, ! ಕಷ್ಟಸುಖ ಕೇಳಬೇಕಪ್ಪ"

ೇಳಕ್ಕೆ ಅವುರೇನು ದ್ಯಾವೇಗೌಡ್ರೆ ಮಾವ? ಗೌಡ್ರು ಏನೂ ಮಾಡದುಬ್ಯಾಡ, ಕಷ್ಟಸುಖನಾರ ಆದ್ರೆ ಈ ಬಿಜೆಪಿಗಳು ಇಪ್ಪತ್ತು ಇನೋವಾ ಹುಚ್ಚುಮುಂಡೆ ಮಕ್ಕಳ ತರ ಅಂಗೆ ಪರಾರಿ , ಅದು ಬರದ ಸಮೀಕ್ಷೆ ಆದತೆ. ಅಂತಾ ಚಾರಕ್ಕೆ ಒಂದು ರವುಂಡಾಕಿ, ಮಂಡ್ಯದ ೋಗಿ, ಕಳ್ಳುಬಿರಿಯ ತಿಂದು, ನಿದ್ದೆ ಮಾಡಿ, ಷ್ಟ ರೈತರ ಬದುಕು ಅಂದು ಮನಿಗೋಯ್ತರೆ."

ಅಷ್ಟಲ್ದೆ ಇನ್ನೇನು ಮಾಡ್ತವುಲ ಅವು. ಸಿಡೆಬಿದ್ದಂಗೆ ಅಂಗೇ ಹೋದವೇನೊ. ಬುಡು ಆ ಸುದ್ಯಾಕೆ" ಕಾಳಮಾವ.

ಆ ಎಡೂರಪ್ಪನೂ ತಿರಗಿದ. ಏನು ಮಾಡಿದ್ನೊ ಕತಿಯೊ" ಎಂದ ಸೀರ ಮಾವ.

ಅವುನು ತಿರಗಿದ್ದೆ ನಾಯಿಗೆ ಕ್ಯಲಸಿಲ್ಲ ಕೂರಕ್ಕೆ ಟೈಮಿಲ್ಲ ಗೆ ಕಣೋ. ಪ್ರವಾಹ ಬಂದು ಜನಜಾನುವಾರು ಗಗಂಡೋದಾಗ ಅತ್ತಗೆ ತಿರಗಿ ನೋಡದೋನು ೋಯ್ತನೆ ಅಂದ್ರೆ ಏನನ್ನಬೇಕು."

ಆದೆಯಪ್ಪ, ಮುಖ್ಯಮಂತ್ರಿಯಾದಾಗ ಹೋಗಿದ್ರೆ ಪಾಟಲ್ಲೆ (spot) ಹಿಡಿದು ಹೇಳಬವುದಿತ್ತು, ಈಗೋಗಿ ಏನು ಕ್ವಸ್ತನಿವುನೂ."

"ಥೂ, ಅವುನ ಕತೆ ಬ್ಯಾಡ ಕಣೊ. ನ್ಯನಿಸಿಗಂಡ್ರೆ ನನಿಗೇ ಒಂಥರಾ ಆತದೆ ಇನ್ನ ಆ ಮಣ್ಯಾತ್ಮ ಅದ್ಯಂಗೆ ಜೇವ ಮಡಿಕಂಡಿದ್ದನೊ ಏನೊ."

"ಅಂತದೇನಾಗಿದ್ಲತ್ತ ಅವುನಿಗೆ?"

"ಅಯ್ಯೋ ಕಾಳವಾವ, ಗ್ವಣ್ಣಿಗೆ ಬಿದ್ದ ನೊಣದಂಗಾಗ್ಯವುವೆ. ಅದರ ಜೊತಿಗೆ ಬೇಲೆಕೇರಿ ಮಾರಿ ಬಲೆ ಬಿಗಿ ಆಯ್ತಾ ಅದೆ. ಅದರೊಳಿಕೇನಾರ ಅವುನು ಬಿದ್ದ ಅಂದ್ರೆ ತಗಂಡು ಬರಕ್ಕೆ ಈ ಜನುಮದಲ್ಲಂತೂ ಆಗದಿಲ್ಲ."

"ಬೇಲೆಕೇರಿ ಬಲೆ ಅಂದ್ರೇನ್ಲ?" ಎಂದಳು ಜುಮ್ಮಿ.

"ಅವುನು ಮುಖ್ಯಮಂತ್ರಿ ಆಗಿದ್ದಾಗ ಬಳ್ಳಾರಿ ಅದಿರಾ ಫಾರಿನ್ನಿಗೆ ಸಾಗಿಸ್ತಾಯಿದ್ರು. ಸಾಗಸಬೇಕಾದ್ರೆ ಹಡಗಿಗೆ ತುಂಬಬೇಕು. ತುಂಬಬೇಕಾದರೆ ಸ್ಟಾಕ್ ಮಾಡಿಡಬೇಕು. ಕಾರವಾರದತ್ರ ಇರೊ ಬೇಲೇಕೇರಿ ಬಂದರಲ್ಲಿ ಸ್ಟಾಕ್ ಮಾಡಿಕಂಡಿದ್ರಂತೆ. ಅದು ಪೂರಾ ಕಳ್ಳಮಾಲಂತೆ. ಈ ಅವುನು ಮುಖ್ಯಮಂತ್ರಿ ಆಗಿದ್ದ, ಏನೇ ನ್ಯಡದ್ರೂ ಅವುನ ಆಡ್ರಿಲ್ದೆ ನ್ಯಡಿಯಂದಿಲ್ಲ. ಗಣಿ ಇಲಾಖೆಯೋರು, ಪಾರೆಸ್ಟಿಲಾಖೆಯೋರು, ಬಂದರ ಇಲಾಖೆಯೋರೂ, ಹಡಗಿನ ಮಾಲೀಕರು, ಟೋಲು ಗೇಟಿನವುರಿಗ್ಯಲ್ಲ ಒಂದು ಹುಕುಂ ಬೇಕಾಗಿರತದೆ. ಅದು ಮುಖ್ಯಮಂತ್ರಿ ಮನೆಯಿಂದ ಹೊಂಟ್ರು ಮಾತ್ರ ಅಕ್ರಮದ ಗಣಿ ಚಕ್ರ ಚೀಣಾ ದೇಶಗಂಟ ತಿರಗದು. ಇಲ್ಲ ಅಂದ್ರೆ ಗಣಿ ಎಲ್ಲೇ ಬಿದ್ದಿರತದೆ. ಆದ್ರೆ ಇಲ್ಲಿ ಅಂಗಾಗಿಲ್ಲ."

"ಎಡೂರಪ್ಪ ತರಡು ಸಿಗಾಯ್ಕಂಡು ನಳ್ತಾ ಅವುನೆ ಅನ್ನು" ಎಂದ ಕಾಳಮಾವ.

"ಊ ಕಣಮಾವ. ಕೆಡತಿನಿ ಅಂತ ಇಷ್ಟೊಂದು ಕೆಟ್ಟರೆ."

"ಯಾರು ಕೆಟ್ರೊ ಉಗ್ರಿ?" ಎಂದುಕೊಂಡು ವಾಟಿಸ್ಸೆ ಬಂದ.

"ಲೇ ವಾಟಿಸ್ಸೆ, ಬರ ನೋಡಕ್ಕೆ ಯಾರಾರ ಬಂದಿದ್ರೇನ್ಲ"

"ಇಲ್ಲ ಕಣಕ್ಕ ಯಾರೂ ಬಂದಿರಲಿಲ್ಲ. ಇಬ್ಬರು ನೆಲಗಳ್ಳರು ಮಾತ್ರ ಈ ಕಡೆಯಿಂದ ಬಂದುಹೊದ್ರು."



"ನ್ಯಲಗಳ್ಳರು ಯಾರ್ಲ?"

"ಒಬ್ಬ ಬೆಂಗಳೂರು ಸುತ್ತಮುತ್ತ ಕೊಳ್ಳತಾ ಅವುನೆ. ಇನ್ನೊಬ್ಬ ಬಿಡದಿ ಕುಂಬಳಗೋಡತ್ರ ಕೊಂಡು ಬಿಸಾಕ್ಯವುನೆ. ಅವರ ಭೂದಾಹ ಇನ್ನೂ ನಿಂತಿಲವೇನೊ. ಅದಕ್ಕೆ ಇಲ್ಲೆಲ್ಲಾ ನೋಡಕಂಡೊದ್ರು ಕಣಕ್ಕ. ಅಂತೂ ನ್ಯಲಗಳ್ಳರ ಏಜೆಂಟರು ಇನ್ನ ಬರ್ತರೆ."

"ಬಂದೋದೋರು ಯಾರು ಅಂದ್ರೆ ಪುರಾಣ ಹೇಳ್ತನೆ."

"ಪುರಾಣದೋರು ಅಲ್ಲ ಕಣಕ್ಕ ಬಂದಿದ್ದೊರು. ಐತಿಹಾಸಿಕ ವ್ಯಕ್ತಿಗಳು. ಒಬ್ಬ ನಟೋರಿಯಸ್. ಒಬ್ಬ ವಿಟೋರಿಯಸ್. ಹೆಸರು ಅಶೋಕ ಮತ್ತು ಯೋಗೇಶ್ವರ ಅಂತ. ಇಬ್ಬರೂ ಮಿನಿಷ್ಟ್ರುಗಳು. ಅವರು ಬಂದೋದದ್ದು ಬರಗಾಲದ ಸಮೀಕ್ಷೆ ಮಾಡಕ್ಕೆ, ಯಾವ ತರ ಸಮೀಕ್ಷೆ ಮಾಡಬೇಕು ಅಂತ ಗೊತ್ತಿರಲಿಲ್ಲವೇನೊ, ಅದ್ಕೆ ಪಾಸ್ಟಾಗಿ ಹೊಂಟೋದ್ರು."

"ಅವ್ಯಾವ್ರೊ ಅಪಾಪೋಲಿಗಳು ಕಂಡ್ಯ. ಅವು ಬರಗಾಲ ನೋಡಕ್ಕೆ ಬರದೇ ಆದ್ರೆ, ಜನಗಳ ಮಾತಾಡಸಬೇಕಾಗಿತ್ತು ಕಂಡ್ಯ" ಎಂದ ಕಾಳಮಾವ.

"ಜನಗಳ ಮಾತಾಡ್ಸಿದ್ರೆ ದುಡ್ಡು ಕೇಳ್ತರೆ ದೊಡಪ್ಪ. ಅದ್ಕೆ ಓಡಿದ್ರು."

"ಯಾವನೊ ನಿನ್ನಂತ ಗತಿಗೆಟ್ಟ ನನ್ನ ಮಗ ಕೇಳ್ತನಪ್ಪೆಯ. ನಾವು ಕೇಳದೇನಪ್ಪಾ ಅಂದ್ರೆ ದನಿಗೆ ಹುಲ್ಲು, ಕುಡಿಯಕ್ಕೆ ನೀರು. ಅದ್ನೂ ಕೊಡದೋರು ಇಲ್ಯಾಕೆ ಬಂದ್ರು ಅಂತ."

"ಬರದುಹೋಗದು ಅವರಿಷ್ಟ ದೊಡಪ್ಪ ಬರೀ ಸಮೀಕ್ಷೆ ಮಾಡ್ತಾಯಿದ್ದರೇ ಹೊರತು ಯಾರೂ ಪರಿಯಾರ ತತ್ತಾಯಿಲ್ಲ, ಅಂಗೂಹಿಂಗು ಯಲಕ್ಷನ್ ಬಂದೇಬುಡ್ತದೆ. ಯಲ್ಲಾ ಪಾರ್ಟಿಯೋರು ಬಟವಾಡೆಗೆ ತಯಾರಾಗ್ಯವುರೆ. ಜಲ್ದಿ ಯಲಕ್ಷನ್ ಬಂದ್ರೆ ಅದಾರ ಅನುಕೂಲಾಯ್ತದೆ" ಎಂದು ವಾಟಿಸ್ಸೆ ಹೇಳುವಾಗ ಇದ್ದಕ್ಕಿದ್ದಂತೆ ಸಿಟ್ಟಾದ ಸೀರ.

"ಅವುನ್ಯಾರ್ಲ ಇದಾನ ಸೌಧದ ಗ್ವಾಡೆನೆ ಹ್ವಡದಾಕಿದನಂತೆ?" ಎಂದ.

"ಏ ಅವುನು ಶಂಕರಮೂರ್ತಿ ಅಂತ ಚಿಗಪ್ಪ, ಶೆಟ್ರು ಪೈಕಿ. ಶೆಟ್ಟಿ ವಳ್ಳೆ ಯಾಪಾರಾದಾಗ ಅಂಗಡಿಯ ಅಗಲ ಮಾಡಿಕತ್ತನೆ ನೋಡು ಅಂಗೆ ಇವುನು ಆಫೀಸನೆ ಅಗಲ ಮಾಡಿಕಂಡವುನೆ."

"ಅವುನ್ಯಾರು ತೋರ್ಸ್ಲ ಹೋಗಿ ಯಕ್ಕೃತ್ತಿನ ಮ್ಯಾಲೆ ಹ್ವಡಿತಿನಿ."

"ನಾನು ಯಾರಾರ ಗೂಸು ಬುಡ್ತರೆ ಅಂತ ನೋಡಿದೆ. ಯಾಕೊ ಯಲ್ಲಾ ಸುಮ್ಮನಾದರಪ್ಪ ಹನುಮಂತಯ್ಯ ಕಟ್ಟಿರೊ ವಿಧಾನಸೌಧದ ಗ್ವಾಡೆನೇ ಹ್ವಡಿತನೆ ಅಂದ್ರೆ ಈ ಶೆಟ್ಟಿಗ್ಯಂತ ಧಿಮಾಕು ಅಂತಿನಿ."

"ಅವುನೇನು ಅಲ್ಲೆ ಇರಕ್ಕೆ ಹೋಗಿದ್ನೆ? ನಾಕುದಿನ ಇದ್ದು ಹೋಗದು ಬುಟ್ಟು ಗ್ವಾಡೆ ಕೆಡಿಗ್ಯವುನಲ್ಲಾ, ಈ ಬಿಜೆಪಿಗಳು ಇನ್ನೂ ಏನೇನು ಕೆಡಗತರೊ ಏನೊ?" ಎಂದ ಉಗ್ರಿ.

"ಮದ್ಲೆ ಅವು ಕೆಡಗೊ ಸಂಸ್ಕೃತಿಯಿಂದ ಬಂದವು ಕಣೊ ಉಗ್ರಿ. ಕಟ್ಟೊ ಸಮ್ಮುಸ್ಕೃತಿಯಿಂದ ಬಂದಿದ್ರೆ ಹಿಂಗಾಯಿತ್ತಿರಲಿಲ್ಲ. ನೋಡಾಗ್ಲೆ ಹಿಂದೂ ಮುಸ್ಲಿಮರ ನಡುವೆ ಜಗಳತಂದು ಮಡಗಿ ಅದು ಯಲಕ್ಷನ್ ಟೇಮಿಗೆ ವಳ್ಳೆ ವರ್ಕ್‌ಔಟ್ ಆಗಂಗೆ ನೋಡಿಕತ್ತಾಯಿದ್ದರಂತೆ."

"ಯಲಕ್ಷನ್ನಿಗೆ ಹೋದಾಗ ಹೇಳಕ್ಕೆ ಏನಾರ ಇದ್ರೆ ಹೇಳೋರು. ಅದೇನು ಇಲವಲ್ಲ, ಅದ್ಕೆ ನಾವು ನಿಗಾವಯಿಸ್ದೆಯಿದ್ರೆ ಸಾಬರು ಉಡುಗ್ರು ಇಡೀ ರಾಜ್ಯನೆ ಉಡಾಯಿಸೋರು ಅನ್ನಕ್ಕೆ ಶುರುಮಾಡ್ತರೆ ನೋಡು."

"ಯಲಕ್ಷನ್ನಲ್ಲಿ ಹೇಳಿಕಳಕ್ಕೆ ಏನೂ ಇಲ್ಲ ಅನ್ನದು ನಿಜಕಣೊ ಉಗ್ರಿ. ಅಂಥ ಅದ್ವಾನಿನೆ ರಾಮಂದ್ರ ಕಟ್ಟೆ ಕಟ್ಟೆತಿವಿ ಅಂದವ್ಯನೆ."

"ರಾಮಂದ್ರ ಕಟ್ಟದಕಿಂತ, ಅಲ್ಲಿಂದ ಒಸಿ ಇಟಗೆ ತಗಂಡೋಗಿ ಮನೆತಕ ಹಾಯ್ಕಂಡ್ರೆ, ಮುಂದಕ್ಕೆ ಅವುನಿಗೆ ಬೇಕಾಯ್ತದೆ ಕಣೊ ವಾಟಿಸ್ಸೆ."

"ಎಜ್ಹಾಟ್ಲಿ ಕರಟ್!!"

ಎಡೂರಪ್ಪ ಅದು ಹೊರಿಕೋಗದಂಗೆ ತಡದನಂತೆ. ಆಗ ಅವುನು ಇಡೀ ದೇಶದಲ್ಲಿ ಅಕ್ರಮ ಗಣಿ ತಡದೋನು ನಾನೆಯ ಅಂತ ಹೇಳಿಕಂಡು ತಿರುಗಿದ."

"ನಿಜ ಕಂಡ್ಲ, ನಾನು ಅವುನ ಭಾಷಣ ಕೇಳಿದಿನಿ."

"ಕೇಳಿದ್ದಿಯಲವಾ, ಅಂಗೆ ಭಾಷಣ ಮಾಡಿದೋನು ಬೇಲೇಕೇರಿ ಗಣಿಧೂಳು ಯಾರಿಗೂ ಕಾಣದಂಗೆ ಮಾಯವಾದಾಗ ಏನು ಮಾಡ್ತಿದ್ದಾ?"

"ಯಾರೋ ಕದ್ದಕಂಡೋದ್ರೆ ಅವುನೇನು ಮಾಡಕ್ಕಾದತೂ?"

"ನೀನು ಅವುನ ಮಗಳಂಗೆ ಮಾತಾಡ್ತಿಯಲ್ಲೋ. ಆಗ


ಬೇಸರ ಮತ್ತು ಆಟ

ಮೊನ್ನೆ ಒಬ್ಬ ಸಿಕ್ಕ 'ಸಾರ್, ನನಗೆ ಈ ರೇಸ್‌ಕೋರ್ಸ್‌ನ ಒಂದು ಸೀಸನ್ ಟಿಕೆಟ್ ಕೊಡಿಸಿ' ಅಂದ.

'ನಾನು ಅಲ್ಲಿಯ ಮೆಂಬರ್ ಅಲ್ಲ, ಅಲ್ಲದೆ ನಿನ್ನಂಥ ಬಡವನಿಗೆ ಇದೆಲ್ಲ ದುಬಾರಿ ತೆವಲು ಬೇಡ. ಹೋಗಿ ದಿಯಾಗಿ ಹೆಂಡತಿ ಮಕ್ಕಳೊಂದಿಗೆ ಮನೆಯಲ್ಲಿರು' ಅಂದೆ.

ಆತ ಸುಮ್ಮನಿದ್ದ. ಅವನ ಕಣ್ಣು ದುಗುಡದಿಂದ ತುಂಬಿಕೊಂಡಿದ್ದವು.

'ಸಾರ್, ನಾನು ನನ್ನ ಲಕ್ವಾದಿಂದ ಈಗತಾನೇ ಸುಧಾರಿಸಿಕೊಳ್ಳಿದ್ದೇನೆ.



ರೇಸ್‌ಕೋರ್ಸಿನ ಗಾಳಿಯಲ್ಲಿ ಕೂತು ಕುದುರೆ ಓಡುವುದನ್ನು ನೋಡಿದರೆ ಖುಷಿಯಾಗುತ್ತೆ, ನನ್ನ ಪೂರ್ತಿ ಗುಣವಾಗುತ್ತೆ.'


'ಸುಮ್ಮನೆ ಬೊಗಳೆ ಬಿಡಬೇಡ, idiot! ಅಂದೆ.

ಆತ ಇನ್ನೂ ದುಃಖದಿಂದ ನಿಂತಿದ್ದು ಹೇಳಿದ, ಸು ಮನೇಲಿದ್ದು ಹೆಂಡತಿ ಮಕ್ಕಳ ಗಲಾಟೆ ಅನುಭವಿಸಿದರೆ ಸತ್ತೇಹೊಗ್ತೀನಿ' ಅಂದ.

ನಾನು ಮತ್ತೆ ಬೈಯಲಾಗದೆ ಸುಮ್ಮನೇ ಕೇಳಿದೆ. ಇಳದನಿಯಲ್ಲಿ ಹೇಳುತ್ತಲೇ ಇದ್ದ: 'ಬೇಸರ ಸಾರ್, ಗೆ ಟೈಂ ಕಳೀಬೇಕಂತಾನೇ ಗೊತ್ತಾಗಲ್ಲ, ನಮ್ಮ ಮನೆ ಎದುರಿಗೆ ಒಬ್ಬ ಬೋರಿಂಗ್ ರೈಲ್ವೆ ಡ್ರೈವರ್ ಇದ್ದಾನೆ...' 'ಸ್ಕ್ರೂ ಡ್ರೈವರ್ ತರಹ...! ಎಂದು ನಕ್ಕೆ, ಆತ ತನ್ನ ದುಃಖದ ಮೂಲಕ ನನ್ನ ನಗೆಯನ್ನು ಗ್ರಹಿಸಲು ಇಡೀ ಒಂದು ನಿಮಿಷ ತೆಗೆದುಕೊಂಡ!'

ಜೆಫ್ರೀ... ಜೆಫ್ರೀ

'ನಾನು ಅಪ್ರಾಪ್ತವಾಗಿ ಪ್ರಯತ್ನಿಸಿ ಮೇಲೆ ಬಂದಿದ್ದೇನೆ. ಎಷ್ಟು ಮೇಲೆ ಬಂದಿದ್ದೇನೆಂದರೆ, ನನ್ನ ಜೀವದ ಗೆಳೆಯ ನನಗಾಗಿ ಈ ಹೋಟೆಲಿನ ಮೂರನೆ ಮಹಡಿಯಲ್ಲಿ ಚಿಕ್ಕ ರೂಮ್ ಕೊಡಿಸಿದ್ದಾನೆ. ಇಲ್ಲಿಂದ ಕಿಟಕಿಯಲ್ಲಿ ನೋಡಿದರೆ ಕೆಳಗೆ ಆಸ್ಪತ್ರೆಯಲ್ಲಿ ರೋಗಿಗಳು ಮಲಮೂತ್ರ ವಿಸರ್ಜಿಸುವುದು, ಆಪರೇಷನ್ ಮಾಡಿಸಿಕೊಳ್ಳುವುದು ಕಾಣುತ್ತದೆ. ಈಚೆಗೆ ನನಗೆ ಒಂದೇ ಚಿಂತೆ-ಈ ಮೂರನೆ ಮಹಡಿಯಲ್ಲಿ ನಾನು ಇದ್ದಕ್ಕಿದ್ದಂತೆ ಸತ್ತರೆ ನನ್ನ ಕಳೇಬರವನ್ನು ಹೇಗೆ ಸಾಗಿಸುತ್ತಾರೆ ಅನ್ನುವುದು-ಆದರೆ ನಾರ್ಮನ್ ನಾನು ತೀರಿಕೊಂಡ ಸುದ್ದಿಯನ್ನು ಗಟ್ಟಿಧ್ವನಿಯಲ್ಲಿ ಪ್ರಕಟಿಸುತ್ತಾನೆ ನನ್ನದು ಗೊತ್ತು; ಜೆಫ್ರಿ ಬರ್ನಾಡ್ ತೀರಿಕೊಂಡ. ಜೆಫ್ರಿ ಗೋತಾ ಹೊಡೆದ! ಕೇಳಿ, ಕೇಳಿ... ಜೆಫ್ರಿ ಇನ್ನಿಲ್ಲ! ಬದುಕು ಎಷ್ಟು ವಿಚಿತ್ರ ನೋಡಿ. ನಾನು ಹಣ ಕಟ್ಟಿದ ಕುದುರೆಗಳೆಲ್ಲ ಎರಡನೆಯದಾಗಿ ಬರುತ್ತವೆ. ನಾನು ಗೆಲ್ಲಿದ ಹಣವನ್ನು ಬೇಗನಾಗಿ ಮಾಯವಾಗುತ್ತಾರೆ. ಒಂದು ಸಲ ಎಲ್ಲ ಬೋರ್ ಆಗಿ ನಾನೇ ಜೂಜುಕೋರರಿಂದ ಹಣ ಸಂಗ್ರಹಿಸಿ, ಅವರು ಕಟ್ಟಿದ ಕುದುರೆ ಸೋತು ನನಗೆ ಹಣ ಉಳಿಯುತೋ ಇಲ್ಲವೋ-ಸರ್ಕಾರದವರು ನಾನು ಹೀಗೆ ಕಾನೂನಿಗೆ ವಿರೋಧವಾಗಿ ಹಣ ಕಟ್ಟಿಸಿಕೊಂಡು ನೂರು ಪೌಂಡ್ ಗಳಿಸಿದ್ದಕ್ಕೆ ಕೇಸ್ ಹಾಕಿತು. ನನ್ನ ಅಭಿಮಾನಿಗಳಾದ ಓದುಗರು ನನ್ನ ಪರವಾಗಿ ಕೋರ್ಟಿಗೆ ಬಂದು ನನಗೆ ಕುಮ್ಮಕ್ಕು ಕೊಡಲು ಗದ್ದಲ ಮಾಡಿದ್ದರಿಂದ ನ್ಯಾಯಾಧೀಶರು ನನಗೆ ಹಾಕಬೇಕೆಂದಿದ್ದ ನಾನೂರು ಪೌಂಡ್ ದಂಡವನ್ನು ನಾನೂರೈವತ್ತಕ್ಕೆ ಏರಿಸಿದರು... ನನ್ನ ನಾಲ್ಕನೆ ಹೆಂಡತಿ ತುಂಬ ಒಳ್ಳೆಯವಳು, ಆಕೆ ನನ್ನ ಜೊತೆ ಇಲ್ಲದಿದ್ದಾಗ ನನಗೆ ಅವಳ ಮೇಲೆ ಅಪಾರ ಪ್ರೀತಿ. ಇದೆಲ್ಲದರ ನಡುವೆ ನಾನು ಸಿಗರೇಟ್ ಸೇದುತ್ತಾ ನಿದ್ರಿಸಿದ್ದರಿಂದ ಹಾಸಿಗೆಗೆ ಬೆಂಕಿ ಹತ್ತಿಕೊಂಡು ನಾನು ಭಸ್ಮವಾಗಲಿದ್ದೆ. ನನ್ನ ಕಾಯಿಲೆ ಉಲ್ಬಣಗೊಂಡು ಕಾಲಂ ಬರೆಯಲಾಗಲಿಲ್ಲ, ಆದರೂ ಒಂದು ಕಾಲಂ ಬರೆದು ಕಳಿಸಿದೆ. ಆದರೆ ಎಲ್ಲ ಪತ್ರಿಕೆಗೆ ವಾಚಕರು ಪತ್ರ ಬರೆದರೆ, ನಮ್ಮ ಸಂಪಾದಕರು ಲೇಖಕನಿಗೆ ಕಾಗದ ಬರೆದರು: ಜೆಫ್ರೀ, ನಿನ್ನ ಕಾಲಂ ಹೋದೆರಡು ಸಲ ಬರೆದದ್ದನ್ನು ಹೋಲುತ್ತದೆ.' ಆದ್ದರಿಂದ ಅವರು ಪ್ರಕಟಿಸಿದರು: 'ಜೆಫ್ರಿಗೆ ಮೈಯಲ್ಲಿ ಹುಷಾರಿಲ್ಲವಾದ್ದರಿಂದ ಆತನ ಕಾಲಂ ಪ್ರಕಟವಾಗುತ್ತಿಲ್ಲ.' ಏನು ಗೋಳು ನೋಡಿ! ಎಲ್ಲ ಎಷ್ಟು ಅಸಂಗತ! ಮೊನ್ನೆ ನನ್ನ ಅಭಿಮಾನಿಯೊಬ್ಬಳು ನಾನು ವಾಸಿಸುವ ಹೋಟೆಲ್‌ಗೆ ನನಗಾಗಿ ಹುಡುಕಿಕೊಂಡು ಬಂದಳು. ನಾನು ಹೆಮ್ಮೆಯಿಂದ ಕಾಲರ್ ಸರಿಮಾಡಿಕೊಂಡು, ಕೂದಲು ತಿದ್ದುಕೊಂಡು ಕೈ ಮುಂದೆ ಮಾಡಿ, 'ನಾನೇ ನಿಮ್ಮ ಜೆಫ್ರಿ ಬರ್ನಾಡ್' ಎಂದು ಕೈಕುಲುಕಲು ಹೋದರೆ ಆಕೆ ತನ್ನ ಫೈಲು ನೋಡಿ, 'ನಿನ್ನಿಂದ ಸರ್ಕಾರಕ್ಕೆ ಇಂತಿಷ್ಟು ಟ್ಯಾಕ್ಸ್ ಬರಬೇಕು' ಎಂದು ತಣ್ಣಗೆ ಹೇಳಿ ನೋಟಿಸ್ ಕೊಟ್ಟು ಹೋದಳು...



ಎಂದೋ ಒಮ್ಮೆ ನಾನು ಟೀಕೆಟಿಪ್ಪಣಿಯಲ್ಲಿ ಜೆಫ್ರಿ ಬರ್ನಾಡ್ ಬಗ್ಗೆ ಬರೆದಿದ್ದೆ. ನೀವು ಅದನ್ನು ಆಕಸ್ಮಾತ್ ಓದಿರಬಹುದು. ನನ್ನ ಮಗಳು ಗೌರಿ ಇಂಗ್ಲೆಂಡಿನಿಂದ ಬರುವಾಗ ಜೆಫ್ರಿಯ ಬಗೆಗಿನ ನಾಟಕ ತಂದಳು. ಅದನ್ನು ತಿಂಗಳುಗಳ ಹಿಂದೆ ಅಶೋಕ್ ಮಂದಣ್ಣನಿಗೆ ಕೊಟ್ಟಿದ್ದೆ. ಆತ ನಮ್ಮ ಒಳ್ಳೆಯ ನಟ. ಮೊನ್ನೆ ಆದ ನಾಟಕದ ಉತ್ಸವವೊಂದರಲ್ಲಿ ಆತ ಆಡಿದ, ಏಳು ನಾಟಕಗಳಲ್ಲಿ ಎಲ್ಲರ ನಗೆ, ಅಚ್ಚರಿ, ವಿಶ್ವಾಸ ಗಳಿಸಿದ್ದು ಈ ಬ್ಲೇಡಿನಂಥ ನಾಟಕ. ಪ್ರತಿಯೊಬ್ಬ ಲೇಖಕನಲ್ಲೂ ಈ ಬ್ಲೇಡ್ ಇಲ್ಲದಿದ್ದರೆ ಸಾಹಿತ್ಯ ಹುಟ್ಟುವುದಿಲ್ಲ; ಈ ದುಃಖ, ತಮಾಷೆ, ಮುಖಭಂಗ ಇಲ್ಲದಿದ್ದರೆ ಅನುಭವವೆನ್ನುವುದು ಪೆದ್ದುಪೆದ್ದಾಗಿ ಉಳಿಯುತ್ತದೆ. ಸುಮ್ಮನೇ ಇರುವ ಬದುಕನ್ನು ಪ್ರಾಮಾಣಿಕವಾಗಿ ನೋಡಿದರಾಯಿತು. ಮೊನ್ನೆ ಒಮ್ಮೆ ನನ್ನ ಅಭಿಮಾನಿ ಸಂಭ್ರಮದಿಂದ ಬಂದು, 'ಎಲ್ಲ ಸೌಖ್ಯವೇ ಸಾರ್' ಅಂದ. ನಾನು ಹೂಂ ಎಂದು ತಲೆಯಲ್ಲಾಡಿಸಿದರೆ, 'ತೋಟ ಚೆನ್ನಾಗಿದೆಯಾ ಸಾರ್' ಅಂದ. ಹೂಂ 'ಇಲ್ಲ ಅಂದೆ. ಅದನ್ನು ಆತ ಗಮನಿಸಲಿಲ್ಲ, 'ಮಕ್ಕಳು ಆರೋಗ್ಯವಾಗಿದ್ದಾರಾ ಸಾರ್' ಅಂದ. ನಾನು ಸುಮ್ಮನಿದ್ದೆ. 'ಹ್ಯಾಪಿ ದೀಪಾವಳಿ ಸಾರ್' ಅಂದ. ಅವನನ್ನು ಹತ್ತಿರ ಕರೆದು, idiot...ತೊಲಗು!, ಅಂದೆ. ಆತ ಗೊಂದಲಗೊಂಡು ಹೊರಟುಹೋದ.

ಜೀವನ ಎಷ್ಟು ಕುತೂಹಲಕರ. ಜೆಫ್ರಿಗೆ ಮೂತ್ರಪಿಂಡಗಳು ಇಲ್ಲವಾಗಿ ಡಯಾಲಿಸಿಸ್ ಯಂತ್ರ ಜೋಡಿಸಿದರು. ಅವನ್ನು ತೆಗೆದುಬಿಡಲು ಹೇಳಿದ. ಸಾಯುವಾಗ ನಗುತ್ತಾ, 'ಮತ್ತೆ ಆ ಯಂತ್ರ ಜೋಡಿಸಿ ಎನ್ನುವುದು ಎಷ್ಟು ಹಾಸ್ಯಾಸ್ಪದ!' ಎನ್ನುತ್ತ ಕಣ್ಣುಮುಚ್ಚಿದ.

– ಡಿಸೆಂಬರ್ 3, 1997

ಸೌಂದರ್ಯ ಪ್ರಜ್ಞೆ ಶನಿಕಾಟ

ರಹೋದ ಹೆಂಗುಸರಿಗೆ ಏನಾಗಿದೆಯೋ ಕಾಣೆ. ಉಣ್ಣಕ್ಕೆ ಉಡಕ್ಕೆ ಬೇಜಾನಾಗಿ ಬಿದ್ದವೆ. ಬಾಡುಬಳ್ಳಿ ಅಂದ್ರೆ ಮೈಲಿಗೆ ಅಂತ ಮೈಲುದೂರ ಓಡ್ತಾವೆ. ಅದು ಬ್ಯಾಡಿಬುಡ್ರನ್ನ ಹಣ್ಣುಹಂಪಲನಾರ ತಿನ್ನಿ, ಹೊಟ್ಟೆ ತುಂಬ ರೊಟ್ಟಿ ಪಟ್ಟಿ ತಿನ್ನಿ ಅಂದ್ರೆ ಮುಖ ತಿರುಗುಸ್ತಾವೆ. ಒಂದು ಗಳಾಸು ಹಾಲ್ನಾದ್ರು ಕುಡೀರವ್ವ ಅಂದ್ರೆ ಮೇಲೆ ಬೀಳಕ್ಕೆ ಬರ್ತವೆ. ಇದು ಯಾಕೆ ಹಿಂಗಾಡ್ತವೆ ಅಂದ್ರೆ ಅವನ್ನೆಲ್ಲ ಮಾಡಿದ್ರೆ ಅವ್ರು ಬೂದುಗುಂಬಳಕಾಯಿ ಹಂಗೆ ಊದೋದರಂತೆ! 'ಇನ್ನೇನವ್ವ ನೀವು ಮಡಿಕೋಲಿಗೆ ಸ್ಯಾಲೆ ಸುತ್ತಿದಂಗೆ ಇರಬೇಕ' ಅಂದ್ರೆ 'ಹೂಂ, ಅದೇ ಪ್ಯಾಸನ್ನು' ಅಂತಾವೆ. ಅದೆಂತದೋ ಅದು 'ಸೌಂದರ್ಯ ಪ್ರಜ್ಞೆ' ಅಂತೆ, ಅದು ಅವರಲ್ಲಿ ಬಾಳ ಇದೆಯಂತೆ!

ಎಲ್ಲಿದಾರೆ ಅಂತಹ 'ಸೌಂದರ್ಯ ಪ್ರಜ್ಞೆ' ಹೆಂಗಸರು ಅಂದರೆ ಗುಜರಾತಿನಲ್ಲಿ, ನೀನು ನೋಡಿದಿಯಾ ಅಂದರೆ ಇಲ್ಲ, ಆದರೆ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ಈ ಅರ್ಥದ ಹೇಳಿಕೆಯನ್ನು ಕೇಳಿದ್ದೀನಿ. ಗುಜರಾತು ಅಂದರೆ ದೇಶಕ್ಕೆ ಮಾದರಿ ಅಂತ ಹೆಸರು ಮಾಡಿರುವ ರಾಜ್ಯ ಅದು. ಮಾದರಿ ಅಂದಮೇಲೆ ಅಲ್ಲಿನ ಮಹಿಳೆಯರೂ ಹಾಗೇ ಇರಬೇಕು ಅಲ್ಲವಾ. ಆದರೆ ಅಲ್ಲೇನಾಗಿತ್ತಂತೆ ಅಂದ್ರೆ ಅಲ್ಲಿನ ಮಹಿಳೆಯರು ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿದ್ದಾರಂತೆ. 'ಇದೇನ್ರಿ ಮೋದಿಯವರೆ ಹಿಂಗಾಗದೆ' ಎಂದು ಯಾರೋ ಕೇಳಿದ್ದಕ್ಕೆ ಮೋದಿ ಮಹಾರಾಜರು 'ಅವರಿಗೆ ಸೌಂದರ್ಯಪ್ರಜ್ಞೆ ಹೆಚ್ಚು ಅಂದರಂತೆ!

******

'ಮನುಷ್ಯನಿಗೆ ಕಾಯಿಲೆ ಬರಲು ಕಾರಣವೇನು?'

'ರೋಗ ನಿರೋಧಕ ಶಕ್ತಿ ಇಲ್ಲದ್ದು.'

'ಅದು ಯಾಕೆ ಇರುವುದಿಲ್ಲ?'

'ಪೌಷ್ಟಿಕ ಆಹಾರದ ಕೊರತೆಯಿಂದ.'

'ಈ ಕೊರತೆ ಹೇಗೆ ಬರುತ್ತೆ?'

'ಬಡತನ.'

ಇದನ್ನು ನಾವು ನೀವು ಒಪ್ಪಬಹುದು. ಆದರೆ ಮಮತಾ ದೀದಿ ಸಮ್ಮತಿ ಇದಕ್ಕಿಲ್ಲ. 'ಸುಳ್ಳು' ಅನ್ನುತ್ತಾರೆ ದೀದಿ!

ಯಾಕೆ ಹೀಗೆ ಹೇಳುತ್ತಾರೆ ದೀದಿ?

ಡೆಂಗ್ಯೂ ಹಾವಳಿ ಪಶ್ಚಿಮ ಬಂಗಾಳದಲ್ಲಿ ತಾರಕಕ್ಕೇರಿದೆ ಅದಕ್ಕೆ!


ಅಲ್ಲಿ ಸತ್ವಯುತ ಆಹಾರ ದೊರೆಯುತ್ತಿಲ್ಲವೆ?

ಹಾಗೆಂದವರ ಬಾಯಿಗೆ ಹುಳು ಬಿದ್ದೀತು. ಸಾಕಷ್ಟು ಪ್ರಮಾಣದಲ್ಲಿ ಅದು ಲಭ್ಯ ಇದೆಯಂತೆ. ಆದರೂ ಹೀಗೆ ಯಾಕೆ ಅಂದರೆ ಮಮತಾ ಹೇಳಿದ್ದು

'ಇಲ್ಲಿನ ಜನ ಡಯಟ್ ಕಾನ್ಷಿಯಸ್!'

ಗುಜರಾತಿನಲ್ಲಿ ಹೆಂಗಸರಿಗೆ ಮಾತ್ರ ಬಡಿದಿದ್ದ ಈ ಡಯಟಿಂಗ್ ರೋಗ ಪಶ್ಚಿಮ ಬಂಗಾಳದಲ್ಲಿ ಎಲ್ಲರಿಗೂ ಸಾಂಕ್ರಾಮಿಕ ರೋಗವಾಗಿ ಕಾಡುತ್ತಿದೆ! ಆರೋಗ್ಯ ಕಾಪಾಡುವುದಕ್ಕಾದರೂ ಸತ್ವಯುತ ಆಹಾರ ಬಳಸಿರಿ ಅಂದರೂ ಅವರು ಬಳಸಲು ನಿರಾಕರಿಸುತ್ತಿದ್ದಾರಂತೆ!

ಮಮತಾ ದೀದಿಗೆ ಒಂದೊಂದಲ್ಲ ಕಾಟ. ಆರೋಗ್ಯ ಇಲಾಖೆ ಅವರ ಹತ್ತಿರಾನೇ ಇದೆ. ಕೆಲವು ವೈದ್ಯಾಧಿಕಾರಿಗಳು ಅವರ ವಿರುದ್ಧ ಪಿತೂರಿ ನಡೆಸುತ್ತಿದ್ದಾರಂತೆ. ಅವರಿಗೇನು ಸಂಕಟ ಅಂದರೆ 2005ರಲ್ಲಿ ಕಮ್ಯುನಿಸ್ಟರು ಅಧಿಕಾರದಲ್ಲಿದ್ದಾಗ ಡೆಂಗ್ಯೂಗೆ 34 ಜನ ಬಲಿ ಆಗಿದ್ದರಂತೆ. ದೀದಿ ಆಳ್ವಿಕೆಯಲ್ಲಿ ಅದರಿಂದ ಸತ್ತಿರೋರು ಇನ್ನೂ 23 ಜನ ಮಾತ್ರ ಅಂತೆ! ಇದೇನಾದರೂ ಮಾಡಿ ಜಾಸ್ತಿ ಮಾಡಬೇಕೂಂತ ಅವರೇನು ಮಾಡುತ್ತಿದ್ದಾರಂತೆ ಅಂದ್ರೆ ಹೃದಯಾಘಾತದಿಂದ ಸತ್ತರೂ ಡೆಂಗ್ಯೂ ಸಾವು ಅಂತ ಬರೀತಿದ್ದಾರಂತೆ. ಮೂತ್ರಪಿಂಡ ವಿಫಲವಾಗಿ ಸಾವನ್ನಪ್ಪಿದರೂ ಡೆಂಗ್ಯೂ ಸಾವು ಅಂತ ದಾಖಲಿಸುತ್ತಾರಂತೆ. ಅಷ್ಟೆ ಯಾಕೆ, ಕೊನೆಗೆ ಅಪಘಾತದಲ್ಲಿ ಸತ್ತವರನ್ನೂ ಡೆಂಗ್ಯೂ ಲೆಕ್ಕಕ್ಕೆ ಜಮಾ ಮಾಡ್ತಾರಂತೆ! ಒಟ್ಟಿನಲ್ಲಿ ಯಾವ ಕಾರಣಕ್ಕೆ ಸತ್ತರೂ ವೈದ್ಯರ ಲೆಕ್ಕದಲ್ಲಿ ಡೆಂಗ್ಯೂಗೆ ದಾಖಲಾಗುತ್ತಂತೆ! ಮಮತಾ ದೀದಿ ಆಳ್ವಿಕೆಯಲ್ಲಿ ಡೆಂಗ್ಯೂದಿಂದ ಸತ್ತವರ ಸಂಖ್ಯೆ ಕಮ್ಯುನಿಸ್ಟರ ಆಳ್ವಿಕೆಗಿಂತಲೂ ಹೆಚ್ಚು ಅಂತ ತೋರಿಸೋಕೆ ಹಿಂಗೆಲ್ಲ ಮಾಡುತ್ತಾ ಇದ್ದರಂತೆ. ಹಂಗಂತ ಮಮತಾ ದೀದೀನೆ ಅಲವತ್ತುಕೊಂಡಿದ್ದಾರೆ ಪಾಪ!



ಮಮತಾ ದೀದಿಗೆ ಒಂದು ಸಲಹೆ. ಯಾವ ಕಾರಣಕ್ಕೆ ಮರಣ ಹೊಂದಿದರೂ ಡೆಂಗ್ಯೂ ಅಂತ ವೈದ್ಯರು ದಾಖಲಿಸುತ್ತಿದ್ದಾರೆ ಎಂಬುದು ನಿಮ್ಮ ಸಂಕಟ ಅಲ್ಲವಾ. ನೀವು ಮುಖ್ಯಮಂತ್ರಿ. ಒಂದು ಆದೇಶ ಹೊರಡಿಸಿ- 'ಇನ್ನು ಮುಂದೆ ರೋಗಿಯ ಸಾವಿಗೆ ಡೆಂಗ್ಯೂ ಕಾರಣ ನೀಡಬಾರದು!' ಸತ್ತವರು ಸತ್ತರು. ರೋಗ ಯಾವುದಾದರೇನು! ಅಲ್ಲವಾ ದೀದಿ...!

ನೀರಿಗಾಗಿ ಹೆಣ್ಣು ತಂದ!

ಗಂಡು-ಹೆಣ್ಣು ಸಮಸಂಖ್ಯೆಯಲ್ಲಿ ಇರಬೇಕೆಂಬುದು ಪ್ರಕೃತಿ ನಿಯಮ. ಇದಕ್ಕೆ ವಿರುದ್ಧವಾಗಿ ಲಾಭದಾಯಕವಾದದ್ದು ಮಾತ್ರ ಇರಬೇಕು, ಉಳಿದದ್ದೆಲ್ಲ ನಾಶ ಆಗಬೇಕು ಅನ್ನುವುದು ಮನುಷ್ಯ ನಿಯಮ. ಹಾಗೇ ನೋಡಿ. ಕೆಲವರು ಮನೆಗಳಲ್ಲಿ ಕೋಳಿಮರಿ ಮಾಡಿಸುತ್ತಾರೆ. ಹದ್ದಿಗೆ ಆಹಾರವಾಗದಂತೆ ಅವನ್ನ ಜತನದಿಂದ ಕಾಯುತ್ತಾರೆ. ಪ್ರೀತಿಯಿಂದ ಸಾಕುತ್ತಾರೆ. ಹಾಗೇ ಬೆಳೆಸಿದರೆ ಮನೆ ಅನ್ನೋದು ವಾಸದ ಮನೆ ಆಗುವುದಕ್ಕಿಂತ ಕೋಳಿಮನೆ ಆಗುವ ಸಂಭವವೇ ಬಹಳ. ಅದಕ್ಕೇನು ಮಾಡ್ತಾರೆ ಮನೆಗೆ ಅಪರೂಪದ ನೆಂಟ ಬಂದಾಗಲೋ, ಇಲ್ಲ ಬಾಯಿ ನೊಸನೊಸ ಅಂದಾಗಲೋ ಒಂದು ಕೋಳಿ ಹಿಡಿದು ಕುಯ್ಯುತ್ತಾರೆ. ಕುಯ್ಯಲು ಆಯ್ಕೆ ಮಾಡುವುದು ಹೆಂಟೆಯನ್ನಲ್ಲ, ಹುಂಜವನ್ನ! ಯಾಕೆ ಅಂದ್ರೆ ಅವು ಮೊಟ್ಟೆ ಇಡುವುದಿಲ್ಲ, ಮರಿ ಮಾಡುವುದಿಲ್ಲ ಅದಕ್ಕೆ!

ಲಾಭ ಇಲ್ಲದ್ದು ಇರಬಾರದು ಅನ್ನುವ ಸಂಗತಿ ಮನುಷ್ಯರಲ್ಲೂ ನಿಜ. ಹೆಣ್ಣು ಅಂದರೆ ನಷ್ಟದ ಬಾಬ್ತು ಎಂದೇ ಲೆಕ್ಕ. ಅದಕ್ಕೇ ಹೆಣ್ಣು ಭ್ರೂಣಹತ್ಯೆ ಸತತವಾಗಿ ನಡೆಯುತ್ತಲೇ ಇದೆ. ಹೀಗೆ ಮಾಡಿದವರು, ಮಾಡಿಸಿಕೊಂಡವರು, ಮಾಡಿಸಿಕೊಳ್ಳಲು ಪ್ರೇರೇಪಿಸಿದವರು ಇವರಿಗೆಲ್ಲ ನೆಮ್ಮದಿ ಇರಬಹುದು. ಆದರೆ ಮದುವೆಯಾಗಲು ಬಾಯಿಬಾಯಿ ಬಿಡುತ್ತಿರುವ ಗಂಡುಗಳಿಗೆ ಹೆಣ್ಣುಗಳ ಕೊರತೆ ಕಾಡಿಸಲಾರಂಭಿಸಿದೆ. ಇದು ಸಾಲದು ಎಂಬಂತೆ ಕಾನೂನನ್ನು ಕಾಲುಕಸ ಮಾಡಿಕೊಂಡಿರುವ ಇನ್ನೊಂದು ವರ್ಗ ಇದೆ. ಹಿಂದೆ ಚಿಕ್ಕ ವಯಸ್ಸಿನಲ್ಲಿ ಹೆಂಡತಿ ಸತ್ತರೆ ಮರುವಿವಾಹ ಆಗುವಂತೆ ವಿಧುರ ಗಂಡನನ್ನು ಒತ್ತಾಯಿಸುತ್ತಿದ್ದರು. ಅವನು ಅದಕ್ಕೆ ಸಮ್ಮತಿಸದೇ ಇದ್ದರೆ 'ಬೆನ್ನು ತಿಕ್ಕಕ್ಕಾದ್ರೂ ಒಬ್ಬಳು ಹೆಂಡತಿ ಅಂತ ಇರಬೇಕು ಮಗ' ಅಂತ ಒತ್ತಾಯಿಸುತ್ತಿದ್ದರು. ಈಗ ಬೆನ್ನು ತಿಕ್ಕುವವಳು ಇದ್ದಾಗಲೇ ಇಬ್ಬರು, ಮೂವರನ್ನ ಕಟ್ಟಿಕೊಳ್ಳೋದು ಮಾಮೂಲಿ ಆಗಿ ಹೋಗಿದೆ. ಇಬ್ಬರು ಹೆಂಡಿರನ್ನು ಕಟ್ಟಿಕೊಂಡ ಇಂತಹವರ ಸಂದರ್ಶನವನ್ನು ಟಿವಿಯಲ್ಲಿ ನೋಡಿದೆ. ಇಬ್ಬರ ಹೆಂಡಿರ ಮುದ್ದಿನ ಗಂಡನ ಸಂಗಡ ಮುದ್ದಿನ ಮಡದಿಯರೂ ಇದ್ದರು. ಹೀಗೆ ಬಂದಿದ್ದವರು ಥಳಕುಬಳಕಿನ ಪ್ಯಾಟೆ ಮಂದಿ ಅಲ್ಲ. ಭೂಮಿ ತಾಯಿ ನಂಬಿದೋರು. ದುಡಿಮೆಯೇ ಬದುಕು ಅಂತ ಬಾಳುತ್ತಿರುವವರು. 'ಯಾಕಪ್ಪ ಹಿಂಗೆ ಎರಡನೆ ಮದುವೆ ಆದೆ' ಅಂತ ಕೇಳಿದ್ದಕ್ಕೆ ಅವ 'ಒಬ್ಬಳ ಕೈಲಿ ಕೆಲಸ ಸಾಗಕ್ಕಿಲ್ಲ ಅಂತಾವ ಇನ್ನೊಬ್ಬಳ ತಂದೆ' ಅಂದ! ಅವನಿಗೆ ಹತ್ತಾರು ಎಕರೆ ಜಮೀನು ಇದೆಯಂತೆ. ಕೆಲಸಕ್ಕೆ ಕೂಲಿಗಳು ಸಿಗುತ್ತಿರಲಿಲ್ಲವಂತೆ. ಭೂಮಿಯನ್ನು ತೆಕ್ಕಲು

ಅಣಕ



• ಎಚ್.ಎಲ್.ಕೇಶವಮೂರ್ತಿ

ಬಿಡುವುದು ಅನಿವಾರ್ಯ ಆಗಿತ್ತಂತೆ. ಹಾಗೆ ಮ ನೆರೆಹೊರೆಯವರು ಆಡಿಕೊಳ್ಳುತ್ತಿದ್ದರಂತೆ. ಆತನ ಹೆಂ ಇನ್ನೊಬ್ಬಳನ್ನು ತರುವಂತೆ ಒತ್ತಾಯಿಸಿದಳಂತೆ! ಏನಾಯಿತು? ಒಬ್ಬಳಿಗೆ ಬಾಳು ಕೊಟ್ಟ ಹಾಗೂ ಅ ಸಂಬಳ ಇಲ್ಲದೆ ಹಿಟ್ಟುಬಟ್ಟೆಗೆ ನಿಯತ್ತಾಗಿ ದುಡಿ ಆಳು ತಂದಂಗೂ ಆಯ್ತು!

ಈ ಘಟನೆ ಈಗ ಯಾಕೆ ನೆನಪಾಯಿತು ಅ

ಊರಿಗೆ ಬಂದವಳು ನೀರಿಗೆ ಬರುವುದಿಲ್ಲವೆ ಆ ಆದರೆ ಆ ನೀರು ಎನ್ನುವುದು ಊರಿನಿಂದ ಒಂ ಕಿಲೋಮೀಟರು ದೂರದಲ್ಲಿತ್ತಂತೆ. ಊರಿನಲ್ಲಿ ಬೋರು ಇರಲಿಲ್ಲವಂತೆ. ಅಲ್ಲಿಂದಲೇ ನೀರು ಹೊ ಗಿತ್ತಂತೆ. ನೀರು ತರುವುದು ಕಾಲದಿಂದಲೂ ಹೆ ಕೆಲಸ ತಾನೆ. ಅಲ್ಲಿನ ಒಬ್ಬನ ಮನೇಲೂ ಇದೇ ರೂ ಲ್ಲಿತ್ತಂತೆ. ಹೆಂಡತಿ ನೀರು ತರುವುದೇ ಅಲ್ಲದೆ ಕೆಲಸಗಳನ್ನು ಕೂಡ ನಿಭಾಯಿಸುವ ಗಟ್ಟಿಗಿತ್ತಿಯಂತೆ. ಆಕೆಯ ಆರೋಗ್ಯ ಕೆಟ್ಟಿತಂತೆ. ವ್ಯವಸಾಯ ಹಾ ನೀರು ತರುವವರೂ ಇಲ್ಲದಂತಾಯಿತಂತೆ. ಬೇರೆ ಕಾಣದೆ ಯಜಮಾನ ಎರಡನೆ ಮದುವೆ ಮಾಡಿಕೊಂ ದುರ್ಭಿಕ್ಷದಲ್ಲಿ ಅಧಿಕ ಮಾಸ ಅನ್ನುವ ಹಾಗೆ ಮನೆ ತುಂಬಿಸಿಕೊಂಡದ್ದು ಶಕ್ತಿಯನ್ನಲ್ಲ, ನಿಶ್ಶಕ್ತಿಯನ್ನ. ತೀರ್ಥ ಕುಡಿದರೆ ಶೀತ, ಮಂಗಳಾರತಿ ತಗೊಂಡರೆ ಅಂತ ತರಗುಡುವವಳಂತೆ. ಆದರೂ ಒಂದು. ಸಂತಾ ವರ ಪಡಕೊಂಡೇ ಹುಟ್ಟಿದವಳೇ ಇರಬೇಕು. ನೀರು ಆಳಾಗದಿದ್ದರೂ ಸಂಸಾರ ಬೃಹತ್ತಾಗಿ ಬೆಳೆಯಲು ಸ ದಳಂತೆ!

ಯಜಮಾನನಿಗೆ ವಯಸ್ಸು ಏರುತ್ತಿತ್ತು, ಸ ಬೆಳೆಯುತ್ತಿತ್ತು. ನೀರಿನ ಸಮಸ್ಯೆ ಬೃಹದಾಕಾ ಬೆಳೆಯಿತು. ಈ ಸಮಸ್ಯೆ ಪರಿಹಾರಕ್ಕೆ ಯಜಮಾನ ಮಾಡಿದ-ಮೂರನೆ ಮದುವೆ ಆದ! ಒಂದು ರೀ ಇದು ಮುದುಕನ ಮದುವೆ ಆದಂಗೆ ಆಯಿತು.

ಹೆಂಗೋ ಅವನ ನೀರು ಪಾಡು ಅವನು ವ ಆದನಲ್ಲ, ಅದು ಊರಿನವರಿಗೆ ಸರಿ ಕಾಣಿಸಲಿಲ್ಲ 'ಈ ಇಳಿವಯಸ್ನಲಿ ಇದು ಬೇಕಾಗಿತ್ತ ನಿನಗೆ' ಯಾರೋ ಕೇಳಿದ್ದಕ್ಕೆ 'ನೀರ ಯಾರು ನಿಮ್ಮಪ್ಪ ತಂದ್ಕೊ ಅಂತ ಎಗರಿ ಬಿದ್ದನಂತೆ!

ಈ ಸುದ್ದಿ ಅದೆಂಗೋ ಮಾನವಹಕ್ಕು ಆಯೋ ಗಮನಕ್ಕೆ ಬಂದಿತಂತೆ. ಅದು ಅಲ್ಲಿನ ಜಿಲ್ಲಾಧಿಕಾರಿ ಬರೆದು ಕೂಡಲೇ ನೀರು ಸರಬರಾಜು ಏರ್ಪಡಿಸುವಂತೆ ಆದೇಶ ನೀಡಿದೆಯಂತೆ!

(ನೀತಿ: ಊರಿಗೆ ನೀರು ಬೇಕಾದರೆ ಮೂರನೆ ವ ಆಗಿ!)

ನೈತಿಕ ದಿವಾಳಿತನ ತಲುಪಿರುವುದು ಸ್ಪಷ್ಟ

ನೈತಿಕತೆಯನ್ನು ಎಳ್ಳಷ್ಟು ಉಳಿಸಿಕೊಂಡಿರದ ಬಿಜೆಪಿ ಈಗ ಮತ್ತೆ ಭಯೋತ್ಪಾದನೆಯ ಹೆಸರಿನಲ್ಲಿ ಅಮಾಯಕರ ಬದುಕಿನೊಂದಿಗೆ ಆಟವಾಡಲು ಶುರುವಿಟ್ಟುಕೊಂಡಿದೆ. ಅದಕ್ಕೆ ಅಧಿಕಾರಿವರ್ಗ ಸಾಥ್ ನೀಡಿರುವುದು ರಾಜ್ಯದ ದುರಂತ. ಗುಜರಾತ್‌ನಲ್ಲಿ ಮಾಡಿರುವಂತೆ ಇಲ್ಲಿಯೂ ಕೋಮುದ್ವೇಷವನ್ನು ಬಿತ್ತಲು ಆರೆಸ್ಸೆಸ್ ಮತ್ತು ಇನ್ನಿತರ ಚೆಡ್ಡಿ ಸಂಘಟನೆಗಳು ಪಣ ತೊಟ್ಟಂತೆ ಕಾಣುತ್ತಿದೆ. ಗಡ್ಡ ಬಿಟ್ಟು, ಮನೆಯಲ್ಲಿ ಕುರಾನ್ ಇಟ್ಟುಕೊಂಡವರನ್ನು ಭಯೋತ್ಪಾದಕರೆಂದು ಪುಕಾರು ಹಬ್ಬಿಸುತ್ತಾ ತಲಾಶ್ ನಡೆಸುತ್ತಿರುವ ರೀತಿಯನ್ನು ಗಮನಿಸಿದರೆ ಜಾತ್ಯತೀತ ರಾಷ್ಟ್ರವೆಂದು ಹೇಳಿಕೊಳ್ಳುವ ನಮ್ಮ ದೇಶದ ಯಾವ ರಾಜ್ಯದಲ್ಲಿ ನಾವಿದ್ದೇವೆ ಎಂಬ ಪ್ರಶ್ನೆ ದುತ್ತನೆ ಎದುರಾಗುತ್ತದೆ.

ಮಾಡಬಾರದ ಹೊಲಸನ್ನು ಮಾಡಿದ ಬಿಜೆಪಿ ಈಗ ಕೋಮುಸಂಘರ್ಷಕ್ಕೆ ಎಣ್ಣೆ ಸುರಿಯುತ್ತಿರುವುದನ್ನು ನೋಡಿದರೆ ಇವರು ಎಂಥಾ ಹೇಸಿಗೆ ಕೆಲಸ ಮಾಡಲೂ ಹಿಂಜರಿಯುವುದಿಲ್ಲ ಎನಿಸುತ್ತದೆ. ಸಣ್ಣ ಸುದ್ದಿಗಳಿಗೂ ಖಾರಾಮಸಾಲೆ ಹಾಕಿ ಬಿತ್ತರಿಸುವ ಕೆಲ ಮಾಧ್ಯಮಗಳನ್ನು ಗಮನಿಸಿದರೆ ಅವೂ ನೈತಿಕ ದಿವಾಳಿತನ ತಲುಪಿರುವುದು ಸ್ಪಷ್ಟವಾಗುತ್ತದೆ.

ಬರುವ ಚುನಾವಣೆಯಲ್ಲಿ ಜನರ ಬಳಿ ಮತ ಕೇಳಲು ಇದ್ದಬಿದ್ದ ಮಾನವನ್ನೆಲ್ಲಾ ಕಳೆದುಕೊಂಡಿರುವ ಬಿಜೆಪಿಗೆ ಉಳಿದಿರುವುದೊಂದೇ ಉಪಾಯ: ಅದು ಭಯೋತ್ಪಾದನೆಯ ಗುಲ್ಲು ಹಬ್ಬಿಸಿ ಸಮಾಜವನ್ನು ಒಡೆದು ವೋಟ್‌ಬ್ಯಾಂಕ್ ಸೃಷ್ಟಿಸಿಕೊಳ್ಳುವುದು.


ಚರ್ಚುಗಳ ಮೇಲೆ ಕಲ್ಲು ಹೊಡೆದಿದ್ದಾಯ್ತು, ವಿಧಾನಸೌಧದಲ್ಲಿ ಅಶ್ಲೀಲ ಚಿತ್ರ ನೋಡಿದ್ದಾಯ್ತು, ಕರ್ನಾಟಕದ ಸಂಪತ್ತನ್ನೆಲ್ಲಾ ಗುಡಿಸಿ ಗುಂಡಾರ ಮಾಡಿದ್ದೂ ಆಯ್ತು, ಈಗ ಮನುಷ್ಯ-ಮನುಷ್ಯರ ನಡುವೆಯೇ ಕೋಮುಕೊಳ್ಳಿಯನ್ನಿಟ್ಟು ಛಳಿ ಕಾಯಿಸಲು ನೋಡುತ್ತಿರುವ ಬಿಜೆಪಿಗೆ ಇಡೀ ಕರ್ನಾಟಕದ ಜನತೆಯ ಶಾಪ ತಟ್ಟಲಿ.

- ಹಳ್ಳಿ ಬಸವರಾಜ, ಹುಮ್ನಾಬಾದ್

'ಕಂಡಹಾಗೆ' ಅಂಕಣದಲ್ಲಿ ಪ್ರಕಟಗೊಂಡ ಹುಲಿ ಮಚಲಿಯ ಕತೆ ಸೂಪರ್ಬ್ ಆಗಿತ್ತು. ಯಾಕೋ ನನಗೂ ಚೆಡ್ಡಿಗಳ ಬುರ್ನಾಸ್ ಕತೆಗಳನ್ನು ಬರೆದು ಮತ್ತು ಓದಿ ತುಂಬಾ ಬೋರ್ ಆಗಿತ್ತು. ಇಂತಹ ಮನಸ್ಥಿತಿಯಲ್ಲಿದ್ದ ನನಗೆ ಮಚಲಿ ಕತೆ ಒಂದಿಷ್ಟು refreshment ಸಿಕ್ಕಿತು.

ಹಾಗೆಯೇ 'ಜೇಡರ ಕಣಿವೆಯಲ್ಲಿ ಒಂದು ರಾತ್ರಿ' ಅದ್ಭುತವಾಗಿದೆ. ಕೆನೆತ್ ಆಂಡರ್ಸನ್‌ರ ಸಾಹಸವನ್ನು ಓದುವಾಗ ಮೈ ನವಿರೇಳುತ್ತದೆ. ಅನುವಾದಕ ನಾಡಹಳ್ಳಿ ವಸಂತ್ ಅವರಿಗೆ ಧನ್ಯವಾದಗಳು. ಅದನ್ನು ನಾಲ್ಕು ಕಂತಿನಲ್ಲಿ ಮುಗಿಸಬೇಡಿ ಪ್ಲೀಸ್. ಕನಿಷ್ಠ ಹತ್ತು ಕಂತಿನವರೆಗೂ ಮುಂದುವರೆಸಿ.

- ಇಸ್ಮತ್ ಫಜೀರ್, ಮಂಗಳೂರು



ಕರ್ನಾಟಕದಲ್ಲಿ ಎಲ್ಲೆಡೆ ಅರಾಜಕತೆ ತಾಂಡವವಾಡುತ್ತಿದೆ. ಮಂಗಳೂರಿನಲ್ಲಿ ಆರೆಸ್ಸೆಸ್ಸಿನ ಭಾಗವಾದ ಹಿಂದೂ ಜಾಗರಣ ವೇದಿಕೆಯವರು ಅಮಾಯಕ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ದಾಳಿ ಮಾಡುತ್ತಾರೆ.... ಸುಳ್ಯದಲ್ಲಿ ಅದೇ ಆರೆಸ್ಸೆಸ್ಸಿನ ಇನ್ನೊಂದು ಮುಖವಾಡ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸದಸ್ಯರು ಓರ್ವ ಯುವತಿಯ ಮೇಲೆ ಹಲ್ಲೆ ಮಾಡುತ್ತಾರೆ.... ಅದೇ ಎಬಿವಿಪಿಯ ಕಾರ್ಯಕರ್ತರು ಮಂಡ್ಯ ರೈಲು ನಿಲ್ದಾಣದಲ್ಲಿ ನೂರಾರು ಅಮಾಯಕ ಕೂಲಿ ಕಾರ್ಮಿಕರ ಮೇಲೆ ಬರ್ಬರವಾಗಿ ದಾಳಿ ಮಾಡುತ್ತಾರೆ.... ಇದೇ ಹೊತ್ತಿನಲ್ಲಿ ಹಲವು ಹಿಂದೂತ್ವ ಪರ ಮಾಧ್ಯಮಗಳು ಭಯೋತ್ಪಾದನೆ ಎಂಬ ಭೂತವನ್ನು ಸೃಷ್ಟಿಸಿ ಕೋಮುಗಲಭೆಗಳು ನಡೆಯುವಂತೆ ಮಾಡುತ್ತವೆ.

ಈ ರಾಜ್ಯದಲ್ಲಿ ಗೃಹ ಸಚಿವ ಎನ್ನುವವರು ಇದ್ದಾರೆಯೇ?

- ಓದುಗ, ಎಸ್‌ಎಂಎಸ್ ಮೂಲಕ

ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಓರ್ವ ವಿದ್ಯಾರ್ಥಿನಿಯ ಮೇಲೆ ಹಲ್ಲೆ ಮಾಡಿ ಆಕೆಯನ್ನು ಬೆದರಿಸುವ ಮೂಲಕ ಆರೆಸ್ಸೆಸ್ಸಿನ ಅರೆ ಚೆಡ್ಡಿಗಳು - ಅಂದರೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನವರು - 'ಸಂಸ್ಕೃತಿ ರಕ್ಷಣೆ'ಯಲ್ಲಿ ತಾವೇನೂ ಕಡಿಮೆ ಇಲ್ಲ ಎಂದು ತೋರಿಸಹೊರಟಿದ್ದಾರೆ.

ಮಂಗಳೂರಿನಲ್ಲಿ ಕಳೆದ ಹಲವಾರು ವರ್ಷಗ ಮುಸ್ಲಿಂ ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿ ಮುಸ್ಲಿ ಶಿಕ್ಷಣದಿಂದ ದೂರ ಆಗುವಂತೆ ಮಾಡಲಾಗಿದೆ. ದಾಳಿಯು ಎಷ್ಟು ಭಯಂಕರವಾಗಿರುತ್ತದೆ ಎನ್ನು ಕೆಲವೊಂದು ಮುಸ್ಲಿಂ ವಿದ್ಯಾರ್ಥಿ ಕಾಲೇಜನ್ನು ಅರ್ಧಕ್ಕೆ ಮೊಟಕುಗೊಳಿ

ಅಲ್ಲದೆ ಮಂಗಳೂರು ವಿವಿ ಅಧ ಬರುವ ಸುಳ್ಯ, ಪುತ್ತೂರು, ಬೆಳ್ ಬಂಟ್ವಾಳ, ಮುಲ್ಕಿ, ಸೂರತ್ಕಲ್ ಮು ಹಲವಾರು ಕಡೆಗಳಲ್ಲಿ ಎಬಿವಿಪಿ ಉ ಮುಸ್ಲಿಂ ವಿದ್ಯಾರ್ಥಿಗಳು ಒಳಗಾಗಿದ್ದಾ

ಸುಳ್ಯ ವಿಚಾರಕ್ಕೆ ಸಂಬಂಧಿಸಿದಂತೆ ಹಲ್ಲೆಗೊ ವಿದ್ಯಾರ್ಥಿನಿಯ ವಿರುದ್ಧವೇ ಓರ್ವ ದಲಿತ ವಿದ್ಯಾರ್ಥಿ ಬಳಸಿ ಆಕೆಯ ವಿರುದ್ಧ ಜಾತಿನಿಂದನೆ ಕೇಸನ್ನು ದಾ ಲಾಗಿದೆ. ಮೇಲುವರ್ಗದ ವಿದ್ಯಾರ್ಥಿಗಳೆನಿಸಿ ಕೊ ಪಕ್ಕಾ ಕುತಂತ್ರವಿದು. ಇಲ್ಲೂ ದಲಿತರನ್ನು ಮತ್ತಷ್ಟು ಬ ಮಾಡುತ್ತಿರುವುದು ಎದ್ದು ಕಾಣಿಸುತ್ತದೆ. ಇದು ನ ಶೋಚನೀಯ.

- ಇರ್ಶಾದ್ ಮೊಹಮ್ಮದ್, ಮಂಗ

ಕಡಿದಾಳು ಶಾಮಣ್ಣನ ಸರಕು ಖಾಲಿಯಾಗಿಲ್ಲ ಅವರ ನಿಲುವು ಬದಲಾಗೊಲ್ಲ....


That is Shamanna!

-ಸುರೇಶ್ ಅರಸಲು, ಶಿವ

ವಿ.ಸೂ. : ನಿಮ್ಮ ಅನಿಸಿಕೆಗ
lankesh70@rediffmail.co
ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹ
ನಿಮ್ಮ ಪ್ರತಿಕ್ರಿಯೆಗಳನ್ನು 9980331
ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹ

...ೊಟ್ಲಲ್ಲಪ್ಪೋ ಕೈ ಡೈರೆಕ್ಟರ್‌ನನ್ನೇ ಕಿಡ್ನಾಪ್ ಮಾಡಿದ ಹೀರೋಯಿನ್!

...ೊಟ್ಲಲ್ಲಪ್ಪೋ ಕೈ ಚಿತ್ರದ ಹೆಸರಿಗೂ ಅದರ ಸುತ್ತ ...ಯುತ್ತಿರುವ ಕಲಹ, ಕಿತಾಪತಿ, ಕಟ್ಟಾಟಕ್ಕೂ ಎಂತದೋ ...ಳೀಯ ಸಂಬಂಧವಿರುವಂತಿದೆ!



...ಲ್ಲಿಗೆ ನಾಲ್ಕು ತಿಂಗಳ ಹಿಂದಷ್ಟೇ 'ಕೊಟ್ಲಲ್ಲಪ್ಪೋ ...ತ್ರದ ಹಿರೋಯಿನ್ ನಯನಾ ಕೃಷ್ಣ ಆದರ ಡೈರೆಕ್ಟರ್ ...ಯ ವಿರುದ್ಧ ಸಂಜಯ್‌ನಗರದ ಪೊಲೀಸ್ ಠಾಣೆಯ ...ಮು ಹೊಟ್ಟಿ ಕಂಪ್ಲೇಂಟ್ ಕೊಟ್ಟು ಬೀದಿರಂಪ ಮಾಡಿ ...ಬಹುತೇಕ ಪತ್ರಿಕೆ, ಟೀವಿಗಳಲ್ಲಿ ದಿನವಿಡೀ ಚರ್ಚೆ, ...ದ್ದಕ್ಕೆ ಕಾರಣವಾಗಿದ್ದು ಹಳೇ ಕತೆ. ಈಗ ಮತ್ತೆ ...ನಾಕೃಷ್ಣ ಭಯಾನಕ ದುಸ್ಸಾಹಸವೊಂದಕ್ಕೆ ಕೈಯಿಟ್ಟಿದ್ದು ... ಅಂದರೆ ಆಗಸ್ಟ್ 28 ಮಂಗಳವಾರದ ಸಂಜೆ.

ಅವತ್ತು ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋ ... ಕೊಟ್ಲಲ್ಲಪ್ಪೋ ಕೈ ಚಿತ್ರದ ರೀರೆಕಾರ್ಡಿಂಗ್‌ನಲ್ಲಿ ...ಯಾಗಿದ್ದ ಡೈರೆಕ್ಟರ್ ಋಷಿಯನ್ನು ಏಕಾಏಕಿ ಹತ್ತಾರು ...ವಿ ರೌಡಿಗಳ ಗ್ಯಾಂಗ್ ಬಂದು ಸುತ್ತುವರಿದಿದ್ದೇ ...ಬ್ಲು-ಲಾಂಗ್ ಝಳಪಿಸಿದ್ದಾರೆ. ಏನಾಗುತ್ತಿದೆ ಎಂದು ...ತ್ತಾಗುವ ಮೊದಲೇ ದಾಳಿಯಿಟ್ಟ ರೌಡಿ ಪಡೆ ...ನ್, ಅಕ್ಕನ್, ಎತ್ತೇ ಬಿಡ್ತೀವಿ, ಚೋಟಿ ನಿಕಾಲಿ ...ತ್ತೀವಿ ಎಂದೆಲ್ಲ ಹೂಂಕರಿಸಲಾರಂಭಿಸಿದ್ದಾರೆ. ಇನ್ನೇನು ...ಕ್ಟರ್ ಋಷಿಗೆ ಒದೆ ಬೀಳಬೇಕೆನ್ನುವಷ್ಟರಲ್ಲಿ ರೌಡಿ ...ಯ ನಡುವಿನಿಂದ ಮಾರಿಮುತ್ತು ಗೆಟಪ್ಪಿನ ಘಟವಾಣಿ ...ನಸೊಬ್ಬಳು ನುಗ್ಗಿ ಬಂದಿದ್ದೇ ಡೈರೆಕ್ಟರ್ ಋಷಿಯ ...ಳು ಪಟ್ಟಿ ಹಿಡಿದು 'ಬೋ....ಮಗನೇ... ಸೂ...ಮಗನೇ; ... ಯಾರು ಅಂತ ಗೊತ್ತೇನೋ? ಮುಚ್ಕೊಂಡು ... ಸಿನಿಮಾನ ನಯನಾ ಹೆಸರಿಗೆ ಬರೆದು ಕೊಟ್ಟೋ ... ಬದುಕುತ್ತೀಯ. ಇಲ್ಲಾ ಅಂದ್ರೆ ನಿನ್ನನ್ನ ಎತ್ತಾಕೊಂಡು ...ಗ್ತೀನಿ.....!' ಎಂದಿದ್ದೇ ರಸ್ತೆ ರಂಪ ಮಾಡಿದ್ದಾಳೆ.

...ಬಂದ ರೌಡಿಗಳ ಆರ್ಭಟ ಮತ್ತು ಅವರ ...ಮುಕಿಯಂತಿದ್ದ ಕೇಡಿ ಹೆಂಗಸಿನ ಅಟ್ಟಹಾಸ ಕಂಡೇ ...ಮುಂಡೇಶ್ವರಿ ಸ್ಟುಡಿಯೋದ ಸಿಬ್ಬಂದಿ ಕಂಗಾಲಾಗಿದ್ದಾರೆ. ...ಗೇ ರೌಡಿ ಪಡೆ ಕಟ್ಟಿಕೊಂಡು ಆವತ್ತು ಡೈರೆಕ್ಟರ್ ಋಷಿಯ ಮೇಲೆ ದಾಳಿಯಿಟ್ಟವಳು ಜಯನಗರದ ಖತರ್‌ನಾಕ್ ಹೆಂಗಸು ಅನಿತಾ. ಹೆಸರಿಗೆ ತಾನು ದುರ್ಗಾ ಶಕ್ತಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಎಂದು ಹೇಳಿಕೊಳ್ಳುತ್ತಾಳೆ. ಏನಿದು ದುರ್ಗಾ ಶಕ್ತಿ ಮಹಿಳಾ ಸಂಘಟನೆ ಎಂದು ತಲೆ ಕೆಡಿಸಿಕೊಂಡರೆ ಈತನಕ ಪತ್ರಿಕೆಗಳಾಗಲಿ, ಪೊಲೀಸರಾಗಲಿ ಇಂಥದೊಂದು ಸಂಘಟನೆಯಿದೆ ಎಂಬುದನ್ನೇ ಕಂಡಿಲ್ಲ ಕೇಳಿಲ್ಲ.

ಹೆಸರೇ ಸೂಚಿಸುವಂತೆ 'ದುರ್ಗಾ ಶಕ್ತಿ ಮಹಿಳಾ ಸಂಘಟನೆ' ಅನಿತಾ ಎಂಬ ಲೇಡಿ ರೌಡಿಯ ಗೂಂಡಾಗಿರಿಗೆಂದೇ ತಲೆ ಎತ್ತಿದ ಲೆಟರ್‌ಹೆಡ್, ನಕಲಿ ಸಂಘಟನೆ. ಜಯನಗರದ ಬಿಜೆಪಿ ಪುಢಾರಿ ಅನಿತಾ ಇದರ ಸ್ವಯಂ ಘೋಷಿತ ಅಧ್ಯಕ್ಷೆ. ಸದ್ಯ ಬಿಜೆಪಿ ಅಧಿಕಾರದಲ್ಲಿ ಇದೆಯಾದ್ದರಿಂದ ತಾನೂ ಬಿಜೆಪಿ ಎಂದು ಅಸಹಾಯಕರ ವಿರುದ್ಧ ಹಾವಳಿಯಿಡುತ್ತಾಳೆ. ಈಕೆಯ ವಿರುದ್ಧ ಸುತ್ತಮುತ್ತಲ ಪೊಲೀಸ್ ಠಾಣೆಗಳಲ್ಲಿ ಬೇಕಾಬಿಟ್ಟಿ ಕ್ರಿಮಿನಲ್ ಕೇಸುಗಳಿವೆ. ಈ ಭಾಗದ ಪುಡಿ ರೌಡಿಗಳಿಗೆಲ್ಲ ಕರೆದು ತನ್ನ ಮನೆಯಲ್ಲೇ ಗುಂಡು ತುಂಡಿನ ವ್ಯವಸ್ಥೆ ಕಲ್ಪಿಸುವ ಘಟವಾಣಿ ಅನಿತಾಗೆ ಡೈರೆಕ್ಟರ್ ಋಷಿಯನ್ನು ಎಳೆದೊಯ್ದು ರಿಪೇರಿ ಮಾಡುವಂತೆ ಸುಪಾರಿ ಕೊಟ್ಟವಳು ಕೊಟ್ಲಲ್ಲಪ್ಪೋ ಕೈ ಚಿತ್ರದ ಹೀರೋಯಿನ್ ನಯನಾ ಕೃಷ್ಣ!


ಅದೇನು ಕರ್ಮವೋ ಗೊತ್ತಿಲ್ಲ, ಕೊಟ್ಲಲ್ಲಪ್ಪೋ ಕೈ ಚಿತ್ರ ಸೆಟ್ಟೇರಿದಾಗಿನಿಂದಲೂ ಹೀರೋಯಿನ್ ನಯನಾ ಮತ್ತು ಡೈರೆಕ್ಟರ್ ಋಷಿಯ ಜಾತಕವೇ ಕೂಡಿ ಬರುತ್ತಿಲ್ಲ. ಶುರುವಿನಲ್ಲಿ ಋಷಿ ತನ್ನನ್ನು ಅವಾಚ್ಯವಾಗಿ ಬಯ್ಯುತ್ತಾನೆಂದು ಕಂಡಕಂಡಲ್ಲಿ ಹೇಳಿಕೊಂಡಳು. ತದನಂತರ ತನಗೆ ಋಷಿ 25 ಲಕ್ಷ ವಂಚಿಸಿದ್ದಾನೆಂದು ಸುಳ್ಳು ದೂರು ದಾಖಲಿಸಿದಳು. ಕರೆದು ವಿಚಾರಣೆ ಮಾಡಿದ ಪೊಲೀಸರಿಗೆ ಗೊತ್ತಾಗಿದ್ದೇನೆಂದರೆ ನಯನಾ ದುಡ್ಡು ಕೊಟ್ಟಿದ್ದು ಋಷಿಗಲ್ಲ; ಕೊಟ್ಲಲ್ಲಪ್ಪೋ ಕೈ ಚಿತ್ರದ ನಿರ್ಮಾಣಕ್ಕೆ!

ಇನ್ನೂ ವಿಕಟವೆಂದರೆ ನಯನಾ ಕೊಟ್ಟಿದ್ದು ಕೇವಲ ಎರಡು ಲಕ್ಷ ಮಾತ್ರ.


ಅದಕ್ಕೆ ಬಡ್ಡಿ ಚಕ್ರಬಡ್ಡಿ ಸೇರಿಸಿ 8 ಲಕ್ಷಕ್ಕೇರಿಸಿದ ನಯನಾ ಇಡೀ ಚಿತ್ರವನ್ನು ತನ್ನ ಹೆಸರಿಗೆ ಬರೆಸಿಕೊಳ್ಳುವ ಹುನ್ನಾರದಿಂದಲೇ ತಾನು 25 ಲಕ್ಷ ಕೊಟ್ಟಿದ್ದೇನೆಂದೂ ಅದಕ್ಕೆ ಋಷಿಯಿಂದ 25 ಲಕ್ಷಕ್ಕೇ ಚೆಕ್ ಬರೆಸಿಕೊಂಡಿದ್ದೆ ಎಂದೂ ಪೊಲೀಸರಿಗೆ ಕತೆ ಹೊಡೆದಿದ್ದಳು. ಸತ್ಯ ಗೊತ್ತಾಗಿದ್ದೇ ಸಂಜಯನಗರ ಪೊಲೀಸರು ಉಗಿದಟ್ಟಿದ್ದರು.

ಯಾವತ್ತು ಪೊಲೀಸರನ್ನು ಮುಂದಿಟ್ಟುಕೊಂಡು ಇಡೀ ಚಿತ್ರವನ್ನೇ ತನ್ನ ವಶಕ್ಕೆ ಪಡೆಯುವ ಆಕೆಯ ಉದ್ದೇಶ ಈಡೇರಲಿಲ್ಲವೋ ಆನಂತರ ಜಾಲಹಳ್ಳಿಯ ವಂಚಕ ಶಶಿ ಎಂಬಾತನನ್ನು ಛೂಬಿಟ್ಟಳು. ಅದಕ್ಕೂ ಋಷಿ ಜಗ್ಗದೇ ಹೋದಾಗ ನಾಗರಬಾವಿಯ ಪುಡಿ ರೌಡಿ ಸಾಗರ್ ಎಂಬಾತನನ್ನು ಛೂಬಿಟ್ಟಳು. ಕೆಲ ಟೀವಿ ವರದಿಗಾರರು, ಟ್ಯಾಬ್ಲಾಯ್ಡ್ ರಿಪೋರ್ಟರ್‌ಗಳನ್ನೆಲ್ಲ ಕರೆಸಿ ತನ್ನ ಮನೆಯಲ್ಲೇ ಮೋಜಿನ ಗೋಷ್ಠಿ ಏರ್ಪಡಿಸಿ ಋಷಿ ವಿರುದ್ಧ ಛೂಬಿಟ್ಟಳು. ಕೊಟ್ಟಿದ್ದು ಬರೇ ಎರಡು ಲಕ್ಷ. ಅದು ಸಿನಿಮಾದ ಶೂಟಿಂಗ್ ಖರ್ಚಿಗೇ ಹೊರತು ತನಗಲ್ಲ. ಕೊಟ್ಟ ಎರಡು ಲಕ್ಷಕ್ಕೆ ಬಡ್ಡಿ ಚಕ್ರಬಡ್ಡಿ ಹಾಕಿ 8 ಲಕ್ಷ ಎನ್ನುತ್ತಾಳೆ. ಕೆಲವರ ಬಳಿ ತಾನು 25 ಲಕ್ಷ ಕೊಟ್ಟೆ ಎನ್ನುತ್ತಾಳೆ. ಇನ್ನೂ ಸಿನಿಮಾನೇ ಮುಗಿದಿಲ್ಲ, ಅದು ಡಬ್ಬಿಂಗ್, ರೀರೆಕಾರ್ಡಿಂಗ್, ಸೆನ್ಸಾರ್ ಎಲ್ಲಾ ಮುಗಿದು ಬಿಡುಗಡೆಯಾದ ಮೇಲೆ ತಾನೇ ಹಾಕಿದ ದುಡ್ಡನ್ನು ಕೊಡುವುದು?

ಇಂಥ ಲೆಕ್ಕಾಚಾರದಲ್ಲೇ ಡೈರೆಕ್ಟರ್ ಋಷಿ ಹೀರೋಯಿನ್ ನಯನಾಳ ಬ್ಲಾಕ್‌ಮೇಲ್, ಗೂಂಡಾಗಿರಿ ಯಾವುದಕ್ಕೂ ಜಗ್ಗದೆ ತನ್ನ ಪಾಡಿಗೆ ತಾನಿದ್ದು ಬಿಟ್ಟ. ಹಾಗಂತ ಹೀರೋಯಿನ್ ಬಿಡಬೇಕಲ್ಲ.



ಹೊಟ್ಟೆಬಟ್ಟೆ ಕಟ್ಟಿ, ತಂತ್ರಜ್ಞರು, ಕಾರ್ಮಿಕರಿಗೆಲ್ಲ ಇನ್ನೂ ಸಂಬಳ ಬಾಕಿಯಿಟ್ಟು, ಅತ್ಯಂತ ಕಮ್ಮಿ ಖರ್ಚಿನಲ್ಲಿ ಮುಗಿಸಿದ ಚಿತ್ರದ ಬಗ್ಗೆ ಈಗಾಗಲೇ ಗಾಂಧಿ ನಗರದಲ್ಲಿ ಕುತೂಹಲವಿದೆ. ದಂಡುಪಾಳ್ಯ ಹಿಟ್ ಆದ ನಂತರ ಹೆಚ್ಚೂಕಮ್ಮಿ ಅದೇ ದಾಟಿಯಲ್ಲಿ ಬಂದ ಕೊಟ್ಲಲ್ಲಪ್ಪೋ ಕೈಗಾಗಿ ಡಿಸ್ಟ್ರಿಬ್ಯೂಟರ್‌ಗಳಲ್ಲೂ ಪೈಪೋಟಿಯಿದೆ. ಬೆಂಗಳೂರಿನಲ್ಲಿ ಅಲ್ಲದಿದ್ದರೂ ಬಿ.ಸಿ. ಸೆಂಟರ್‌ಗಳಲ್ಲಿ ಹಸಿಬಿಸಿ ಕ್ರೌರ್ಯ ಮತ್ತು



ಮೈಮಾಟದ ದೃಶ್ಯಾವಳಿಗಳಿಂದಾಗಿ ಚಿತ್ರ ದುಡ್ಡು ಬಾಚುವುದಂತೂ ಗ್ಯಾರಂಟಿ. ಈ ಹಿಂದೆ ಇದೇ ನಯನಾಳ ಹಾಟ್‌ಹಾಟ್ ಮೈದರ್ಶನದಿಂದಾಗಿ 'ರಂಭಾ' ಎಂಬ ಚಿತ್ರ 50 ಲಕ್ಷ ರೂಪಾಯಿಗಳಷ್ಟು ಲಾಭ ಗಳಿಸಿತ್ತು. ಈಗ 'ಕೊಟ್ಲಲ್ಲಪ್ಪೋ ಕೈ' ಅವರ ದುಪ್ಪಟ್ಟು ಅಂದರೆ ಕಮ್ಮಿಯೆಂದರೂ ಎರಡು ಕೋಟಿ ಗಳಿಸುವಷ್ಟು ನಿರೀಕ್ಷೆಯಿರುವಾಗಲೇ ಅದನ್ನು ಅಗದೀ ಕಮ್ಮಿ ರೇಟಿಗೆ ಲಪಟಾಯಿಸಿ ಲಾಭವನ್ನೆಲ್ಲ ತಾನೇ ದೋಚುವುದು ನಯನಾಳ ಹುನ್ನಾರ.

ಇಂಥ ಲೆಕ್ಕ ಹಾಕಿಯೇ ಜಯನಗರದ ಲೇಡಿ ರೌಡಿ ಅನಿತಾಳನ್ನು ಛೂ ಬಿಟ್ಟಿದ್ದಾಳೆ. ಆಗಸ್ಟ್ 28 ರ ಸಂಜೆ ಏಕಾಏಕಿ ಚಾಮುಂಡೇಶ್ವರಿ ಸ್ಟುಡಿಯೋಕ್ಕೆ ನುಗ್ಗಿದ ಅನಿತಾ ಮತ್ತಾಕೆಯ ರೌಡಿ ಪಡೆ ಡೈರೆಕ್ಟರ್ ಋಷಿಯನ್ನು ಅಟಕಾಯಿಸಿಕೊಂಡಿದ್ದೇ ಕೊಲೆ ಬೆದರಿಕೆ ಹಾಕಿದ್ದಾರೆ. ಅಷ್ಟರಲ್ಲೇ ಹೀರೋಯಿನ್ ನಯನಾ ಕೂಡ ಅನಿತಾಳ ರೌಡಿ ಗ್ಯಾಂಗಿನ ಜೊತೆ ಸೇರಿಕೊಂಡು ಋಷಿಯನ್ನು ತನ್ನ ಕಾರಿಗೆ ಎತ್ತಾಕಿಕೊಂಡಿದ್ದಾಳೆ.

ಆದರೆ ಹೀರೋಯಿನ್ ನಯನಾ ಮತ್ತು ಲೇಡಿ ರೌಡಿ ಅನಿತಾ ಇಲ್ಲೊಂದು ಉಪಾಯಕಾರಿ ಟ್ರಿಕ್ ಬಳಸಿದ್ದಾರೆ. ಹಾಗೆ ಋಷಿಯನ್ನು ಕಾರಿಗೆ ಹಾಕಿಕೊಂಡಿದ್ದೇ ಊರೆಲ್ಲಾ ಸುತ್ತಾಡಿಸಿ, ಕಾರಲ್ಲೇ ಮನಸ್ಸೋಚ್ಛೆ ಥಳಿಸಿದ್ದಾರೆ. ಇನ್ನೆಲ್ಲಿ ಕಿಡ್ನಾಪ್ ಮತ್ತು ಕೊಲೆಯತ್ನದ ಕೇಸಲ್ಲಿ ತಾವು ಜೈಲುಪಾಲಾಗಬೇಕಾಗುತ್ತೋ ಎಂದು ನೇರವಾಗಿ ಸಂಜಯ್‌ನಗರ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಅಲ್ಲಿ ಮೊದಲೇ ಪೊಲೀಸರಿಗೆ ಪ್ರಸಾದ ತಿನ್ನಿಸಿ ಆಗಿತ್ತಾದ್ದರಿಂದ ಅಪಹರಿಸಿ ತಂದಿದ್ದ ಋಷಿಯಿಂದ ದೂರು ಪಡೆದು ನಯನಾ ಮತ್ತು ಅನಿತಾರನ್ನು ಅವರ ರೌಡಿ ಗ್ಯಾಂಗ್ ಸಮೇತ ಜೈಲಿಗೆ ಹಾಕಬೇಕಿದ್ದ ಪೊಲೀಸರು 'ನಿನ್ನನ್ನು ಚೀಟಿಂಗ್ ಕೇಸಿನ ಮೇಲೆ ಅರೆಸ್ಟ್ ಮಾಡ್ತೀವಿ, ಜೈಲಿಗೆ ಹಾಕ್ತೀವಿ....' ಎಂದೆಲ್ಲಾ ಹೆದರಿಸಿ ಋಷಿಯಿಂದಲೇ ಇನ್ನೆರಡು ತಿಂಗಳಲ್ಲಿ ದುಡ್ಡು ಕೊಡುತ್ತೇನೆಂದು ಬರೆಸಿಕೊಂಡಿದ್ದಾರೆ.

ಇತ್ತ ಡೈರೆಕ್ಟರ್ ಋಷಿಗೆ ಕೊಲೆ ಬೆದರಿಕೆ ಹಾಕಿ ಕಿಡ್ನಾಪ್ ಮಾಡಿದ ಕೇಸೂ ಇಲ್ಲ, ಜೈಲು ಪಾಲಾಗುವುದೂ ತಪ್ಪಿತ್ತು, ಜೊತೆಗೆ ಪೊಲೀಸರನ್ನೇ ಛೂಬಿಟ್ಟು ಡೈರೆಕ್ಟರ್ ಋಷಿಯಿಂದ ತಮಗೆ ಬೇಕಾದಂತೆ ಬರೆಸಿಕೊಂಡಿದ್ದೂ ಆಯ್ತು. ಮುಂದೆ ಇದೇ ಬರೆದುಕೊಟ್ಟಿದ್ದನ್ನು ಬಳಸಿಕೊಂಡು ಇಡೀ ಚಿತ್ರಕ್ಕೆ ತನ್ನದೇ ದುಡ್ಡು ಎಂದುಬಿಟ್ಟರೆ ಎರಡು ಕೋಟಿ ಬಜೆಟ್ಟಿನ ಚಿತ್ರವನ್ನು ಪುಡಿಕಾಸಿಗೆ ದೋಚಬಹುದಲ್ಲ?

ಅಂತೂ ಗಾಂಧಿನಗರದ ಮಟ್ಟಿಗಿನ ಹೀರೋಯಿನ್ನಳ ಗೂಂಡಾಗಿರಿ ವಿರುದ್ಧ ಡೈರೆಕ್ಟರ್ ಋಷಿಗೆ ರಕ್ಷಣೆ ಕೊಡುವವರೇ ಇಲ್ಲ. ರೌಡಿಗಳ ಗೂಂಡಾಗಿರಿ ಆಯ್ತು ರಿಯಲ್ ಎಸ್ಟೇಟ್ ರೌಡಿಸಂ ಮುಗಿಯಿತು. ಈಗ ಹೀರೋಯಿನ್ ರೌಡಿಸಂ ಶುರುವಾಗಿದೆ. ವಿಚಿತ್ರವೆಂದರೆ ಇದಕ್ಕೆ ರೌಡಿಗಳೂ-ಪೊಲೀಸರೂ ಒಟ್ಟೊಟ್ಟಿಗೆ ಒಂದೇ ತಟ್ಟೆಯಲ್ಲಿ ಊಟಕ್ಕೆ ಕುಳಿತಂತೆ ಪರಸ್ಪರ ಕೈಜೋಡಿಸಿದ್ದಾರೆ. •

ಈಗಿನ ತಲೆಮಾರಿನ ನಿರ್ಮಾಪಕರಿಗೆ ಒಂದು ಪಾಠ

ಮುಂದಿನ ವಾರ ಬಿಡುಗಡೆಯಾಗಲಿರುವ 'ಚಾರುಲತ' ಚಿತ್ರದ ಬಗ್ಗೆ ...ದಿಷ್ಟು ಕುತೂಹಲಕಾರಿ ವಿಷಯಗಳು ಹೀಗಿವೆ.

ಈ ಚಿತ್ರವನ್ನು ದ್ವಾರಕೀಶ್ ಲಾಂಛನದಡಿ ಏಕಕಾಲದಲ್ಲಿ ಒಟ್ಟು ನಾಲ್ಕು ...ಷೆಗಳಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಕನ್ನಡ ಮತ್ತು ಮಲಯಾಳಂ ...ಷೆಯಲ್ಲಿ ಮಾತ್ರ ದ್ವಾರಕೀಶ್ ಸಂಸ್ಥೆಗೆ ಶೇ.75 ರಷ್ಟು ಪಾಲು ಇರುತ್ತದೆ. ...ಲುಗು ಮತ್ತು ತಮಿಳು ಭಾಷೆಯಲ್ಲಿ ಈ ಚಿತ್ರ ಗ್ಲೋಬಲ್ ಒನ್ ಎಂಬ ...ಸ್ಥೆಯ ಜೊತೆಗೆ ಪಾಲುದಾರಿಕೆಯಲ್ಲಿ ದ್ವಾರಕೀಶ್ ಅವರು ನಿರ್ಮಿಸಿದ್ದಾರೆ. ... ಭಾಷೆಯಲ್ಲಿ ದ್ವಾರಕೀಶ್‌ರಿಗೆ ಲಾಭದಲ್ಲಿ ಶೇ.25 ಮಾತ್ರ ದೊರಕುತ್ತದೆ.

... ಕಳೆದ 50 ವರ್ಷಗಳಿಂದ ಚಿತ್ರರಂಗದಲ್ಲಿ ದುಡಿಯುತ್ತಿರುವ ದ್ವಾರಕೀಶ್ ...ದನೇ ಬಾರಿಗೆ ಒಟ್ಟು ನಾಲ್ಕು ಭಾಷೆಯಲ್ಲಿ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ...ದರೆ ಈ ಹಿಂದೆ ಸ್ವಂತವಾಗಿ ಚಿತ್ರವನ್ನು ನಿರ್ಮಿಸಿದ್ದ ದ್ವಾರಕೀಶ್ ಈಗ ...ದಲ ಬಾರಿಗೆ ಪಾಲುದಾರಿಕೆಯಲ್ಲಿ 'ಚಾರುಲತ'ವನ್ನು ಮಾಡಿ ಮುಗಿಸಿದ್ದಾರೆ. ... ಹಿಂದೆ ಅವರು ಏಕಕಾಲದಲ್ಲಿ ನಾಲ್ಕು ಭಾಷೆಗಳಲ್ಲಿ ನಿರ್ಮಿಸಿದ್ದ ಚಿತ್ರ ...ಫ್ರಿಕಾದಲ್ಲಿ ಶೀಲ'. ಆ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ...ದ್ದುಹೋಗಿತ್ತು, ಆಗ ಉದ್ಯಮದವರೆಲ್ಲ ಈ ಚಿತ್ರದ ಬಗ್ಗೆ 'ಆಫ್ರಿಕಾದಲ್ಲಿ ...-ಭಾರತದಲ್ಲಿ ಸಾಲ' ಎಂದು ತಮಾಷೆ ಮಾಡಿದ್ದರು. ಬಹುಶಃ ಆ ...ರಣಕ್ಕೇ ಇರಬೇಕು, ಈ ಬಾರಿ ದ್ವಾರಕೀಶ್ ಪಾಲುದಾರಿಕೆಯಲ್ಲಿ ಚಿತ್ರವನ್ನು ...ರ್ಮಿಸಿ, ಅದರ ಬಿಡುಗಡೆಗೂ ಮುನ್ನ ಲಾಭವನ್ನೂ ಕಂಡು ದ್ವಾರಕೀಶ್ ... ಜಾಣತನವನ್ನು ಮೆರೆದಿದ್ದಾರೆ.


ಅಂದಹಾಗೆ, ಈ ಬಾರಿ ದ್ವಾರಕೀಶ್ ಅವರನ್ನು ಇನ್ನೊಂದು ಕಾರಣಕ್ಕೆ ...ನಂದಿಸಲೇಬೇಕಿದೆ. ಅದೇನೆಂದರೆ ಈ ಚಿತ್ರ ಥಾಯ್ ಭಾಷೆಯಲ್ಲಿ ಬಂದಿದ್ದ ...ಲೋನ್' ಎಂಬ ಚಿತ್ರದ ರೀಮೇಕ್ ಅಂದು ಅವರೇ ಘೋಷಿಸಿದ್ದಾರೆ. ... ಅಲ್ಲ, ಆ ಚಿತ್ರದ ಹಕ್ಕನ್ನು ಅಧಿಕೃತವಾಗಿ ಹಣ ಕೊಟ್ಟು ಖರೀದಿಸಿದ್ದಾರಂತೆ. ...ದಲ್ಲಿ, ಆ ಒರಿಜಿನಲ್ ಕಥೆಗಾರನ ಹೆಸರನ್ನೇ ಇಲ್ಲೂ ನೀಡಿದ್ದಾರಂತೆ. ... ರಿಮೇಕ್ ಚಿತ್ರ ಮಾಡಿದ್ದರೂ ಮೂಲ ಸಿನಿಮಾದವರಿಗೆ ಕ್ರೆಡಿಟ್ ... ಕ್ಯಾಶ್ ಎರಡನ್ನೂ ಕೊಡುವ ಮುಖಾಂತರ ದ್ವಾರಕೀಶ್ ಜಂಟಲ್‌ಮ್ಯಾನ್ ...ಸಿಕೊಂಡಿದ್ದಾರೆ.

'ಚಾರುಲತ' ಚಿತ್ರ ಮುಂದಿನ ವಾರ ನಾಲ್ಕೂ ಭಾಷೆಗಳಲ್ಲಿ ಸುಮಾರು ...00 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ಈ ಚಿತ್ರ ಯಾವುದಾದರೊಂದು ...ಯಲ್ಲಿ ಜಯಭೇರಿ ಬಾರಿಸಿದರೂ ಕೂಡಲೇ ಅದನ್ನು ಹಿಂದಿಯಲ್ಲೂ ...ಮಾಣ ಮಾಡುವ ಐಡಿಯಾವನ್ನು ದ್ವಾರಕೀಶ್ ಹಾಕಿಕೊಂಡಿದ್ದಾರೆ.

ಈ ಚಿತ್ರದಲ್ಲಿ ಕಷ್ಟಕರವಾದ 'ಸಿಯಾಮಿ' ಅವಳಿಜವಳಿ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿರುವ ನಾಯಕಿ ಪ್ರಿಯಾಮಣಿಯನ್ನು ಪ್ರಶಸ್ತಿಗಳು ಹುಡುಕಿಕೊಂಡು ಬರುವ ಸಾಧ್ಯತೆಯೂ ಇದೆ ಎಂಬ ಮಾತು ಕೇಳಿಬರುತ್ತಿವೆ.

ದ್ವಾರಕೀಶ್ ಅವರಿಗೆ ಈಗ 70 ವಯಸ್ಸು, ಆದರೆ ಈ ವಯಸ್ಸಿನಲ್ಲೂ ಅವರ ಸಿನಿಮಾ ವ್ಯಾಮೋಹ ಕಡಿಮೆ ಆಗಿಲ್ಲ. ಇತ್ತೀಚೆಗೆ ನಡೆದ ಸಮಾರಂಭದಲ್ಲಿ ದ್ವಾರಕೀಶ್ ತಮ್ಮಲ್ಲಿರುವ ಇನ್ನಷ್ಟು ಕನಸುಗಳ ಬಗ್ಗೆ ಮಾತನಾಡಿದರು. ಮುಖ್ಯವಾಗಿ ಅವರ 50ನೇ ನಿರ್ಮಾಣದ ಚಿತ್ರವಾಗಿ 'ಸಲಾಂ ಸಿನಿಮಾ' ಎಂಬ ಕಥೆಯನ್ನು ರೆಡಿ ಮಾಡಿದ್ದಾರಂತೆ. ಈ ಚಿತ್ರಕ್ಕೆ ಶಿವರಾಜ್‌ಕುಮಾರ್ ಸೂಕ್ತವಾದ ನಾಯಕ ನಟ ಎಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಸದ್ಯದಲ್ಲೇ ಈ ಬಗ್ಗೆ ಅಧಿಕೃತವಾಗಿ ಘೋಷಿಸುವ ಹುಮ್ಮಸ್ಸಿನಲ್ಲಿದ್ದಾರೆ ದ್ವಾರಕೀಶ್.


ಇವರ ಕನಸಿನ ಇನ್ನೆರಡು ಚಿತ್ರಗಳೆಂದರೆ 'ಕರ್ನಾಟಕ ವೈಭವ' ಮತ್ತು 'ಆಲದ ಮರ'.



ವಾಸ್ತವವಾಗಿ 'ಆಲದ ಮರ' ಚಿತ್ರವನ್ನು ತನ್ನ ಆಪ್ತಮಿತ್ರ ವಿಷ್ಣುವರ್ಧನ್ ಅವರಿಗಾಗಿ ದ್ವಾರಕೀಶ್ ರಚಿಸಿದ್ದರು. ಆದರೆ ವಿಷ್ಣುವರ್ಧನ್ ನಿಧನದ ನಂತರ ಈ ಕಥೆಯ ಬಗ್ಗೆ ದ್ವಾರಕೀಶ್‌ಗೆ ಅಷ್ಟೊಂದು ಆಸಕ್ತಿಯೇ ಇರಲಿಲ್ಲವಂತೆ. ಆದರೆ ಈಗ ಯಾವುದೇ ಕಾರಣಕ್ಕೂ ಈ ಅದ್ಭುತ ಕಥಾವಸ್ತುವನ್ನು ಹಾಗೆಯೇ ಬಿಡಬಾರದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಅದರಂತೆ ಮಲಯಾಳಂ ಚಿತ್ರರಂಗದ ಸೂಪರ್‌ಸ್ಟಾರ್‌ಗಳಾದ ಮಮ್ಮುಟ್ಟಿ ಅಥವಾ ಮೋಹನ್‌ಲಾಲ್ ಇವರಿಬ್ಬರಲ್ಲಿ ಯಾರಾದರೊಬ್ಬರನ್ನು ಆಯ್ಕೆ ಮಾಡಿ 'ಆಲದ ಮರ' ಚಿತ್ರವನ್ನು ಕನ್ನಡ ಕುಲಕೋಟಿಗೆ ಅರ್ಪಿಸುವ ಯೋಜನೆಯನ್ನು ದ್ವಾರಕೀಶ್ ಹಾಕಿಕೊಂಡಿದ್ದಾರೆ.

ಮತ್ತೊಂದೆಡೆ 'ಕರ್ನಾಟಕ ವೈಭವ' ಎಂಬ ಚಿತ್ರವನ್ನೂ ನಿರ್ಮಿಸಬೇಕೆಂಬ ಸಂಕಲ್ಪವನ್ನು ಮಾಡಿಕೊಂಡಿದ್ದಾರಂತೆ. ಚಿತ್ರದ ಶೀರ್ಷಿಕೆ ಹೇಳುವಂತೆ ಇದು ಕರ್ನಾಟಕದ ವೈಭವವನ್ನು ಸಾರುವ ಚಿತ್ರ. ಈ ಚಿತ್ರದ ಮೂಲಕ ಐದು ಅಥವಾ ಆರು ಮಹಾರಾಜರ ವೈಭವವನ್ನು ಹೇಳುವ ಇರಾದೆ ಅವರದು. ಆದರೆ ಒಂದೊಂದು ಮಹಾರಾಜರ ಕತೆಗೂ ಉಳಿದವರ ಕತೆಗೂ ಸಂಬಂಧ ಇರುವುದಿಲ್ಲವಂತೆ. ಈ ಪೌರಾಣಿಕ ಚಿತ್ರವನ್ನು ಮಾಡಬೇಕೆಂಬ ಕನಸು ಹೊಂದಿರುವ ದ್ವಾರಕೀಶ್‌ಗೆ ಕನ್ನಡದ ಐವರು ಸೂಪರ್‌ಸ್ಟಾರ್‌ಗಳ ಕಾಲ್‌ಶೀಟ್ ಬೇಕಂತೆ. ಈಗಾಗಲೇ ಇಬ್ಬರು ನಾಯಕ ನಟರು ದ್ವಾರಕೀಶ್ ಅವರ ಐಡಿಯಾಗೆ ತಲೆದೂಗಿದ್ದಾರಂತೆ. ಇಲ್ಲಿ ಹಿರೋಗಳ ಕ್ಲಾಷ್ ಇಲ್ಲದಿರುವ ಕಾರಣ ಉಳಿದ ಮೂವರು ಕೂಡ ಒಪ್ಪುವ ಸಾಧ್ಯತೆ ಇದೆ ಎಂಬುದು ದ್ವಾರಕೀಶರ ಆತ್ಮವಿಶ್ವಾಸ. ಈ ಚಿತ್ರ ಸೆಟ್ಟೇರಿದರೆ ಖಂಡಿತವಾಗಿಯೂ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಒಂದು ಹೊಸ ದಾಖಲೆ ನಿರ್ಮಾಣವಾಗುವ ಸಾಧ್ಯತೆಯಿದೆ.





ದ್ವಾರಕೀಶ್ ತಮ್ಮ 70ನೇ ವಯಸ್ಸಿನಲ್ಲೂ ಇಂತಹ ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಕ್ರಿಯಾಶೀಲರಾಗಿ ಉತ್ಸಾಹದಿಂದ ಓಡಾಡುತ್ತಿರುವುದು ನಿಜಕ್ಕೂ ಈಗಿನ ತಲೆಮಾರಿನ ನಿರ್ಮಾಪಕರಿಗೆ ಒಂದು ಪಾಠ ಎಂದೇ ಹೇಳಬೇಕು.


• ಶ್ರೆಸ್ಸೈ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 26-09-2012

ಚುನಾವಣೆ ಮೇಲೆ ರಾಕ್-ಪಾಟೀಲ್ ಪ್ರಭಾವ...

ಕನ್ನಡ ಚಿತ್ರರಂಗದಲ್ಲಿ - ಅದರಲ್ಲೂ ಮುಖ್ಯವಾಗಿ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ - ತೆರೆಮರೆಯಲ್ಲಿ ಗುದ್ದಾಟ ನಡೆಯುತ್ತಿದೆ. ಇದು ಹೊಸ ವಿಷಯವೇನೂ ಅಲ್ಲದಿದ್ದರೂ ಈ ಬಾರಿಯ ಈ ಗುದ್ದಾಟ ಅತಿರೇಕಕ್ಕೆ ಹೋಗುವ ಸಾಧ್ಯತೆಗಳು ಕಾಣಿಸುತ್ತಿವೆ.





ನಿರ್ಮಾಪಕರಾದ ರಾಕ್‌ಲೈನ್ ವೆಂಕಟೇಶ್ ಮತ್ತು ಬಸಂತ್‌ಕುಮಾರ್ ಪಾಟೀಲ್ ನಡುವೆ ನಡೆದ ಸಣ್ಣದೊಂದು ಭಿನ್ನಾಭಿಪ್ರಾಯ ಮತ್ತು ಮನಸ್ತಾಪ ಇಂದು ಇಡೀ ಉದ್ಯಮವನ್ನೇ ಅಲ್ಲಾಡಿಸುತ್ತಿದೆ. ಬಸಂತ್‌ಕುಮಾರ್ ಪಾಟೀಲ್ ಎರಡು ವರ್ಷದ ಹಿಂದೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದಾಗ ಅವರ ಕಮಿಟಿಯಲ್ಲಿದ್ದ ರಾಕ್‌ಲೈನ್ ವೆಂಕಟೇಶ್ ಪಾಟೀಲರಿಗೆ ಮುಖಭಂಗ ಮಾಡಿದ್ದರಂತೆ.

ಯಾವುದೋ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ರಾಜಿನಾಮೆ ನೀಡಬೇಕು ಎಂದು ಅಂದು ರಾಕ್‌ಲೈನ್ ಪಟ್ಟು ಹಿಡಿದಿದ್ದರು. ಕೊನೆಗೆ ಉದ್ಯಮದ ಹಿತೈಷಿಗಳೆಲ್ಲ ಒಟ್ಟು ಸೇರಿ ಬಸಂತ್‌ಕುಮಾರ್ ಪಾಟೀಲ್‌ರ ಅವಧಿ ಪೂರ್ಣಗೊಳ್ಳಲು ಅವಕಾಶ ಮಾಡಿಕೊಟ್ಟಿದ್ದರು. ಆದರೂ ಅವರಿಬ್ಬರ ನಡುವಿನ ಮನಸ್ತಾಪ ದಿನದಿಂದ ದಿನಕ್ಕೆ ಹದಗೆಡುತ್ತಲೇ ಇತ್ತು. ಈಗ ರಾಕ್‌ಲೈನ್ ವೆಂಕಟೇಶ್ ಅತ್ತ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷರಾಗಿಯೂ ಇತ್ತ ಕಲಾವಿದರ ಸಂಘದ ಕಾರ್ಯದರ್ಶಿಯಾಗಿಯೂ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ವಾಣಿಜ್ಯ ಮಂಡಳಿಯ ಕಾನೂನಿನಪ್ರಕಾರ ಒಬ್ಬ ವ್ಯಕ್ತಿ ಉದ್ಯಮದಲ್ಲಿ ಎರಡು ಹುದ್ದೆಗಳನ್ನು ಏಕಕಾಲದಲ್ಲಿ ನಿಭಾಯಿಸುವಂತಿಲ್ಲ. ಈ ಒಂದು ಕಾನೂನನ್ನು ಮುಂದಿಟ್ಟುಕೊಂಡು ಈಗ ಬಸಂತ್‌ಕುಮಾರ್ ಪಾಟೀಲ್ ತನ್ನ ವರಸೆಯನ್ನು ಆರಂಭಿಸಿದ್ದಾರೆ. ರಾಕ್‌ಲೈನ್ ಅವರು ಎರಡು ಹುದ್ದೆಯಲ್ಲಿ ಕೆಲಸ ನಿರ್ವಹಿಸಿರುವುದು ಸರಿಯಲ್ಲ ಎಂದು ಪಾಟೀಲ್‌ರು ಮಂಡಳಿಗೆ ದೂರು ನೀಡಿದ್ದಾರೆ. ಈ ದೂರನ್ನು ಸ್ವೀಕರಿಸಿದ ಅಧಿಕಾರಿಗಳು ರಾಕ್‌ಲೈನ್ ಯಾವುದಾದರೂ ಒಂದು ಹುದ್ದೆಯಲ್ಲಿ ಮುಂದುವರಿಯಬೇಕು ಎಂದು ಸೂಚಿಸಿದ್ದಾರಂತೆ.

ಸೋ ಫಾರ್ ರಾಕ್‌ಲೈನ್ ರಾಜೀನಾಮೆಯನ್ನು ಇನ್ನೂ ನೀಡಿಲ್ಲ, ಅವರು ಕೂಡ ಕಾನೂನಿನಲ್ಲಿ ಏನೇನು ಅವಕಾಶವಿದೆ ಎಂಬುದನ್ನು ಅಧ್ಯಯನ ನಡೆಸುತ್ತಿದ್ದಾರೆ. ಇವರಿಬ್ಬರ ವೈಯಕ್ತಿಕ ದ್ವೇಷದ ನೆಪದಲ್ಲಿ ಈಗ ಉದ್ಯಮದಲ್ಲಿ ಒಂದಿಷ್ಟು ಜನ ರಾಕ್‌ಲೈನ್ ಹಿಂದೆಯೂ, ಇನ್ನೊಂದಿಷ್ಟು ಜನ ಪಾಟೀಲರ ಹಿಂದೆಯೂ ಜಮಾಯಿಸಿರುವುದು ಆತಂಕಕಾರಿ ವಿಷಯ.

ಸದ್ಯದಲ್ಲೇ ನಡೆಯಲಿರುವ ಚಲನಚಿತ್ರ ವಾಣಿಜ್ಯ ಮಂಡಳಿಯ ಚುನಾವಣೆಯ ಮೇಲೂ ಈ ಪ್ರಕರಣ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಕೇಳಿಬರುತ್ತಿದೆ.

ಒಂದೇಟಿಗೆ ಎರಡು... ಮಂಜು ಲೆಕ್ಕಾಚಾ...

'ಗಂಡುಗಲಿ' ಎಂಬ ಬಿರುದನ್ನು ಪಡೆದಿರುವ ನಿರ್ಮಾಪಕ ಕೆ.ಮಂಜು ಇಡೀ ಉದ್ಯಮ ಬೆಚ್ಚಿಬೀಳುವ ರೀತಿಯಲ್ಲಿ ಅನೇಕ ಹೊಸ ಹೊಸ ಸಾಹಸಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಇತ್ತೀಚೆಗಷ್ಟೇ ಅವರು ತಮಿಳು ಚಿತ್ರವೊಂದನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಲು ಸಹಿ ಹಾಕುವ ಮೂಲಕ ಗಾಂಧಿನಗರದಲ್ಲಿ ಅಚ್ಚರಿ ಮೂಡಿಸಿದ್ದಾರೆ. ಈ ಚಿತ್ರದ ಹೆಸರು 'ಸುಂದರಪಾಂಡ್ಯನ್'. ನಾಯಕ ನಟ ಶಶಿಕುಮಾರ್.

ಈ ಚಿತ್ರವನ್ನು ಮಂಜು ಕರ್ನಾಟಕದಲ್ಲಿ ಬಿಡುಗಡೆ ಮಾಡಲು ಒಂದು ಕಾರಣವಿದೆ. ಅದೇನೆಂದರೆ ಸದ್ಯಕ್ಕೆ ಶಶಿಕುಮಾರ್ ತಮಿಳುನಾಡಿನಲ್ಲಿ ಅತ್ಯಂತ ಯಶಸ್ವಿ ನಾಯಕನಟ. ಆತ ನಟಿಸಿ, ನಿರ್ದೇಶಿಸಿದ ಬಹುತೇಕ ಎಲ್ಲ ಚಿತ್ರಗಳೂ ತಮಿಳು ಚಿತ್ರರಂಗದಲ್ಲಿ ಜಯಭೇರಿ ಬಾರಿಸಿವೆ. ಇಂತಹ ಯಶಸ್ವಿ ನಾಯಕನ ಕಾಲ್‌ಶೀಟ್ ಮಂಜುಗೆ ಸಿಕ್ಕಿದೆ. ಈ ಮೂಲಕ ಕನ್ನಡದ ಗಂಡುಗಲಿ ಎಂಬ ಖ್ಯಾತಿಯ ಮಂಜು ತಮಿಳು ಚಿತ್ರರಂಗದಲ್ಲೂ ನಿರ್ಮಾಪಕರಾಗಿ ಬೇರೂರಲಿದ್ದಾರೆ.

ಈ ಶಶಿಕುಮಾರ್‌ಗೂ ಕನ್ನಡ ಚಿತ್ರರಂಗಕ್ಕೂ ಪರೋಕ್ಷವಾದ ನಂಟಿದೆ. ಅದೇನೆಂದರೆ ಶಶಿಕುಮಾರ್ ನಟಿಸಿ ಗೆದ್ದ ಚಿತ್ರಗಳನ್ನೆಲ್ಲ ಕನ್ನಡದವರು ರಿಮೇಕ್ ಮಾಡಿದ್ದಾರೆ. ಅದರಲ್ಲೂ ಶಶಿ ನಟಿಸಿದ್ದ ಚಿತ್ರಗಳು ಕನ್ನಡದ ಅವತರಣಿಕೆಯಲ್ಲಿ ಪುನೀತ್‌ರಾಜ್ ಕುಮಾರ್ ನಟಿಸಿದ್ದಾರೆ. ಈಗಾಗಲೇ ಪುನೀತ್ 'ಹುಡುಗರು' ಚಿತ್ರ ತಮಿಳಿನ 'ನಾಡೋಡಿಗಳ್' ಚಿತ್... ಎಂಬುದನ್ನು ಇಲ್ಲಿ ಸ್ಮರಿಸಬಹುದು. ಇದರ ಜೊತೆ... ಈಗ ನಟಿಸುತ್ತಿರುವ 'ಯಾರೇ ಕೂಗಾಡಲಿ' ಚಿತ್ರ ... ಶಶಿಕುಮಾರ್ ನಟಿಸಿರುವ 'ಪೋರಾಲಿ' ಚಿತ್ರದ ರಿಮೇ... ಏಕೆ? ಸದ್ಯಕ್ಕೆ ಪ್ರೇಮ್ ನಟಿಸುತ್ತಿರುವ 'ಪ್ರೇಮ್ ಅಡ್ಡೆ'... ಶಶಿಕುಮಾರ್ ನಟಿಸಿ ತಮಿಳುನಾಡಿನಲ್ಲಿ ಜಯಭೇರಿ... 'ಸುಬ್ರಮಣ್ಯಪುರಂ' ಚಿತ್ರದ ಜೆರಾಕ್ಸ್ ಕಾಪಿ.

ಇಂತಹ ಶಶಿಕುಮಾರನ ಚಿತ್ರಗಳನ್ನು ಕನ್ನಡಕ್ಕೆ ಭ... ಬದಲು ನೇರವಾಗಿ ತಮಿಳಿನಲ್ಲೇ ಚಿತ್ರ ಮಾಡಲು ... ಮಂಜು ಧೈರ್ಯವನ್ನು ಮೆಚ್ಚಲೇಬೇಕು. ಅವರು ಈಗ ... ಹೊರಟಿರುವ ಚಿತ್ರ ತಮಿಳಿನಲ್ಲಿ ಗೆದ್ದರೆ ಅದರ ಕನ್... ಇಲ್ಲಿಯ ಯಾವುದೇ ನಾಯಕನಟ ಸುಲಭವಾಗಿ ... ಕೊಡುತ್ತಾರೆ ಎಂಬುದು ಮಂಜು ಲೆಕ್ಕಾ... ಒಂದೇ ಕಲ್ಲಿಗೆ ಎರಡು ಹಣ್ಣುಗಳನ್ನು ... ಹೊರಟಿರುವ ಮಂಜು ತಮಿ... ಚಿತ್ರರಂಗದಲ್ಲಿ ಹೇಗೆ ತನ್ನ ಜ... ಪ್ರದರ್ಶಿಸುತ್ತಾರೋ ನೋಡಬೇಕು.





ರ‍್ಯಾಂಬೋ ಶರಣ್ ಮುಂದೇನು?

ಕಳೆದ ವಾರ ಬಿಡುಗಡೆಯಾದ ಕಾಮಿಡಿಯನ್ ಶರಣ್ ನಾಯಕ ನಟನಾಗಿ ನಟಿಸಿರುವ 'ರ‍್ಯಾಂಬೊ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಚಿಗುರುತ್ತಿದೆ. ಈ ಚಿತ್ರ ಯಶಸ್ಸಿನತ್ತ ದಾಪುಗಾಲು ಹಾಕುತ್ತಿರುವುದನ್ನು ನೋಡಿದರೆ ಬಹುಶಃ ಹಾಸ್ಯನಟ ಕೋಮಲ್ ತರಹ ಶರಣ್ ಕೂಡ ಇನ್ನು ಮುಂದೆ ಹಾಸ್ಯನಟನ ಪಾತ್ರಗಳಿಗೆ ಗುಡ್‌ಬೈ ಹೇಳಬೇಕಾದ ಪರಿಸ್ಥಿತಿ ಉದ್ಭವವಾಗಬಹುದು.

ಒಂದಂತೂ ನಿಜ, ಈ ಚಿತ್ರ ಯಶಸ್ಸು ಕಾಣುವ ಮುಖಾಂತರ ಗಾಂಧಿನಗರದಲ್ಲಿ ಸದ್ಯ ಚಾಲ್ತಿಯಲ್ಲಿರುವ ಟ್ರೆಂಡ್ ಮುಂದುವರಿಯುತ್ತಿದೆ. ಅನಾಮಿಕರು ಅಥವಾ ತಾರಾಮೌಲ್ಯ ಇಲ್ಲದ ಕಲಾವಿದರು ನಟಿಸಿರುವ ಚಿತ್ರಗಳು ಇತ್ತೀಚಿಗೆ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತಿರುವುದು ಒಂದು ಹೊಸ ಟ್ರೆಂಡ್ ಆಗಿದೆ. ಉದಾಹರಣೆಗೆ ಧ್ರುವ ಸರ್ಜ ನಟಿಸಿದ 'ಅದ್ದೂರಿ' ಚಿತ್ರ, ಅದಕ್ಕಿಂತ ಮೊದಲು ಕೋಮಲ್ ನಟಿಸಿದ 'ಗೋವಿಂದಾಯ ನಮಃ' ಹಾಗೂ ಹೊಸಬರೇ ತುಂಬಿತುಳುಕುತ್ತಿದ್ದ 'ದಂಡುಪಾಳ್ಯ' ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಗೆದ್ದು ನಿರ್ಮಾಪಕರಿಗೆ ಲಾಭ ತಂದುಕೊಟ್ಟಿವೆ. ಇದೇ ಸಂದರ್ಭದಲ್ಲಿ ದೊಡ್ಡ ದೊಡ್ಡ ತಾರೆಯರು ನಟಿಸಿದ್ದ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿ ನಿರ್ಮಾಪಕರಿಗೆ ನಷ್ಟ ಉಂಟುಮಾಡಿವೆ. ಈಗ ಶರಣ್ ನಟಿಸಿರುವ 'ರ‍್ಯಾಂಬೊ' ಚಿತ್ರ ಕೂಡ ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿರುವುದನ್ನು ನೋಡಿದರೆ ಈ ವರ್ಷ ಸಣ್ಣ ತಾರೆಯರದ್ದೇ ರಾಜ್ಯಭಾರ ಎಂದೆನಿಸುತ್ತದೆ.

ಎರಡು ವರ್ಷಗಳ ಹಿಂದೆಯೇ ಶರಣ್ ನಾಯಕನಟನಾಗಿ ತನ್ನ ಅದೃಷ್ಟವನ್ನು ಪರೀಕ್ಷಿಸಿದ್ದರು. ಆದರೆ ಅದು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ ನಂತರ ಅವರು ಮತ್ತೆ ಹಾಸ್ಯ ಮತ್ತು ಪೋಷಕ ಪಾತ್ರಗಳನ್ನು ನಿರ್ವಹಿಸಲಾರಂಭಿಸಿದ್ದರು. ಈ ಬಾರಿ ಸ್ವತಃ ತಾವೇ ಚಿತ್ರ ನಿರ್ಮಾಣಕ್ಕೆ ಇಳಿದು ನಾಯಕನಟನಾಗಿ ನಟಿಸಿ, ಗೆಲುವಿನ ರುಚಿಯನ್ನು ಕಂಡಿರುವ ಶರಣ್ ಮುಂದೆ ಯಾವ ಹಾದಿಯಲ್ಲಿ ಸಾಗುತ್ತಾರೋ ನೋಡಬೇಕು.





ಕಡ್ಡಿಪುಡಿ ಐಂದ್ರಿತಾ ವಿಶೇಷ

'ಕಡ್ಡಿಪುಡಿ' ಚಿತ್ರದಲ್ಲಿ ಶಿವರಾಜ್‌ಕುಮಾರ್ ಜೊತೆಗೆ ರಾಧಿಕಾ ಪಂಡಿತ್ ನಾಯಕಿಯಾಗಿ ನಟಿಸುತ್ತಿರುವುದು ನಿಮಗೆಲ್ಲ ಗೊತ್ತಿರುವ ವಿಚಾರ. ಈ ಚಿತ್ರವನ್ನು ನಿರ್ದೇಶಿಸುತ್ತಿರುವ ಸೂರಿ ಇದೀಗ ತನ್ನ ತಾರಾಗಣ ಪಟ್ಟಿಗೆ ಐಂದ್ರಿತಾ ರೈ ಎಂಬ ನಾಯಕಿಯನ್ನೂ ಸೇರಿಸಿಕೊಂಡಿದ್ದಾರೆ. ಅಂದಹಾಗೆ, ಕನ್ನಡದ ನಾಯಕಿಯರು ಐಟಂಸಾಂಗ್‌ಗಳಲ್ಲಿ ಕಾಣಿಸಿಕೊಳ್ಳುವುದೇ ಒಂದು ಹಿರಿಮೆ ಎಂದು ಭಾವಿಸಿರುವ ಇವತ್ತಿನ ಸಂದರ್ಭದಲ್ಲಿ ಐಂದ್ರಿತಾ ರೈ ಕೂಡ ಐಟಂಸಾಂಗ್‌ನಲ್ಲಿ ಕುಣಿಯಲಿದ್ದಾಳೋ ಅಥವಾ ಗಮನಾರ್ಹ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೋ ಎಂಬುದು ಗೊತ್ತಾಗಿಲ್ಲ.

ಐಂದ್ರಿತಾ ರೈ ಬಗ್ಗೆ ಹೇಳುವುದಾದರೆ ಸೂರಿ ನಿರ್ದೇಶನದ ಜಂಗ್ಲಿ ಚಿತ್ರದಲ್ಲಿ ದುನಿಯಾ ವಿಜಿ ಜೊತೆಗೆ 'ಹಳೆ ಪಾತ್ರೆ, ಹಳೆ ಕಬ್ಬಿಣ, ಹಳೆ ಪೇಪರ್ ತರ ಹೋಯಿ...' ಎಂಬ ಹಾಡಿನಲ್ಲಿ ಐಟಂ ಸಾಂಗ್ ಗರ್ಲ್ಸ್‌ಗಳನ್ನು ಮೀರುವ ರೀತಿಯಲ್ಲಿ ತುಂಡುಬಟ್ಟೆಯನ್ನು ಧರಿಸಿ ಕುಣಿದಿದ್ದಳು. ಆ ಹಾಡು ಜನಪ್ರಿಯವಾದ ನಂತರ ಐಂದ್ರಿತಾ ರೈ ಬಹುತೇಕ ಹೆಚ್ಚಿನ ಚಿತ್ರಗಳಲ್ಲಿ ಅದೇ ಮಾದರಿಯಲ್ಲಿ ಕಾಣಿಸಿಕೊಂಡಿದ್ದಳು ಕೂಡ. ಹೀಗಾಗಿ ಐಂದ್ರಿತಾ ಯಾವುದೇ ಪಾತ್ರಗಳಲ್ಲಿ ಕಾಣಿಸಿಕೊಂಡರೂ ಆಕೆ ಈಗಿನ ಜಮಾನಾದ ಹುಡುಗಿಯರಂತೆ ಬಿಂದಾಸಾಗಿ ಕಾಣಿಸಿಕೊಳ್ಳುತ್ತಾಳೆ ಎಂಬುದರಲ್ಲಿ ಸಂಶಯವಿಲ್ಲ, ಇದಕ್ಕಿಂತ ಮಿಗಿಲಾಗಿ ನಿರ್ದೇಶಕ ಸೂರಿಯವರ ಅಚ್ಚುಮೆಚ್ಚಿನ ನಟಿ ಈಕೆ ಆಗಿರುವುದರಿಂದ ಐಂದ್ರಿತಾ ರೈಳನ್ನು ಅವರು 'ಕಡ್ಡಿಪುಡಿ'ಯಲ್ಲಿ 'ವಿಶೇಷ'ವಾಗಿ ತೋರಿಸಿದರೂ ಆಶ್ಚರ್ಯವಿಲ್ಲ.

• ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No.9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com